ಶ ಮಾ. ನಿಸ್ತ್ಯ

ಜೂಲಿಯಸ್ ಸೀಜರ್

ನಾಟಕ ಕಥೆ

3(110)

744

ಜೂಲಿಯಸ್ ಸೀಸರ್.

(ವಿಲ್ಲಿಯಂ ಷೇಕ್ಸ್‌ಪಿಯರ್ ಮಹಾಕವಿಯ
"ಜೂಲಿಯಸ್ ಸೀಸರ್" ನಾಟಕದ ಭಾಷಾಂತರ.)

[ಲಘು ಟಿಪ್ಪಣಿ ಸಮೇತವಾಗಿ]

ಪ್ರೊ. ಎಸ್. ಮಹತ್ತಣ್ಣ.

(ಎಲ್ಲಾ ಹಕ್ಕುಗಳೂ ಕಾದಿರಿಸಲ್ಪಟ್ಟಿವೆ)

1987.

745

— ಜೂಲಿಯಸ್ ಸೀಸರ್ —

ನಾಟಕ ಕಥೆ (ಸಂಕ್ಷೇಪವಾಗಿ)

ರೋಮಿನ ಜನರು ತುಂಬಾ ಸಂತೋಷಗೊಂಡಿರುವರು. ಜೂಲ್ಯಸ್ ಸೀಸರನು ಪಾಂಪೆಯ ಪುತ್ರರನ್ನು ಯುದ್ಧದಲ್ಲಿ ಸೋಲಿಸಿದ್ದರಿಂದ ಆ ವಿಜಯೋತ್ಸವದ ಸಂಬಂಧವಾಗಿ ಜನರೆಲ್ಲ ತಾವಾಗಿಯೇ ಒಂದು ದಿನ ರಜೆ ತೆಗೆದುಕೊಂಡಿದ್ದಾರೆ. ಸೀಸರನು ವಿಜೇತನಾಗಿ ಬರುವನು. ಆದರೆ ಇಬ್ಬರು, ಫ್ಲೇವ್ಯಸ್ ಮತ್ತು ಮರುಲ್ಲಸ್, ರೋಮನ್ ನಗರ ನಾಯಕರು ಆ ಜನರನ್ನು ಹಿಂದಕ್ಕೆ ಓಡಿಸುತ್ತಾರೆ. ರೋಮಿನ ಪ್ರಜಾಪ್ರಭುತ್ವವನ್ನು ಕಿತ್ತೊಗೆದು ರಾಜನಾಗಲು ಬಯಸುವ ಸೀಸರನನ್ನು ಹಿಂಬಾಲಿಸುವುದರ ಅರ್ಥವೇನು?

ಸೀಸರನಾದರೋ ಅತ್ಯುತ್ಸಾಹದಿಂದ ಜನರೊಡಗೂಡಿ ಆ ಲೂಪರ್ಕಲ್ ಹಬ್ಬದ ದಿನ ಬೀದಿಗಾಗಿ ಬರುತ್ತಿರುವನು. ಒಬ್ಬ ಭವಿಷ್ಯ ನುಡಿಯುವವನು ಅವನನ್ನು ಮಾರ್ಚ್ 15ನೇ ದಿನ ಎಚ್ಚರಿಕೆಯೆಂದು ಹೇಳುತ್ತಾನೆ. ಜೂಲಿಯಸ್ ಸೀಸರನು ಆ ಭವಿಷ್ಯವಾಣಿಯನ್ನು ಉಪೇಕ್ಷಿಸುವನು. ಆ ಮೆರವಣಿಗೆಯಲ್ಲಿದ್ದ ಮಾರ್ಕಸ್ ಬ್ರೂಟಸ್ ಮತ್ತು ಕೈಯಸ್ ಕ್ಯಾಸ್ಯಸ್ ಎಂಬ ರೋಮಿನ ಶಾಸಕರು ಹಿಂದೆಯೇ ನಿಂತು ಮಾತಾಡುವರು. ಕ್ಯಾಸ್ಯಸನು ಸೀಸರನ ವಿರೋಧಿ. ಅವನು ಬ್ರೂಟಸನೊಡನೆ ಸೀಸರನ ವಿರೋಧವಾಗಿ ಪಿತೂರಿ ಹೂಡಲು ಪ್ರಾರಂಭಿಸುವರು. ಕ್ಯಾಸ್ಯಸನು ಬ್ರೂಟಸನನ್ನು ಒಪ್ಪಿಸುತ್ತಾನೆ.

ಇಷ್ಟರಲ್ಲಿ ಜೂಲಿಯಸ್ ಸೀಸರನು ದೂರದಿಂದಲೇ ಕೈಯಸ್ ಕ್ಯಾಸ್ಯಸನನ್ನು ನೋಡಿ ಅವನನ್ನು ತನಗೆ ನಂಬುವುದೇ ಕಷ್ಟವೆಂದು ಮಾರ್ಕಸ್ ಅಂತೋನಿಯೊಡನೆ ಹೇಳುತ್ತಾನೆ. ಅಷ್ಟರಲ್ಲಿ ಕ್ಯಾಸ್ಕನು ಬ್ರೂಟಸನೊಡನೆ ಮತ್ತು ಕ್ಯಾಸ್ಯಸನೊಡಗೂಡಿ ಸಭೆಯಲ್ಲಿ ಅಂತೋನಿಯು ಸೀಸರನಿಗೆ ಮೂರು ಬಾರಿ ಕಿರೀಟವನ್ನು ಒಪ್ಪಿಸಿದನೆಂದೂ ಮೂರು ಬಾರಿಯೂ ಅವನು ಅದನ್ನು ತಿರಸ್ಕರಿಸಿದನೆಂದೂ ವಾರ್ತೆಯನ್ನರುಹುತ್ತಾನೆ.

ಆ ದಿನ ರಾತ್ರಿ ಬಿರುಗಾಳಿ, ಗುಡುಗು ಮಿಂಚುಗಳು ಹೆಚ್ಚು ತೋರ್ಪಡಿಸಿಕೊಂಡುವು. ಕ್ಯಾಸ್ಯಸನು ಆ ಕ್ಯಾಸ್ಕನಿಗೂ ತನ್ನ ಪಿತೂರಿಯ ತಂತ್ರವನ್ನು ಹೇಳಿ ಅವನನ್ನೂ ಒಪ್ಪಿಸುತ್ತಾನೆ. ಆ ರಾತ್ರಿ ಅನೇಕ ಅನಿಷ್ಟಸೂಚಕ ಘಟನೆಗಳು ಕಾಣಿಸಿಕೊಳ್ಳುತ್ತವೆ. ಇಷ್ಟರಲ್ಲಿ ಸಿನ್ನಾ ಎಂಬುವನೂ ಕ್ಯಾಸ್ಯಸ್ ಮತ್ತು ಕ್ಯಾಸ್ಕ ಇವರೊಡನೆ ಸೇರುತ್ತಾನೆ. ಬ್ರೂಟಸನಾದರೋ ತಾನೊಬ್ಬನೇ ಇದರ ಬಗ್ಗೆ ಆಲೋಚಿಸುವನು. ಜೂಲಿಯಸ್ ಸೀಸ

ರನು ತನ್ನ ಮಿತ್ರನಾದರೂ ರೋಮನ್ ಸಾಮ್ರಾಜ್ಯದ ಹಿತಕ್ಕಾಗಿ ತನ್ನ ಪಾತ್ರವೇ ನೆಂದು ತಾನಾಗಿಯೇ ಮಾಡಿಸುತ್ತಾನೆ, ಅಷ್ಟರಲ್ಲಿ ಕ್ಯಾಸಿಯಸ್, ಕ್ಯಾಸ್ಯಸ್, ಕ್ಯಾಸ್ಕಾ ಮತ್ತು ಸಿನ್ನಾ ಇವರೂ ಅವನ ಬಳಿಗೆ ಹೋಗುವರು.

ಆ ಮಧ್ಯರಾತ್ರಿಯಲ್ಲಿ ಪಿತೂರಿಗಾರರು ಹೋದ ಮೇಲೆ ಮಾರ್ಕ ಸ್ ಬ್ರೂಟಸನು ತನ್ನ ಹೆಂಡತಿ ಪೋರ್ಶ್ಯಾಳು ಆವೇಶದೊ ಅನುಮಾನ ದಿಂದ ಇದ್ದುದನ್ನು ಕಂಡನು. ಅವಳು ಆವೇಶದ ಆತಂಕದಿಂದ ಬಾ ಧೆಗೆ ಒಳಗಾಗಿರುವಳು. ಮರುದಿನ ಬೆಳಿಗ್ಗೆ ಬ್ರೂಟಸನನ್ನು ಮನೆಯಿಂ ದ ಹೊರ ಹೋಗಬೇಡವೆಂದು ತಡೆಯುತ್ತಾಳೆ. ಅವನ ಮನಸ್ಸಿನಲ್ಲಿ ಇರುವ ಕಳವಳವೆಲ್ಲವನ್ನು ಅರ್ಧಾಂಗಿಯಾದ ನನಗೆ ಹೇಳಲೇ ಬೇಕೆಂದು ಪತಿಗೆ ಹೇಳುತ್ತಾಳೆ.

ಇಷ್ಟರಲ್ಲಿ ಜೂಲಿಯಸ್ ಸೀಸರನ ಹೆಂಡತಿ ಕ್ಯಾಲಿಫೂ ರ್ನಿಯಾಳೂ ಹಿಂದಿನ ರಾತ್ರಿ ತಾನೊಂದು ದುಃಸ್ವಪ್ನವನ್ನು ಕಂಡಿ ನೆಂದೂ ಸೀಸರನ ಪ್ರಾಣಾಪಾಯವಾಗಬಹುದೆಂದೂ ಅವನಿಗೆ ತಿಳಿ ಸುತ್ತಾಳೆ. ಆ ದಿನ ಮನೆಯಿಂದ ಹೊರಡಬೇಡವೆಂದು ಪತಿಗೆ ವಿನಂತಿಸುತ್ತಾಳೆ. ಆದರೇನು, ಆ ಪಿತೂರಿಗಾರರೇ ಆದ ಸ್ನೇಹಿತರು ಸೀಸರನನ್ನು ಶಾಸನ ಸಭಾಭವನಕ್ಕೆ ಠೀವಿಯಿಂದ ಕರೆದುಕೊಂಡು ಹೋಗಲು ಬರುತ್ತಾರೆ, ಜೂಲಿಯಸ್ ಸೀಸರನು ಅವರೊಡನೆ ಹೋಗುತ್ತಾನೆ, ಅನಂತರ ಶಾಸನ ಸಭಾಭವನದಲ್ಲಿ ಕ್ಯಾಸ್ಕ, ಕ್ಯಾಸ್ಯಸ್, ಬ್ರೂಟಸ್ ಇವರೆಲ್ಲ ಸೇರಿ ಅವನನ್ನು ಕೊಲ್ಲುತ್ತಾರೆ.

ಪರಿಣಾಮವಾಗಿ ಜನರು ಕಳವಳಗೊಂಡರು. ಮಾರ್ಕ ಅಂತೋನಿಯು ತನ್ನ ಮಿತ್ರನಂತಿದ್ದ ಸೀಸರನ ಕೊಲೆಯಾದುದನ್ನು ಕಂಡು ಆ ಸೀಸರನ ವಿಷಯವಾಗಿ ಜನಕ್ಕೆ ಎರಡು ಮಾತುಗಳ ನ್ನು ಹೇಳಬೇಕೆಂದು ಬ್ರೂಟಸನಿಗೆ ಹೇಳುವನು. ಬ್ರೂಟಸನು ಪ್ರಜಾಹಿತದ ದೃಷ್ಟಿಯಿಂದ ತಾನು ಪಿತೂರಿಗಾರರೊಡನೆ ಸೇರಿದ್ದು ದು ಸರಿಯೆಂದೇ ಭಾವಿಸಿಕೊಳ್ಳುವನು. ಮಾರ್ಕ ಅಂತೋನಿ ಮತ್ತು ಮಾರ್ಕಸ್ ಬ್ರೂಟಸ್ ಇವರೀರ್ವರೂ ಸೀಸರನ ಶವಸಂಸ್ಕಾ ರದ ವೇಳೆಗೆ ನೆರೆದಿದ್ದ ಸಭೆಯಲ್ಲಿ ಮಾತಾಡಿದರು, ಆದರೆ ಅಂತೋನಿಯ ಮಾತುಗಳು ಜನವನ್ನು ಪುಲಕಿತಗೊಳಿಸಿತು. ಪರಿ ಣಾಮವಾಗಿ ಜನರು ಆ ಪಿತೂರಿಗಾರರೆಲ್ಲ ದೇಶದ್ರೋಹಿಗಳು ಎಂದು ಅವರನ್ನು ಬೆನ್ನಟ್ಟಿದರು. ಅಂತೋನಿಯಾದರೋ ಸೀಸರನು ಉದ್ದೇಶಿ ಸಿದ್ದನ್ನ ಜನೋಪಕಾರಿಯಾದುದನ್ನು ಆಧಾರ ಸಮೇತವಾಗಿ ಸ್ಫೂರ್ತಿಯಿಂದ ಮಾತಾಡಿ ಜನವನ್ನು ತನ್ನೆಡೆಗೆ ಸೆಳೆದನು.

ಇನ್ನೀಗ ಆ ಪಿತೂರಿಗಾರರ ಹತ್ಯೆ ಆಗಬೇಕೆಂದು ಜನವೂ ಮಾರ್ಕ ಅಂತೋನಿ, ಒಕ್ಟೇವ್ಯಸ್ ಸೀಸರ್ ಮೊದಲಾದ

ಪಕ್ಷಾತಸನೆ ಸೇರುವರು. ಅಷ್ಟರಲ್ಲಿ ಬ್ರೂಟಸ್ ಮತ್ತು ಕ್ಯಾಸ್ಯಸ್ ಇವರೂ ತಮ್ಮ ಕಡೆಯ ಜನವನ್ನು ಸೇರಿಸಿದರು. ಇಷ್ಟರಲ್ಲಿ ಬ್ರೂಟಸನ ಹೆಂಡತಿ ಪೋರ್ಷಿಯ ಬೆಂಕಿಯನ್ನು ನುಂಗಿ ಸಾಯುವಳು. ಪಿತೂರಿಗಾರರ ಒಗ್ಗಟ್ಟು ಸಡಿಲವಾಗತೊಡಗುವುದು. ಕ್ಯಾಸ್ಯಸ್ ಮತ್ತು ಬ್ರೂಟಸ್ ಇವರೇ ಒತ್ತೊತ್ತ ಹಳಿದುಕೊಳ್ಳುವರು. ಇವರ ಕಡೆಯ ಜನ ಹಲವರು ದಿಕ್ಕಾಪಾಲಾಗುವರು. ಹತಾಶಗೊಳ್ಳುವರು.

ಅಷ್ಟರಲ್ಲಿ ಮಾರ್ಕ್ ಆಂಟೊನಿ ಮತ್ತು ತರುಣ ಒಕ್ಟೇವಿಯಸ್ ಸೀಸರ್ ಇವರು ತಮ್ಮ "ಸೈನ್ಯ"ವನ್ನು ಸಂಘಟಿಸಿ ಪಿತೂರಿಗಾರರ ಪಕ್ಷದ ಹಲವು ಜನವನ್ನು ಕೊಲ್ಲುವರು. ಕೊನೆಗೊಂದೆಡೆಯಲ್ಲಿ ಕೈಯಸ್ ಕ್ಯಾಸ್ಯಸನು ತನಗೆ ಸೋಲು ನಿಶ್ಚಯವೆಂದು ಭಾವಿಸಿ ಆತ್ಮಹತ್ಯೆ ಮಾಡಿಕೊಳ್ಳುವನು. ಅದರನಂತರ ಇನ್ನೊಂದೆಡೆ ಮಾರ್ಕಸ್ ಬ್ರೂಟಸನು ತನ್ನ ಕಡೆಯ ಜನವೆಲ್ಲ ತನ್ನ ವಿರೋಧಿಗಳಿಂದ ಸೆರೆಹಿಡಿಯಲ್ಪಡುತ್ತಿದ್ದುದನ್ನು ಕಂಡು ಕಡೆಗೆ ಅವನೂ ತಾನಾಗಿಯೇ ಸಾಯುವನು.

ಅದರನಂತರ ಮಾರ್ಕ್ ಆಂಟೊನಿ ಮತ್ತು ಒಕ್ಟೇವಿಯಸ್ ಸೀಸರ್ ಇವರು ಮಾರ್ಕಸ್ ಬ್ರೂಟಸನ ಸೌಜನ್ಯದಿಂದ ಅವನಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿ, ತಮ್ಮ ವಿರೋಧವಿದ್ದ ಜನಸಾಮಾನ್ಯರನ್ನೆಲ್ಲ ತಮ್ಮ ಪಕ್ಷಕ್ಕೆ ಸೇರಿಸಿ ತಮ್ಮ ದೇಶದ ಭವಿಷ್ಯವನ್ನು ಒಗ್ಗಟ್ಟಿನಿಂದ ರೂಪಿಸುವ ಪಣತೊಟ್ಟರು. ತಾವು ಈ ಜಯದ ಗೆಲುವಿನಿಂದ ಸಂತೋಷಿಸುತೆಂದು ರಾಜ್ಯದಲ್ಲಿ ವಿಜಯೋತ್ಸವವನ್ನೇ ಆಚರಿಸುವರು!

"ಜೂಲ್ಯಸ್ ಸೀಸರ್" ನಾಟಕದಲ್ಲಿ ಹಾಸ್ಯ ಮತ್ತು ತತ್ವ ಕಥಾನಿರೂಪಣೆ!

"ಜೂಲಿಯಸ್ ಸೀಸರ್" ನಾಟಕವು ಕವಿ ವಿಲ್ಯಮ್ ಶೇಕ್ಸ್‌ಪಿಯರನ ನಾಲ್ಕಾರು ದುರಂತ ಅಸಮಾನ ನಾಟಕಗಳಲ್ಲಿ ಒಂದಾದರೂ ಇದರಲ್ಲಿ ಕವಿಯು ತನ್ನ ಸಹಜವಾದ ಹಾಸ್ಯ ಮಾಧ್ಯಮವನ್ನು ಅಲ್ಲಲ್ಲಿ ಚೆಲ್ಲುತ್ತಾ ಹೋಗಿದ್ದಾನೆ. ಆ ಕೆಲವು ಹಾಸ್ಯನಿರೂಪಣೆ ಹೇಗಿದೆಯೆಂದು ಸೂಚಿಸಲಿಕ್ಕೆ ಆ ಮೂಲಕ ನಾಟಕದ ಪರಿಚಯವನ್ನು ಮತ್ತೊಂದು ರೀತಿಯಲ್ಲಿ ಮಾಡುವ ಉದ್ದೇಶದಿಂದಲೂ ಈ ಕೆಳಗಿನಂತೆ ಕೆಲವು ಪ್ರಾಸಂಗಿಕ ಹಾಸ್ಯನುಡಿಗಳನ್ನು ಎತ್ತಿ ಇಲ್ಲಿ ಉದಾಹರಿಸಲಾಗಿದೆ. ಅವು ಬರೀ ಹಾಸ್ಯ ಮಾತ್ರವಲ್ಲ, ಒಂದು ರೀತಿಯಲ್ಲಿ ನುಡಿಮುತ್ತುಗಳೂ ಆಗಿವೆಯೆಂದು ಓದುಗರಿಗೆ ತೋರದಿರದು. ಈ ದುರಂತ ನಾಟಕದಲ್ಲೂ ಕವಿಯ ಹಾಸ್ಯರಸ ಸಂಜನೆಯು ಹೀಗೂ ಹಾರ್ದಿಕವಾಗಿದೆ.

ನಾಟಕದ ಪ್ರಾರಂಭದಲ್ಲಿಯೇ ಸೀಸರನ ಕೆಲವು ವಿರೋಧಿಗಳು ಸೀಸರನ ವಿಜಯೋತ್ಸವಕ್ಕೆ ಹೋಗುವ ಬೀದಿ ಜನವನ್ನು ಹಾಗೆ ಹೋಗದಂತೆ ತಡೆಯುತ್ತಾರೆ. ಆ ಜನದ ಪೈಕಿ ಒಬ್ಬ ಪಾದರಕ್ಷೆಯನ್ನು ಹೊಲಿಯುವವನು, "ಎತ್ತ, ನೀನಾರು?" ಎಂದೆಲ್ಲ ಅವನನ್ನು ಪ್ರಶ್ನಿಸಿದಾಗ ಅದಕ್ಕೆ ಅವನು.—

"ಸ್ವಾಮಿ, ನಾನು ಹಳೆ ಪಾದರಕ್ಷೆಗಳ ವೈದ್ಯ."

ಎಂಬುದಾಗಿ ಹೇಳುತ್ತಾನೆ. ಆದರೆ ಈ ಎಕ್ಕಡ ಹೊಲಿಯುವವನು ಬೀದಿ ಜನದ ಮುಂದಾಳು, "ಅದೇಕೆ ಹಾಗೆ ಜನವನ್ನೆಲ್ಲ ಬೀದಿಗಳಲ್ಲಿ ಸುತ್ತಾಡಿಸುವೆ" ಎಂದು ಕೇಳಿದಾಗ ಆ ಮೋಚ್ಚಿಗಾರನ ಪ್ರತ್ಯುತ್ತರ ಇದು!

"ಈ ಜನಗಳು ನಡೆಯುತ್ತ ಅವರ ಪಾದರಕ್ಷೆಗಳು ತೇಯ್ದಾಗ ನನಗೆ ಹೆಚ್ಚು ಕೆಲಸ ಸಿಕ್ಕುವುದು."

ಜನಸಾಮಾನ್ಯರಿಗೆ ರಾಜಕೀಯದ ವಿಚಾರವೆಲ್ಲ ಏನು ಗೊತ್ತು, ಇಂದಿನಂತೆಯೇ ಅಂದೂ ಸಹ! ಸೀಸರನು ಅತ್ತ ನಿರಂಕುಶ ಪ್ರಭು ಆದರೂ ಜನ ಅವನನ್ನು ಪೂಜಿಸುತ್ತಲೇ ಇದ್ದರು. ಆಗ ಮರುಲ್ಲಸ್ ಎಂಬ ಸೀಸರ್ ವಿರೋಧಿಯು ಅವರನ್ನು,—

"ಹಾ, ರೋಮಿನ ದೌರ್ಜನ್ಯ ಮೂರ್ತಿಗಳೇ, ಶಿಲಾರೂಪಗಳೇ,"

ಎಂದೆಲ್ಲ ಜರೆಯುತ್ತಾನೆ. ಕ್ಯಾಸಿಯಸ್ ಕ್ಯಾಸ್ಯಸನು ಒಬ್ಬ ಪ್ರಧಾನ ಪಿತೂರಿಗಾರನು. ಅವನು ಮಾರ್ಕಸ್ ಬ್ರೂಟಸನನ್ನು ತನ್ನ ಕಡೆಗೆ ಸೇರಿಸಿಕೊಂಡರೆ ಎಲ್ಲ ಸರಿಹೋಗುತ್ತದೆಂದು ಭಾವಿಸಿ ಅವನ ಬಳಿಗೆ ಹೋದನು. ಹಾಗೆ ಹೋಗಿ ಕ್ಯಾಸ್ಯಸನು ತನ್ನ ಮಿತ್ರನನ್ನು ಸಾಕಷ್ಟು ಹೊಗಳಿದನು. ಆಗ ಬ್ರೂಟಸನು ಅವನಿಗೆ ಹೀಗಂದನು.—

"ನನ್ನಲ್ಲಿ ಇಲ್ಲದುದನ್ನು ನನ್ನಲ್ಲಿದೆಯೆಂದು ಹೇಳುತ್ತಾ ನೀನು

ಅದಾವ ಅಪಾಯಕರ ಪರಿಸ್ಥಿತಿಗೆ ನೀನು ನನ್ನನ್ನು ಒಯ್ಯುವೆ, ಕ್ಯಾಸ್ಸಿಯಸ್?"

ಕ್ಯಾಸ್ಸಿಯಸನಾದರೋ ಎಲ್ಲಾ ವಿಚಾರವನ್ನು ಹೇಳುತ್ತಾನೆ. ಹಾಗೆ ಮಾತಾಡುತ್ತಾ, ಕಡೆಗೆ ಹೀಗೂ ಹೇಳುತ್ತಾನೆ. —

"ಏನಯ್ಯಾ ಇದು? ಈ ಇಕ್ಕಟ್ಟಾದ ಲೋಕದಲ್ಲಿ ಅವನೊಬ್ಬ ಪ್ರಚಂಡಾಕಾರ ಮಹಾನ ದೈತ್ಯನಂತೆ ಕಾಲುಗಳನ್ನು ಅಗಲಿಸಿ ನಿಂತಿರುವನಲ್ಲಾ!"

ಆ ರೀತಿಯಲ್ಲಿ, ಸಲುಗೆಯಲ್ಲಿ ಮಾತಾಡುತ್ತಾ, ಮಾರ್ಕಸ್ ಬ್ರೂಟಸ್‌ನನ್ನು ಮುಂದಿನ ಕಾರ್ಯದ ಬಗ್ಗೆ ಒಪ್ಪಿಸುತ್ತಾನೆ. ಜೂಲಿಯಸ್ ಸೀಸ್ಸರನಾದರೋ, ಕ್ಯಾಸ್ಸಿಯಸನನ್ನು ಕುರಿತಾಗಿ ಮಾರ್ಕ್ ಆಂಟೋನಿಯೊಡನೆ —

"ಅವನು ನಕ್ಕರೂ ಅವನು ತನ್ನನ್ನೇ ಮೂದಲಿಸುವಂತೆ ನಗುವನು."

ಎಂದೂ ಹೇಳುವನು. ಸೀಸ್ಸರನಿಗೆ ಗ್ರಾಮದ ನಿಚ್ಚಿಯಲ್ಲಿ ಅವನ ಪರವಿದ್ದ ಜನರು ಸನ್ಮಾನಿಸುತ್ತಾರೆ. ಆಗ ನೆರೆದಿದ್ದ ಬೀದಿಯ ಜನವು —

"ತಾವು ರಾತ್ರಿ ಉಡುವ ತಮ್ಮ ಬೆವರಿಂದ ತೊಯ್ದ ಟೋಪಿಗಳನ್ನು ಮೇಲಕ್ಕೆ ಎಸೆಯುತ್ತ ಜೈಕಾರವೆಬ್ಬಿಸಿದರು."

ಕ್ಯಾಸ್ಕಾ ಇವನು ಇನ್ನೊಬ್ಬ ಪ್ರಧಾನ ತೀವ್ರಗಾಮಿಯು. ಕ್ಯಾಸ್ಸಿಯಸನು ಅವನೊಡನೆ ಎಲ್ಲ ವಿಷಯ ಮಾತಾಡಲೆಂದು ಅವನನ್ನು ಮರುದಿನ ಊಟಕ್ಕೆ ತನ್ನ ಮನೆಗೆ ಆಹ್ವಾನಿಸಿದನು. ಆಗ ಕ್ಯಾಸ್ಕನು ಹೇಳುವುದು ಹೀಗೆ: —

"ಆ ವೇಳೆಗೆ ನಾನು ಬದುಕಿದ್ದರೆ, ನಿನ್ನ ಮನಸ್ಸು ಇದೇ ರೀತಿ ಇದ್ದರೆ ಮತ್ತು ನಿನ್ನ ಊಟ ಉಣ್ಣಲು ತಕ್ಕುದಾಗಿದ್ದರೆ ನಾನು ಬರುವೆನು."

ಮತ್ತೊಂದು ಬಾರಿ ಕ್ಯಾಸ್ಕನು ಕೈಯಸ್ ಕ್ಯಾಸ್ಸಿಯಸನಿಗೆ ಸೀಸ್ಸರನ ವಿಷಯವಾಗಿ ಜನವು ಅವನನ್ನು ಭೂಮಿ ಸಾಗರಾಧಿಪತಿಗಳಾಗಿ ಮಾಡುವರು, ಎಂದು ಹೇಳಿದಾಗ ಅದನ್ನು ಸಹಿಸಲಾಗದೆ ಪಿತೂರಿಗಾರ ಕ್ಯಾಸ್ಸಿಯಸನು ತಾನು. —

"ಈ ಗುಲಾಮಗಿರಿಯಿಂದ ಕ್ಯಾಸ್ಸಿಯಸನು ಕ್ಯಾಸ್ಸಿಯಸನನ್ನು ಪಾರಾಗಿಸುವನು."

ಎಂಬುದಾಗಿ ಹೇಳಿದ್ದ ಮಾತಿಂದಾಗಲು ಪ್ರಾಚೀನೆಂಬುದನ್ನು ಸೂಚಿಸುವಂತೆಯೂ ಆಗುವುದು, ಹಾಗೆನ್ನುತ್ತಾ ನಿರಂಕುಶಪ್ರಭುವಾದ ಜೂಲಿಯಸ್ ಸೀಸ್ಸರನ ಬಗ್ಗೆ ಕ್ಯಾಸ್ಸಿಯಸನು ತುಂಬ ದ್ವೇಷದಿಂದ ನುಡಿಯುತ್ತಾನೆ,

"ಸೀಸ್ಸರನು ಸಿಂಹವಾಯತನಲ್ಲವಾದರೆ ರೋಮನ್ನರು ಹೆಣ್ಣು ಜಿಂಕೆಗಳಂತೂ ಅಲ್ಲ."

ಎಂದನ್ನುವನು, ಪಿತೂರಿಗಾರರು, ವಿರೋಧಿಗಳು, ವೈರಿಗಳು, ಯಾರ್ಯಾರು ವಾಸೀನು ಎಂದು ಯಾರಿಗೆ ಗೊತ್ತು? ಆಗ ಷೇಕ್ಸ್‌ಪಿಯರ್ ಕವಿಯು ಈ ಮಾತು ನೈಜತೆಯನ್ನು ಸೂಚಿಸುತ್ತದೆ,

"ಒಳ್ಳೆಯ ಬಿಸಿಲಿನ ದಿನ ವಿಷಹಾವು ಹೊರಗೆ ಬರುವುದು"

ಜೂಲಿಯಸ್ ಸೀಜರನು ಒಬ್ಬ ಸಾಮ್ರಾಜ್ಯ ವೀರನಾದರೂ ಅವನಿಗೆ ನಿಷ್ಠೆಯ ಮಿತ್ರರು ಇದ್ದಂತೆ ಕಾಣುವುದಿಲ್ಲ. ಹಾಗಿದ್ದರೂ ಅವನದೊಂದು ವಿಶಾಲ ಜೀವನ! ಅವನಿಗೆ ಮಕ್ಕಳೂ ಇದ್ದಿಲ್ಲ.

"ವಿಶಾಲಗಿ ಹಿರುವಿಕೆಯು ಎಲ್ಲಾ ಆಕಾಂಕ್ಷೆಗಳೊಂದು ವೆಚ್ಚ"

ಎಂಬುದಾಗಿ ಕವಿ ಹೇಳುವ ಮಾತು ಅಕ್ಷರಶಃ ಸತ್ಯವಾಗಿದೆ. ಆ ರೀತಿ ~~ಅರ್ಥ~~ ಬಿಟ್ಟುಕೊಂಡು ಮೇಲೇರುವವನು ಹೇಗೆ?

"ಮೇಲೆ ಏರುವವನು ಮೇಲೆ ಮೋಡವನ್ನು ನೋಡುವವನು ಬುಡದ ಕೆಳಗೆ ನೋಡಲಾರನು."

ಎಂದು ಷೇಕ್ಸ್‌ಪಿಯರನು ವ್ಯಕ್ತವಾಗಿ ಹೇಳುತ್ತಾನೆ. ಸೆನೆಟರಾರೆಲ್ಲ ಬ್ರೂಟಸನ ಮನೆಗೆ ಷಡ್ಯಂತ್ರದಲ್ಲಿ ಯಾರಿಗೂ ಕಾಣಿಸದಂತೆ ಬಹು ಎಚ್ಚರಿಕೆಯಿಂದ ಬಂದರು. ಅವರು ಹೇಗಿದ್ದರು?—

"ಅವರ ಟೋಪಿಗಳು ಅವರ ಕಿವಿಯನ್ನು ಮುಚ್ಚಿವೆ; ಅವರ ಅಂಗಿಯೊಳಗೆ ಅವರ ಮುಖವು ಹೂತುಹೋಗಿವೆ."

ಹಾಗಿದ್ದ ಜನ ಬ್ರೂಟಸನನ್ನು ಕಂಡು ನಮಸ್ಕರಿಸಿದನಂತರ ಅವರನ್ನು ಹೀಗೆ ಪ್ರಶ್ನಿಸಲಾಯಿತು.

"ಎಚ್ಚರ, ನಿಮ್ಮ ಕಣ್ಣುಗಳು ಮತ್ತು ಈ ಷಡ್ಯಂತ್ರಿಯ ಮಧ್ಯೆ ಬಹು ಎಚ್ಚರದಿಂದ ಇರುವಕ್ಕೆ ವಿಚಾರಗಳು ಏನು?"

ಹೀಗೆ ಮಾರ್ಕಸ್ ಬ್ರೂಟಸನು ಕೇಳಿದನಂತರ ಅವರೆಲ್ಲ ಸೀಜರನನ್ನು ಕೊಲ್ಲುವ ಬಗ್ಗೆ ಮಾತಾಡುತ್ತಿರುವಾಗ ಮಾರ್ಕ ಅಂತೋನಿಯನ್ನೂ ಅದೇ ವೇಳೆಗೆ ಕೊಲ್ಲಬೇಕೆಂದು ಕ್ಯಾಸ್ಸಿಯಸನು ಹೇಳುತ್ತಾನೆ. ಆಗ ಬ್ರೂಟಸನು ಈ ರೀತಿ ಹೇಳಿದನು.—

"ಅದು ತಲೆಯನ್ನು ಕಡಿದಾದನಂತರ ಅಂಗಗಳನ್ನು ತುಂಡರಿಸಿದಂತೆ."

ಅಂತೋನಿಯನ್ನು ಸೀಜರನೊಡನೆ ಏಕೆ ಕೊಲ್ಲಬೇಕು?—

"ಸೀಜರನಲ್ಲಿ ಅವನು (ಅಂತೋನಿಯು) ಕಸಿಮಾಡಿ ಬೆಳೆಸಿದ ಅವನ ಪ್ರೀತಿಗೆ ನಾನು ಹೆದರುವೆನು."

ಹಾಗೆ ~~ಅವನ~~ ಕ್ಯಾಸ್ಸಿಯಸನು ಹೇಳುತ್ತಾ ಅವನೂ ಬ್ರೂಟಸನೂ ಮಾತಾಡುತ್ತಾ ಇದ್ದಾಗ ಅತ್ತಲಾಗಿ ಜೂಲಿಯಸ್ ಸೀಜರನ ಮನೆಯಲ್ಲಿ ಅವನ ಹೆಂಡತಿ ಅದೇನೋ ದುಃಸ್ವಪ್ನವನ್ನು ಕಂಡೆನೆಂದೂ, ಏನಾದರೂ ಅಪಾಯ ಸಂಭವಿಸಬಹುದೆಂದೂ, ಹೊರಗಿಲ್ಲ ಹೋಗಬೇಡವೆಂದೂ ಹೇಳಿದಾಗ ಸೀಜರನು:—

"ಅಪಾಯಕ್ಕೆ ತನಗಿಂತ ಸೀಜರನೇ ಹೆಚ್ಚು ಅಪಾಯಕಾರನೆಂದು ಗೊತ್ತಿದೆ."

ಎಂದು ಹೇಳುತ್ತಾನೆ. ಮರುದಿನ ಬೆಳಿಗ್ಗೆ ಸೀಜರನನ್ನು ಸೆನೆಟ ಸಭಾ

ಭವನಕ್ಕೆ ಕರೆದುಕೊಂಡು ಹೋಗಲು ಬಂದ ಪಿತೂರಿಗಾರರಲ್ಲಿ ಡೆಸಿಯಸ್ ಬ್ರೂಟಸನು ಎಲ್ಲರಿಗಿಂತ ಮೊದಲು ಬಂದನು. ಆವನಿಗೆ ಸೀಸ್ಸರನು ತನ್ನ ಪತ್ನಿ ಕಾಲ್ಫೂರ್ನಿಯಾಳು ಕಂಡ ಸ್ವಪ್ನದ ವಿಷಯವೆಲ್ಲವನ್ನು ಹೇಳಿ ತಾನು ಆ ದಿನ ಮನೆಯಿಂದ ಹೊರಗೆ ಹೋಗಲಾರೆನೆಂದೆನ್ನುವಾಗ ಡೆಸಿಯಸ್ ಬ್ರೂಟಸನು ಜೂಲಿಯಸ್ ಸೀಸ್ಸರನಿಗೆ ಹೀಗನ್ನುತ್ತಾನೆ.—

"ಸೀಸ್ಸರನ ಹೆಂಡತಿ ಇನ್ನೊಮ್ಮೆ ಒಳ್ಳೆಯ ಕನಸನ್ನು ಕಾಣುವವರೆಗೆ ಶಾಸನ ಸಭೆಯನ್ನು ಬರಕಾಸ್ತು ಮಾಡಲಾಗಿದೆಯೆಂದು ಜನ ಹೇಳುವವರಲ್ಲವೇ?"

ಎಂದು ಮೊದಲಾಗಿ ಹೇಳುತ್ತಾನೆ. ಆನಂತರ ಸೀಸ್ಸರನು ತನ್ನ ಮಿತ್ರರಂತೆ ಬಂದ ಆ ಎಲ್ಲಾರು ಪಿತೂರಿಗಾರರೊಡನೆಯೇ ಸೆನೇಟಿಗೆ ಹೋಗುತ್ತಾನೆ. ಆಗ ದಾರಿಯಲ್ಲಿ ಆವರನ್ನು ಕಂಡ ಭವಿಷ್ಯವಾದಿಯು ಹೀಗೆ ಹೇಳುವವನು.—

"ಸ್ಪರ್ಧೆ ಪ್ರತಿಸ್ಪರ್ಧೆಯ ಹಲ್ಲುಗಳಿಂದ ಸಿಗದಂತ ಸ್ಥಾನಗಳಲ್ಲೇನೂ ಇರಲಾರವು."

ಎಂದು ಹೇಳುವವನು. ಇತ್ತಲಾಗಿ ಸೀಸ್ಸರನ ಮನೆಯಲ್ಲಿ ಆವನ ಪತ್ನಿಯು ತುಂಬಾ ಕಳವಳಗೊಂಡಿದ್ದಾಳೆ. ತಾನು ಏನನ್ನು ಬೇಕೋ ತಿಳಿಯದು. ಆಗಬಾರದ್ದು ಆಗಿ ಹೋಗುವುದೋ ಎಂಬ ಭಯವೂ ಆವಳಿಗೆ ಇದೆ. ಹೀಗಾದ ತಾನು ಏನನ್ನಲಿ ಎಂದು ಉದ್ಗರಿಸುವಳು:—

"ಓಹ, ನನ್ನ ನಾಲಗೆ ಮತ್ತು ಹೃದಯದ ಮಧ್ಯೆ ದೊಡ್ಡ ಬೆಟ್ಟವನ್ನೆ ಇರಿಸು."

ಎಂದೆನ್ನುತ್ತಾಳೆ. ತಾನೇ ಸೆನೇಟಿಗೆ ಹೋಗಿ ಸೀಸ್ಸರನಿಗೇನೂ ಅಪಾಯವಾಗದಂತೆ ನೋಡಿಕೊಳ್ಳುವೆನು ಎಂದು ಲಾಡಿಸುವಳು.—

"ನನಗೆ ಗಂಡಿನ ಮನವಿದೆ; ಶಕ್ತಿ ಮಾತ್ರ ಹೆಣ್ಣಿನದು."

ಅಲ್ಲಿ ಶಾಸನ ಸಭಾ ಭವನದಲ್ಲಿ ಜನಸಂದಣಿ ನೆರೆದಿದೆ. ಒಳಗೆ ಸಭಾಸದರು ಹೆಚ್ಚಾಗಿ ಪಿತೂರಿಗಾರರೇ ಆಗಿದ್ದರು. ಆವರೆಲ್ಲ ಸೀಸ್ಸರನನ್ನು ಹೊಗಳುತ್ತ ಆವನ ಸುತ್ತುವರಿದಿದ್ದಾರೆ. ಮೆಟೆಲ್ಲಸ್ ಸಿಂಬರನ ಒಂದು ಮನವಿಯು ಬಗ್ಗೆ ತಾನೇನೂ ಮಾಡಲಾಗುವುದಿಲ್ಲವೆಂದು ಸೀಸ್ಸರನು ತನ್ನ ಅಹಂಭಾವದ ಪರಮಾವಧಿಯನ್ನೆ ಪ್ರದರ್ಶಿಸುತ್ತಾನೆ.—

"ಉತ್ತರ ದಿಕ್ಕಿನಲ್ಲಿ ಸ್ಥಿರ ಮೇಲೆ ಇರುವ ಆ ನಕ್ಷತ್ರದಂತೆ ನಾನು ಅಚಂಚಲನು----ತನ್ನ ಸ್ಥಾನದಲ್ಲಿ ಯಾವುದಕ್ಕೂ ಬಗ್ಗದೆ ಕುಗ್ಗದೆ ಇರುವವನು ಯಾರಾದರಿದ್ದರೆ ಆವನೇ ನಾನು."

ಎಂದೆಲ್ಲ ತನ್ನ ದುರ್ದೈವವನ್ನು ಹೇಳಿಕೊಳ್ಳುತ್ತಾನೆ. ಆದರೆ ಪಿತೂರಿಗಾರರು ತಮ್ಮ ಚೂರಿಗಳನ್ನು ಬಿಗಿದರು; ಸೀಸ್ಸರನನ್ನು ಕೊಂದರು; ಜನರು ದಿಗ್ಭ್ರಾಂತರಾದರು; ಆನಂತರ ತಾನೇಕೆ ತನ್ನ ಮಿತ್ರ ಸೀಸ್ಸರನನ್ನು ಕೊಂದೆನೆಂದು ಬ್ರೂಟಸನು ತನ್ನ ಭಾಷಣದಲ್ಲಿ ಹೀಗನ್ನುತ್ತಾನೆ.—

"ನಾನು ಸೀಸರನನ್ನು ಕಡಿಮೆ ಪ್ರೀತಿಸಿದೆನೆಂದಲ್ಲ; ಮತ್ತೇಕೆ ಎಂದು ಕೇಳಿದರೆ ನಾನು ರೋಮನ್ನು ಹೆಚ್ಚಾಗಿ ಪ್ರೀತಿಸಿದೆನು. ನಿಮಗೆ ಸೀಸರನು ಬದುಕಿ ನೀವು ಗುಲಾಮರಂತೆ ಸಾಯುವುದು ಮೇಲೋ ಅಥವಾ ಸೀಸರನು ಸತ್ತು ನೀವೆಲ್ಲ ಸ್ವತಂತ್ರರಾಗಿ ಬದುಕುವುದು ಮೇಲೋ? ಸೀಸರನು ನನ್ನನ್ನು ಪ್ರೀತಿಸಿದುದರಿಂದ ಅವನಿಗಾಗಿಯೆ ನಾನು ಅಳುವೆನು; ಅವನು ಸುದೈವವನ್ನು ಪಡೆದಿದ್ದುದರಿಂದ ನಾನು ಸಂತೋಷಪಡುವೆನು; ಅವನು ಪರಾಕ್ರಮಿಯೆನಿಸಿದ್ದುದರಿಂದ ನಾನು ಅವನನ್ನು ಗೌರವಿಸುವೆನು; ಆದರೆ ಅವನು ಅತ್ಯಾಶೆಗೆ ಒಳಗಾಗಿದ್ದ ಕಾರಣದಿಂದ ನಾನು ಅವನನ್ನು ಕೊಂದೆನು. ಅವನ ಪ್ರೀತಿಗಿದೋ ಕಂಬನಿಯು ಇದೆ; ಅವನ ಸುದೈವಕ್ಕೆ ಸಂತೃಪ್ತಿಯಿದೆ; ಅವನ ವೀರತನಕ್ಕೆ ಗೌರವವಿದೆ; ಮತ್ತು ಅವನ ಅತ್ಯಾಶೆಗಿದೋ ಸಾವು ಇದೆ------."

ಮಾರ್ಕಸ್ ಬ್ರೂಟಸನ ವಾಗ್ಝರಿಯು ಈ ರೀತಿ ಹರಿದಾಗ ಮಾರ್ಕ ಆಂತೋನಿಯೇನೂ ಕಡಿಮೆಯವನಾಗಿರಲಿಲ್ಲ. ಅವನೂ [illegible]! ಅವನು ಜೂಲಿಯಸ್ ಸೀಸರನು ವೀರನು ಮಾತ್ರವಲ್ಲ, ಅತ್ಯಂತ ದೊಡ್ಡ ದೇಶಪ್ರೇಮಿ ಎಂಬುದಕ್ಕೆ ಸೀಸರನ ಮರಣಪತ್ರವನ್ನೇ ಬಿಚ್ಚಿಟ್ಟು ಮಾತಾಡಿದನು; ಜನಸಾಮಾನ್ಯರನ್ನು ಒಪ್ಪಿಸಿದನು; ಪಿತೂರಿಗಾರರು ಕೊಲೆಗಾರರೂ ದ್ರೋಹಿಗಳೂ ಎಂದು ಸಾರಿದನು. ರೋಮನ್ನರಲ್ಲಿ ಎರಡು ಪಕ್ಷವಾಯಿತು, ಕೆಲವರು ಮಾರ್ಕ ಆಂತೋನಿಯ ವಾದಸರಣಿಯನ್ನು ಮೆಚ್ಚಿದರು. ಅನಂತರ ಅವರು ಪಿತೂರಿಗಾರರನ್ನೆಲ್ಲ ಬೆನ್ನಟ್ಟಿದರು; ಹಾಗೆ ಅಟ್ಟುವಾಗ ಸಿನ್ನಾಯೆಂಬ ಹೆಸರಿನ ಒಬ್ಬನನ್ನು ಬೀದಿಯಲ್ಲಿ ದೊರಕಲು "ಅವನನ್ನು ತಿವಿಯಿರಿ" ಎಂದು ಜನ ಬೊಬ್ಬಿಟ್ಟರು.—

"ನಾನು ಪಿತೂರಿಗಾರನಲ್ಲ; ನಾನು ಕವಿ ಸಿನ್ನಾ";

ಎಂಬುದಾಗಿ ಅವನು ಹೇಳಿದನು. ಆಗ ಆ ಉದ್ರೇಕಗೊಂಡ ಜನರು:—

"ಅವನ ಹಾಳು ಕವಿತೆಗಳಿಗಾಗಿ ಅವನನ್ನು ಕೊಲ್ಲಿರಿ!"

ಎಂದು ಗುಲ್ಲೆಬ್ಬಿಸಿದರು, ತಾನು ಪಿತೂರಿಗಾರ ಸಿನ್ನಾನಲ್ಲವೆಂದು ಆ ಕವಿಯು ಅತ್ತು ಹೇಳಿದಾಗ—

'ಅದು ಬೇಕಾಗಿಯಿಲ್ಲ; ಅವನ ಹೃದಯದಿಂದ ಆ ಹೆಸರನ್ನು ಮಾತ್ರ ಕಿತ್ತೊಗೆದು ಅವನನ್ನು ಅತ್ತ ಕಳುಹಿಸಿ."

ಎಂದು ಹೇಳಿದುದು ಸ್ವಾರಸ್ಯವಿದೆ. ಹೀಗೂ ಪಿತೂರಿಗಾರರ ಕಡೆಯ ಜನರು

ಕಂಡಾಬಟ್ಟೆ ಓಡಿದರು; ಹಲವರು ಸೆರೆಹಿಡಿಯಲ್ಪಟ್ಟರು. ಇಷ್ಟರಲ್ಲಿ ಮಾರ್ಕ್ ಆಂತೋನಿಯು ತಮ್ಮ ಹೋರಾಟದ ವಿಷಯವಾಗಿ ಒಕ್ಟೇವ್ಯಸ್ ಸೀಸರನೊಡನೆ ಮಾತಾಡುತ್ತಾನೆ. ಅವರು ಲೂಸಿಲಿಯಸನನ್ನು ಬಂದು ಕಲಸಿದ ಮೇಲೆ ಕರೆತರುತ್ತಾರೆ. ಆಂತೋನಿಯು ಅವನನ್ನು ಕುರಿತಾಗಿ ಹೇಳುವ ಹಾಸ್ಯ ನುಡಿಯಂತೂ ಹೀಗಿದೆ,

"ಆ ವ್ಯಕ್ತಿಗೆ ಆದಷ್ಟು ಗೌರವವನ್ನು ನಾವು ಸಲ್ಲಿಸುತ್ತಿರುವೆವಾದರೂ ಅವನೊಂದು ಕತ್ತೆ."

ಆಗ ಒಕ್ಟೇವ್ಯಸನಾದರೋ, 'ಏ, ಹಾಗನ್ನಬೇಡ; ಆ ಲೂಸಿಲಿಯಸ್ ಒಬ್ಬ ಹೋರಾಟಗಾರ, ವೀರ", ಎಂದು ಹೇಳುವಾಗ.—

"ನನ್ನ ಕುರುಡುತನವೂ ಅದೇ ರೀತಿ, ಒಕ್ಟೇವ್ಯಸ್. ಆದಕ್ಕೇನೇ ನಾನು ಮೌನವನ್ನು ಸಂಗ್ರಹಿಸಿಟ್ಟುಕೊಳ್ಳುವುದು."

ಎಂಬುದಾಗಿ ಮಾರ್ಕ್ ಆಂತೋನಿಯು ಹೇಳುತ್ತಾನೆ. ಇನ್ನೀಗ ಮತ್ತೂ ರಿಗಾರರ ಪಕ್ಷದ ಕೆಲವು ಜನರು ಅವರನ್ನು ಬಿಟ್ಟು ಗೆಲ್ಲುವ ಪಕ್ಷದ ಕಡೆಗೆ ಸೇರುವಂತಿದ್ದಾಗ ಒಕ್ಟೇವ್ಯಸನು.—

"ಕೆಲವು ಶತ್ರು ಪಕ್ಷದ ಜನರು ನಗುತ್ತಲೇ ನಮ್ಮ ಸುತ್ತ ನೆರೆದಿರುವರು. ಮುಗುಳ್ನಗುವ ಆ ಕೆಲವು ಹೃದಯಗಳಲ್ಲಿ ಮಿಲ್ಲಿಯಗಟ್ಲೆ ಚೇಷ್ಟೆಗಳು ಇವೆ."

ಎಂದನ್ನುವುದೂ ತುಂಬಾ ಸ್ವಾರಸ್ಯವಿದೆ. ಇಷ್ಟರಲ್ಲಿ ಮಾರ್ಕಸ್ ಬ್ರೂಟಸನ ಪಾಳೆಯದಲ್ಲಿ ಅವನಿಗೂ ಅವನ ಮಿತ್ರನಾಗಿದ್ದ ಕೈಯಸ್ ಕ್ಯಾಸ್ಯಸನಿಗೂ ತೀವ್ರ ಭಿನ್ನಾಭಿಪ್ರಾಯವಾಗಿ ಅತ್ತಿತ್ತ ವನ್ನೋ ಹೇಳಿಕೊಂಡರು, ಹೀಗೂ ಕ್ಯಾಸ್ಯಸನು ನಗುತ್ತ ಮಾತಾಡುತ್ತ ಬ್ರೂಟಸನ ಬಳಿಗೆ ಹೋಗುತ್ತಿದ್ದನು. ಅದನ್ನು ನೋಡಿ ಬ್ರೂಟಸನು ತನ್ನ ಒಬ್ಬ ಸೇವಕನೊಡನೆ ಹೀಗಂದನು.—

"ಪ್ರೀತಿ ವಿಶ್ವಾಸಗಳು ಹಳಸಿಕೊಳ್ಳುವಾಗ ಬಲಾತ್ಕಾರಿಕ ವಿನಯೋಪಚಾರಗಳು ತೋರುವುವು; ಸರಳ ಹೃದಯಕ್ಕೆ ಕಪಟ ಬೇಕಿಲ್ಲ."

ಕ್ಯಾಸ್ಯಸನು ಲಂಚ ತಿಂದನೆಂದು ಮೊದಲಾಗಿ ಬ್ರೂಟಸನು ಆಪಾದಿಸುತ್ತಾನೆ. ಆಗ ಅವನು ಸಿಟ್ಟಾಗಿ ಬ್ರೂಟಸನನ್ನು ನೋಡುತ್ತಾನೆ.—

"ಒಬ್ಬ ಹುಚ್ಚ ನೆಟ್ಟನೆ ನೋಡುವಾಗ ನಾನು ಹೆದರಬೇಕೇ? ನಿನ್ನ ಸಿಡುಕಿನ ಗತ್ತಿಕ್ಕೆ ನಾನು ಮಣಿಯಬೇಕೇ?"

ಎಂಬುದಾಗಿ ಬ್ರೂಟಸನು ಅವನನ್ನು ಹಂಗಿಸುತ್ತಾನೆ:—

"ನಿನ್ನ ಮತ್ಸರದ ವಿಷವನ್ನು ದೇವರಾಣೆಗೂ ನೀನೇ ತಿಂದು ಅರಗಿಸಿಕೊ," ಎಂದು ಹೇಳುತ್ತ, "ನಿನ್ನ ಬೆದರಿಕೆ ನನಗೆ ಭಯವನ್ನು ಹುಟ್ಟಿಸದು; ಸತ್ಯವೇ ನನಗೆ ಬಲವಾದ ಅಸ್ತ್ರ."

ಎಂದನ್ನುತ್ತಾನೆ, ತಾತ್ವಿಕನಾದ ಬ್ರೂಟಸ್. ತಾನು ದೇಶದ ಹಿತದೃಷ್ಟಿ

ಯಿಂದ ತನ್ನ ಮಿತ್ರನಾದ ಜೂಲಿಯಸ್ ಸೀಸರನನ್ನು ಕೊಲ್ಲಲು ಆ ಕಾಲು ಕರೊಡನೆ ಸೇರಿದನೆಂದು ಎಲ್ಲರಿಗೂ ತಿಳಿದಿತ್ತು. ಬ್ರೂಟಸನು ಒಕ್ಟೇವ್ಯಸ್ ಸೀಸರನೊಡನೆ ಮಾತಾಡುತ್ತಾ —

"ಮಾನವ ವ್ಯವಹಾರದಲ್ಲಿ ತೆರೆಗಳಿವೆ; ಅವು ಪ್ರವಾಹದೊಡಗೂಡಿ ತಾಕಲಾಡಿದಾಗ ಅವು ಅವರನ್ನು ಅದೃಷ್ಟದತ್ತ ಒಯ್ಯುತ್ತವೆ." ಎಂದು ಹೇಳಿದನು. ಅವನು ಕಡೇ ಬಾರಿಗೆ ಕ್ಯಾಸ್ಯಸನನ್ನು ಕಂಡು ಬೀಳ್ಕೊಡುವಾಗ ಹೀಗೆಂದುದು ಸ್ವಾರಸ್ಯವಿದೆ. —

"ಪುನಃ ನಾವು ಭೇಟಿಯಾಗುವೆವೋ ತಿಳಿಯೆನು. ಆದುದರಿಂದ ಕ್ಯಾಸ್ಯಸನೆ, ನನ್ನ ಅತಿ ಹಾರ್ದಿಕ ನಮಸ್ಕಾರಗಳನ್ನು ಸ್ವೀಕರಿಸು. ಬಹುಶಃ ನಾವು ಪುನಃ ಎದುರುಗೊಂಡರೆ ನಾವು ಮುಗುಳ್ನಗುವ!"

ಇವರಿಬ್ಬರೂ ಈ ನಾಟಕದಲ್ಲಿ ಪ್ರಬಲ ಪಾತ್ರಧಾರಿಗಳು. ಕ್ಯಾಸ್ಯಸನು ತಮಗಿನ್ನು ಸೋಲು ಖಂಡಿತವೆಂದು ಮೊದಲು ಆತ್ಮಹತ್ಯೆ ಮಾಡಿಕೊಳ್ಳುವನು, ಆಗ ಬ್ರೂಟಸನು ಅವನಿಗಾಗಿ ವಿಶೇಷ ಮರುಗುವನು

"ಕ್ಯಾಸ್ಯಸನೆ, ನಿನಗಾಗಿ ನನಗೆ ಸಮಯವಿದೆ; ಮಿತ್ರರೆ, ನೀವು ಭಾವಿಸುದಕಿಂತ ಹೆಚ್ಚು ಕಂಬನಿಯನ್ನು ಈ ಮೃತನಿಗೆ ಸುರಿಸಬೇಕಿದೆ." ಎಂದು ಬ್ರೂಟಸನು ಮಾರ್ಮಿಕವಾಗಿ ಹೇಳುತ್ತಾನೆ. ಅನಂತರ ಅವನು ತನ್ನ ಶಿಬಿರಕ್ಕೆ ಹೋಗಿ ತನ್ನ ಸಹಪಾಠಿ ಒಲಿಮಿನ್ಯಸ್‌ಗೆ "ಕತ್ತಿಯನ್ನು ಹಿಡಿ; ನಾನು ಅದರ ತಿವಿತಕ್ಕೆ ಬಲಿಯಾಗುತ್ತೇನೆ," ಎಂದು ಹೇಳುವನು.

"ಅದು ಒಬ್ಬ ಮಿತ್ರನಿಗೆ ತಕ್ಕುದಾದ ಕೆಲಸವಲ್ಲ, ಪ್ರಭುವೆ!" ಎಂದು ಒಲಿಮಿನ್ಯಸನು ಹೇಳುತ್ತಾನೆ. ಆದರೆ ಬ್ರೂಟಸನು ಸಾಯಲು ನಿಶ್ಚಯಿಸುತ್ತಾನೆ. ಮಾರ್ಕ್ ಆಂತೋನಿಗೆ ಇಷ್ಟರಲ್ಲಿ ಈ ವಿಷಯವೆಲ್ಲ ತಿಳಿಯಿತು. ಅವನು ಬರುವಷ್ಟರಲ್ಲಿ ಸೀಸರನ ನೆಚ್ಚಿನ ಮಿತ್ರ, ದೇಶಾಭಿಮಾನಿ ಬ್ರೂಟಸನು ಶವವಾಗಿ ಬಿದ್ದಿದ್ದನು. ಕಡೆಗಂತು ಮಾರ್ಕ್ ಅಂತೋನಿಯು ಒಕ್ಟೇವ್ಯಸ್ ಸೀಸರನೊಡಗೂಡಿ ತನ್ನ ಗತಿಸಿದ ಮಿತ್ರನಿಗೆ ತನ್ನ ಶ್ರದ್ಧಾಂಜಲಿಯನ್ನು ಈ ರೀತಿ ಅರ್ಪಿಸಿದನು. —

"ಇವನು (ಬ್ರೂಟಸನು) ಒಬ್ಬನೆ ಇಡೀ ದೇಶದ ಹಿತವನ್ನು
ಸಮದೃಷ್ಟಿಯಿಂದ ಹಾರೈಸಿದ್ದವನು; ಅವನ
ಜೀವನವು ಸೌಮ್ಯವೂ ಮಾನ್ಯವೂ ಆಗಿತ್ತು!
ಸಾಂಘಾತಿಕ ಸರ್ವ ಸಾತ್ವಿಕ ವಿಷಯಗಳವ
ನಲ್ಲಿ ಬೆರೆತಿರಲು ಪ್ರಕೃತಿಯೇ ಎದ್ದು ನಿಂ
ತು, "ಇವನೊಬ್ಬ ಮಾನವ" ಎಂದು ಇಡೀ ಜಗತ್ತಿಗೆ
ಕೂ ಸಾರುತ್ತಿರಬಹುದು!

ಟಿಪ್ಪಣಿಗಳು.

Triumph — ಸೀಸರನು ಕ್ರಿ. ಪೂ. 45ರಲ್ಲಿ ಪಾಂಪೆಯ ಇಬ್ಬರು ಮಕ್ಕಳನ್ನು ಸ್ಪೈಯಿನ್‌ನಲ್ಲಿ ಸೋಲಿಸಿದುದರ ಪರಿಣಾಮವಾಗಿ ರೋಮ್‌ನಲ್ಲಿ ವಿಜಯೋತ್ಸವಕ್ಕೆ ಸಿದ್ಧತೆಗಳನ್ನು ನಡೆಸಿದ್ದರು.

Pompey — ಪಾಂಪೆಯು ಜೂಲಿಯಸ್ ಸೀಸರನಿಗೆ ವೈರಿಯಾಗಿದ್ದನು. ಆವನು ಸೀಸರನಿಂದ ಸೋಲಿಸಲ್ಪಟ್ಟನಂತರ ಆವನು ಈಜಿಪ್ಟಿಗೆ ಹೋದನು. ಅಲ್ಲಿ ದೋಣಿಯಿಂದ ಇಳಿಯುವಾಗ ಆವನ ಸಂಗಡಿಗನೊಬ್ಬನಿಂದಲೇ ಅಲ್ಲಿ ಕೊಲೆ ಮಾಡಲ್ಪಟ್ಟನು.

Lupercall — ಪ್ರತಿವರ್ಷ ಫೆಬ್ರುವರಿ 15ರಂದು ರೋಮ್‌ನಲ್ಲಿ ನಡೆಸಲ್ಪಡುತ್ತಿದ್ದ ಫಲಸಿದ್ಧಿಕಾರ್ಯದ ಹಬ್ಬ.

The Ides of March — ಮಾರ್ಚ್ ತಿಂಗಳ 15ನೇ ದಿನ; ಅಮಾವಾಸ್ಯೆಯ ವೇಳೆ. ಆದೊಂದು ವಿಘ್ನ ದಿನವೆಂದೂ ಆವರು ನಂಬುವರು.

Aeneas — ಗ್ರೀಕ್ ಟ್ರೋಜನ್ ಯುದ್ಧದ ಕಾಲದಲ್ಲಿ ಈ ಎನಿಯಸನು ತನ್ನ ತಂದೆ ವೀರ ಎಂಚಿಸಸನ್ನು ಬೆಂಕಿಯಿಂದ ಹೊತ್ತುರಿದ್ದ ಟ್ರಾಯ್ ನಗರದಿಂದ ಪಾರಾಗಿಸಿದನೆಂದೂ ಈ ಎನಿಯಸನು ರೋಮನ್ ಜನಾಂಗದ ಮೂಲಪುರುಷನೆಂದೂ ಐತಿಹ್ಯವಾಗಿದೆ.

Colossus — ರೋಡ್ಸ್‌ನಲ್ಲಿರುವ ಒಂದನ್ನೂರು ಅಡಿ ಎತ್ತರದ ಎಪ್ಪೊಲೋನ ತೋಳದ ವಿಗ್ರಹವನ್ನು ಕುರಿತಾಗಿ ಷೇಕ್ಸ್‌ಪಿಯರನು ಹೋಲಿಸುವುದಾಗಿರಬಹುದೆಂದು ವಿದ್ವಾಂಸರ ಊಹೆಯಾಗಿದೆ.

a Great Flood — ಜ್ಯೂಸ್ ಹಿಂದು ಪ್ರಳಯವನ್ನು ಉಂಟುಮಾಡಿದಾಗ ಎಲ್ಲಾ ಜನರು ಸತ್ತರಾದರೂ ಥಿಬಿಯಾದ ರಾಜ ಮತ್ತವನ ರಾಣಿ ಮಾತ್ರ ಉಳಿದುಕೊಂಡರು ಎಂಬುದಾಗಿ ಕತೆಯು ಇದೆ.

a Brutus once — ಕ್ರಿ. ಪೂ. ಆರನೇ ಶತಮಾನದಲ್ಲಿ ಲೂಸಿಯಸ್ ಬ್ರೂಟಸ್ ಎಂಬುದಾಗಿದ್ದ ಮಹಾವೀರನ ವಂಶಕ್ಕೆ ಸೇರಿದ್ದವನು ತಾನು ಎಂಬುದಾಗಿ ಇಲ್ಲಿಗೆ ಮಾರ್ಕಸ್ ಬ್ರೂಟಸನು ಹೇಳಿಕೊಳ್ಳುತ್ತಿದ್ದಾನೆ.

Pompey's Porch — ಪಾಂಪೆಯು ಕ್ರಿ. ಪೂ. 55ರಲ್ಲಿ ಕಟ್ಟಿಸಿದ ಬೃಹದಾಕಾರದ ರಂಗಸ್ಥಳ. ಜೂಲಿಯಸ್ ಸೀಸರನ ಕೊಲೆಯು ಇಲ್ಲಿ ಆಯಿತೆಂದು ಹೇಳಲಾಗಿದೆ.

Pretors Chair — ರೋಮನ್ನ ನ್ಯಾಯಾಧೀಶರು ಕುಳಿತಿರುವ ಕುರ್ಚಿ. ಮಾರ್ಕಸ್ ಬ್ರೂಟಸನು ಪ್ರಧಾನ ನ್ಯಾಯಾಧೀಶನಾಗಿರುತ್ತಿದ್ದನು. ಕ್ಯಾಸಿಯಸ್ ಮತ್ತು ಸಿನ್ನಾ ಇವರೂ ನ್ಯಾಯಾಧೀಶರಾಗಿದ್ದರು.

Erebus — ಇದು ನಮ್ಮ ಪುರಾಣಗಳಲ್ಲಿರುವಂತೆ ಪಾತಾಳ ಕತ್ತಲೆ. ಸತ್ತವರ ಆತ್ಮವು ಭೂಮಿಯಿಂದ ನೀಳಿದ ಅತ್ತ ಹೋಗುವುದು ಎಂದೆಲ್ಲ ಗ್ರೀಕ್ ಪುರಾಣಗಳು ಹೇಳಿವೆ.

Olympus — ಥೆಸಲ್ಲಿಯ ಒಂದು ಬೆಟ್ಟ. ಗ್ರೀಕ್ ದೇವತೆಗಳೆಲ್ಲ ಅದರ ತುದಿಯಲ್ಲಿರುವರೆಂದು ಗ್ರೀಸಿನ ಜನರ ನಂಬಿಕೆ.

Marcus Porcius Cato — ಕ್ರಿ.ಪೂ. 48ರಲ್ಲಿ ಇವನು ಜೂಲಿಯಸ್ ಸೀಜ಼ರನ ವಿರೋಧಿಯಾಗಿ ಕಾದಾಡಿ ಕಡೆಗೆ ಆತ್ಮಹತ್ಯೆ ಮಾಡಿಕೊಂಡನು. ಇವನ ಮಗಳೆ ಪೋರ್ಷ್ಯ, ಬ್ರೂಟಸನ ಹೆಂಡತಿ.

The Tiber — ರೋಮ್‌ನ ಗಂಗೆಯೆಂದೆನ್ನಬಹುದಾದ ಪವಿತ್ರ ಹೊಳೆ.

Et-Tu-Brute — ಕೃತಘ್ನತೆಯ ಪರಮಾವಧಿಯು ಇದು. ಸೀಜ಼ರನು ತನ್ನ ಆಪ್ತಮಿತ್ರನೆಂದು ಬಗೆದಿದ್ದ ಮಾರ್ಕಸ್ ಬ್ರೂಟಸನೇ ಕತ್ತಿಯಿಂದ ಅವನನ್ನು ತಿವಿದಾಗ ಎತ್ತಿದ ಉದ್ಗಾರ ಇದು.

The Nervii — ಜೂಲಿಯಸ್ ಸೀಜ಼ರನು ಸೋಲಿಸಿದ ಗಾಲ್ ಜನಾಂಗದ ವೀರ ಸೇನಾನಿ ವರ್ಗ.

Leaden Mace — ಅಫೀಮು ಮಾರ್ಫಿಯಸ್ - ಎಂಬುದಾಗಿ ಕರೆಯಲ್ಪಡುವ ಸ್ವಪ್ನದೇವತೆಯದು.

Hibla — ಸಿಸಿಲಿಯ ಒಂದು ಪಟ್ಟಣ ಮತ್ತು ಅದೇ ಹೆಸರಿನ ಒಂದು ಬೆಟ್ಟ — ಅದು ಜೇನಿಗೆ ಪ್ರಸಿದ್ಧವಾದ ಸ್ಥಳ.

Drachmas — ಗ್ರೀಕರ ಹಿಂದಿನ ಕಾಲದ ನಾಣ್ಯಗಳು.

Pluto's Mine — ಐಶ್ವರ್ಯದ ದೇವತೆ ಪ್ಲೂಟೋನ ಗಣಿ. (ನಮ್ಮಲ್ಲಿ ಕುಬೇರನು ಇದ್ದ ಹಾಗೆ ಅಲ್ಲಿ ಪ್ಲೂಟೋ.)

Ate — ಯುದ್ಧ ಅಥವಾ ಯಾವುದೇ ಕ್ರಾಂತಿ ಕೋಲಾಹಲದ ಕಾವೇರಿಕೆಯನ್ನು ಹಬ್ಬಿಸುವ ಗ್ರೀಕ್ ದೇವತೆ.

Labio and Flavius — ಮಾರ್ಕಸ್ ಬ್ರೂಟಸನ ಪಕ್ಷದ ಸೇನಾನಿಗಳು ಮತ್ತು ಮಿತ್ರರು. ಅವರು ಸತ್ತರೆಂದಾಗ ಅವನಿಗೆ ದುಃಖ ಉಕ್ಕೇರಿತು.

Cicero — ಮಾರ್ಕಸ್ ಆಂತೋನಿಯ ಬದ್ಧ ವೈರಿ.

ಸೀಸ್ಸರನ ಕೊಲೆ.

(ಶೇಕ್ಸ್‌ಪಿಯರ್ ನಾಟಕ)

ಪಾತ್ರವರ್ಗ.

ಜೂಲಿಯಸ್ ಸೀಸ್ಸರ್ — ರೋಮನ್ ಸಾಮ್ರಾಜ್ಯದ ನಾಯಕ,
ಕ್ಯಾಲ್ಫೂರ್ನಿಯಾ — ಸೀಸ್ಸರನ ಪತ್ನಿ.
ಫ್ಲೇವ್ಯಸ್, ಮರುಲ್ಲಸ್ } — ನಗರದ ಪ್ರಧಾನಿಗಳು.
ಓಕ್ಟೇವ್ಯಸ್ ಸೀಸ್ಸರ್ — ಜೂಲಿಯಸ್ ಸೀಸ್ಸರನ ಸಾಕುಮಗ.
ಮಾರ್ಕಸ್ ಆಂತೋನಿ — ಜೂಲಿಯಸ್ ಸೀಸ್ಸರನ ಮಿತ್ರ, ಶಾಸಕ.
ಎಮಿಲಸ್ ಲೆಪಿಡಸ್ — ಆಂತೋನಿಯವ ಮಿತ್ರ
ಸಿಸೆರೊ —, ಪಬ್ಲಿಯಸ್ — } ಶಾಸನ ಸಭಾ ಸದಸ್ಯರು,
ಮಾರ್ಕಸ್ ಬ್ರೂಟಸ್ —, ಕ್ಯಾಯಸ್ ಕ್ಯಾಸ್ಯಸ್ — } ಶಾಸಕರು, ಪ್ರಧಾನ ಪಿತೂರಿಗಾರರು.
ಕ್ಯಾಸ್ಕ —, ಟ್ರೆಬೊನ್ಯಸ್ —, ಲಿಗಾರ್ಯಸ್ —, ಡೆಸ್ಯಸ್ ಬ್ರೂಟಸ್ —, ಸಿನ್ನ —, ಮೆಟೆಲಸ್ ಸಿಂಬರ್ — } ಇತರ ಪಿತೂರಿಗಾರರು.
ಪೋರ್ಷ್ಯ — ಬ್ರೂಟಸನ ಪತ್ನಿ.
ಆರ್ಟೆಮಿಡೊರಸ್ — ಒಬ್ಬ ಅಜಿನದಾರ.
ಭವಿಷ್ಯ ಹೇಳುವವ —, ಕವಿ ಸಿನ್ನ — } ಮಧ್ಯೆ ಬರುವವರು.
ಲುಸಿಲ್ಯಸ್, ಟಿಟಿನ್ಯಸ್, ಮೆಸ್ಸಾಲಾ, ಯುವಕ ಕ್ಯಾಟೊ, ಮತ್ತು ವೊಲುಮಿನ್ಯಸ್ — } ಬ್ರೂಟಸನ ಪಕ್ಷದವರು,
ವಾರೊ, ಕ್ಲಿಟಿಯಸ್, ಸ್ಟ್ರಾಟೊ, ಲುಸ್ಯಸ್ ಮತ್ತು ಡಾರ್ಡನ್ಯಸ್ — } ಬ್ರೂಟಸನ ಸೇವಕರು.
ಪಿಂಡಾರಸ್ — ಕ್ಯಾಸ್ಯಸನ ಮಿತ್ರ, ಸೇವಕ,
ನಾಗರಿಕರು, ಸೈನಿಕರು, ಕಾವಲುಗಾರರು, ಇತರರು — } ರಂಗಸ್ಥಳದಲ್ಲಿ ಕಾಣಿಸಿಕೊಳ್ಳುವವರು.

ಸ್ಥಳ — ಹೆಚ್ಚಾಗಿ ರೋಮ್; ಅನಂತರ ಸಾರ್ಡಿಸ್ ಮತ್ತು ಫಿಲಿಪ್ಪಿಯ ಬಳಿ.

ನಾಟಕದ ಕೆಲವು ಪಾತ್ರಗಳ ಪರಿಚಯ.

“ಜೂಲಿಯಸ್ ಸೀಸರ್” ನಾಟಕದಲ್ಲಿ ಸೀಸರನ ಪಾತ್ರ ಪ್ರಧಾನವೆಂದೆನಿಸಿದರೂ ಅವನ ಕೊಲೆಯು ನಾಟಕದ ಮಧ್ಯೆ ಆಗಿಹೋಗುವುದರಿಂದ ಅನಂತರದ ಘಟನೆಗಳಲ್ಲಿ ಅದರಿಂದ ಪರಿಣಾಮವನ್ನುಳ್ಳದ್ದಾಗಿದೆ. ಬದಲಾಗಿ ಮಾರ್ಕಸ್ ಬ್ರೂಟಸನು ನಾಟಕದ ಉದ್ದಕ್ಕೂ ಕಾಣಿಸಿಕೊಳ್ಳುತ್ತಾನೆ. ಆದುದರಿಂದ ಅವನೇ ಪ್ರಧಾನ ಪಾತ್ರಧಾರಿಯೆಂದು ಕೆಲವರು ಹೇಳಿದರೆ ಅದಕ್ಕೂ ಒಪ್ಪಬಹುದು:—

ಜೂಲಿಯಸ್ ಸೀಸರ್.— ಯೋಧ, ರಾಜಕಾರಣಿ, ರಾಜ್ಯಗಳ ವಿಜೇತ, ರೋಮನ್ ಚಕ್ರಾಧಿಪತ್ಯವನ್ನು ವಿಸ್ತರಿಸಿದ ಜನಪ್ರಿಯ ನಾಯಕ.

ಮಾರ್ಕಸ್ ಬ್ರೂಟಸ್ — ವಿದ್ವಾಂಸ, ಶಾಸಕ, ಸೀಸರನ ಮಿತ್ರ; ಪಿತೂರಿಗಾರ, ಸಮತದರ್ಶಿ, ವಾಗ್ಮಿ, ತಾತ್ವಿಕ.

ಕೈಯಸ್ ಕ್ಯಾಸ್ಯಸ್ — ಶಾಸಕ, ಸೀಸರನ ವಿರೋಧಿ, ಪ್ರಧಾನ ಪಿತೂರಿಗಾರ, ಉತ್ತಮ ವ್ಯವಹಾರ ತಜ್ಞ.

ಮಾರ್ಕಸ್ ಅಂತೋನಿ — (ಅಥವಾ ಆಂಟೊನಿಯೊ.) ಶಾಸಕ, ವಾಗ್ಮಿ, ಸೀಸರನಲ್ಲಿ ಅಭಿಮಾನಿ, ಸೇನಾತಜ್ಞ, ಸಿಸ್ಸರೋನ ವಿರೋಧಿ.

ಒಕ್ಟೇವ್ಯಸ್ ಸೀಸರ್ — ಸೀಸರನ ೧೮ ವರ್ಷ ಪ್ರಾಯದ ಸಾಕುಮಗ, ನಿರ್ದಾಕ್ಷಿಣ್ಯ ಮಾತುಗಾರ, ಯೋಧ, ಮತ್ತು ಸಾಹಸಿ.

ಕ್ಯಾಲ್ಪೂರ್ನಿಯಾ — ಸೀಸರನ ಪತ್ನಿ. (ಅವರಿಗೆ ಮಕ್ಕಳಿಲ್ಲ) ಸರಳತೆಯ ಮೂಢನಂಬಿಕೆಯ ಹೆಣ್ಣು, ನಿಷ್ಠೆಯ ಮಾತುಗಾತಿ.

ಪೋರ್ಷ್ಯಾ — ಬ್ರೂಟಸನ ಹೆಂಡತಿ, ಮಾರ್ಕಸ್ ಕ್ಯಾಟೋ (ಸೀಸರನ ವಿರೋಧಿ)ನ ಮಗಳು, ಪತಿಯೊಡನೆ ಸಮಾನತೆಗೆ ವಾದಿಸಿದ ವೀರಸ್ತ್ರೀ.

ಕೈಯಸ್ ಲಿಗಾರ್ಯಸ್ — ಪಾಂಪೆಯ ಅಭಿಮಾನಿ, ಸೀಸರನ ವಿರೋಧಿ.

ಪುಬ್ಲಿಯಸ್ ಸಿಂಬರ್ — ಮೆಟೆಲ್ಲಸ್ ಸಿಂಬರನ ಸಹೋದರ.

ಕ್ಯಾಸ್ಕ — ಪಿತೂರಿಗಾರರಲ್ಲಿ ತೀವ್ರಗಾಮಿ.

ಮೆಸ್ಸಾಲ, ಟಿಟಿನ್ಯಸ್, ಕ್ಲಿಟಸ್, ಲೂಸಿಲ್ಯಸ್, ಕವಿ ಸಿನ್ನಾ, ಅರ್ಜಿದಾರ ಆರ್ಟೆಮಿಡೋರಸ್, ಲೂಸ್ಯಸ್ — ಇವರು ಇತರ ಪಾತ್ರಧಾರಿಗಳು.

ಯುವಕ ಕ್ಯಾಟೋ — ಬ್ರೂಟಸನ ಭಾವಮೈದುನ.

ಪಿಂಡಾರಸ್ — ಕ್ಯಾಸ್ಯಸನ ನಿಷ್ಠೆಯ ಸೇವಕ.

ಲಿಗಾರ್ಯಸ್ — ಸೀಸರನ ಇನ್ನೊಬ್ಬ ಬದ್ಧ ವಿರೋಧಿ.

ಸೀಸ್ಸರನ ಕೊಲೆ

ಅಂಕ ೧

ದೃಶ್ಯ ೧ – ರೋಮ್; ಒಂದು ಬೀದಿ.

ಫ್ಲೇವ್ಯಸ್, ಮರುಲ್ಲಸ್ ಮತ್ತು ಪುರಜನರು ಬರುವರು.

ಫ್ಲೇವ್ಯಸ್– ಮನೆಯತ್ತ ನಡೆಯಿರಿ,
ಎತ್ತ ಸೋಮಾರಿಗಳಿರಾ, ಮನೆಗೆ ಹೋಗಿರಿ; ರಜಾ
ದಿನವೇನೋ ಏನು? ತಮ್ಮ ಕಸುಬಿನವರೆಂಬುದರ
ಚಿಹ್ನೆಯಿಲ್ಲದೆ ಕೆಲಸದ ದಿವಸ ಹೀಗೆ ಅಲೆ
ದಾಡಬಾರದೆಂಬುದು ತಿಳಿಯದೆ? ಎಲಾ, ನಿನ್ನ
ಕೆಲಸವೇನು?

೧ನೇ ನಾಗರಿಕ– ಸ್ವಾಮಿ, ನಾನೊಬ್ಬ ಬಡಗಿ.

ಮರುಲ್ಲಸ್– ನಿನ್ನ ತೊಗಲು ಉಡುಗೆ ಅಳತೆಕೋಲುಗಳೆಲ್ಲಿ ಏ
ನಾದುವು? ಒಳ್ಳೆ ಹೊಸದಾದ ಉಡುಪನ್ನುಟ್ಟುಕೊಂ
ಡೇನನ್ನೆಸಗುತಿಹೆ? ಅಯ್ಯಾ, ನಿನ್ನ ಕಸುಬೇನು?

೨ನೇ ನಾಗರಿಕ– ಸ್ವಾಮಿ, ನಿಜಕ್ಕೂ ನಾನು ಒಳ್ಳೆಯ ಕೆಲಸಗಾ
ರನು; ನಾನು ಪಾದರಕ್ಷೆಯನ್ನು ಹೊಲಿಯುವವನೆಂ
ದು ನೀವು ಹೇಳಬಹುದು.

ಮರುಲ್ಲಸ್– ಹಾಗಲ್ಲ ಕಣೋ, ನಿನ್ನ ಕೆಲಸವೇನೆಂಬು
ದನ್ನು ನೇರವಾಗಿ ಹೇಳು.

೨ನೇ ನಾಗರಿಕ– ನನ್ನ ಕಸುಬೇ? ಸ್ವಾಮಿ, ನನ್ನಾತ್ಮ ಸಾಕ್ಷಿಯಂ
ತೆ ಹೇಳುವುದಾದರೆ ಹಳತು ಪಾದರಕ್ಷೆಗಳ
ಅಡಿಯನ್ನು ಸುಭದ್ರವಾಗಿಸುವವನು.

ಮರುಲ್ಲಸ್– ಎಲಾ ಕಪಟಿ, ನಿನ್ನ ಕಸುಬೇನು? ಕಸುಬು? ನೀಚ!
ಎತ್ತ ತುಂಟಾ, ಏನು ಕೆಲಸ ಮಾಡುತ್ತಿ?

೨ನೇ ನಾಗರಿಕ– ಸ್ವಾಮಿ, ಹಾಗಲ್ಲ, ನನ್ನ ಕೋರಿಕೆ ಇಷ್ಟೇ, ಕೋ
ಪಿಸಬೇಡಿ! ತಾವು ರೇಗಿದಿರಿ ಎಂದರೆ ಸ್ವಾಮಿ,
ನಾನು ನಿಮ್ಮನ್ನು ದಾರಿಗೆ ತರುವೆನು.

ಮರುಲ್ಲಸ್– ಎಲಾ, ಅದರರ್ಥವೇನು? ನನ್ನನು ಸರಿಪಡಿಸು
ವೆಯಾ? ಎಲಾ ನಿನ್ನ ಉದ್ಧಟತನವೇ!

೨ನೆ ನಾಗರಿಕ– ಸ್ವಾಮಿ, ಏನನ್ನುವಿರಿ! ನಿಮ್ಮನ್ನು ನಾನು ಪ್ರೀತ
ರಾಗಿಸುವೆನು.

ಫ್ಲೇವ್ಯಸ್– ನೀನೇನು ಮೋಚ್ಚೆಗಾರನೆ? ಹಾಗೆ ಏನು?

—೨ನೇ ನಾಗರಿಕ— ನಿಜ ಸ್ವಾಮಿ, ನನ್ನ ಜೀವನವೆ ಮೊಚ್ಚೆಗಾರಿಕೆ
ಚು ಉಳಿ ಮತ್ತು ಮೇಣ— ಇದರಿಂದಲ್ಲದೆ ನಾನು
ಇತರರ ವ್ಯವಹಾರ ಹೆಂಗಸರ ಪರಿವಾರ
ಎಂದು ಹೋಗಲಿಲ್ಲ; ಸ್ವಾಮಿ, ನಾನು ಹಳತಿನಿ
ಸಿದ ಪಾದರಕ್ಷೆಗಳ ವೈದ್ಯನೆಂದರೂ ಸರಿ!
ಬಹು ಶಿಥಿಲಾವಸ್ಥೆಗವು ತಲುಪಿದಾಗ ನಾನವು
ಗಳನ್ನು ಪುನರ್ರಚಿಸಿ ಹೊಸತಾಗಿಸುವೆನ
ಲ್ಲದೆ ನನ್ನ ಕೈಚಳಕದಿಂದ ಸಿದ್ಧಗೊಳಿಸಿದ
ತೊಗಲ ಕಾಲ್ಹೊದಿಕೆಯೊಡೆಯರ್, ನಾಗರಿಕರೆಂದೆ
ನಿಸಿದ ಜನ ನಡೆಯುವರು.

ಫ್ಲೇವ್ಯಸ್— ಸರಿ, ನೀನು ನಿನ್ನ ಕೆಲಸದ ತಾಣದಲ್ಲಿಲ್ಲ
ವೇಕೆ? ನೀನು ಏತಕ್ಕಾಗಿ ಈ ಜನವನ್ನು
ಬೀದಿಗಳಲ್ಲಿ ನಡೆಸುತ್ತಿರುವೆ ಏಕೆ?

—೨ನೇ ನಾಗರಿಕ— ಸ್ವಾಮಿ, ನಿಜ ಹೇಳ್ತೀನಿ? ಈ ಜನಗಳ ಪಾದ
ರಕ್ಷೆಗಳು ತೇಯ್ದಾಗ ನನಗೆ ಹೆಚ್ಚು ಕೆಲಸ ದೊ
ರಕುವುದೆಂಬ ಕಾರಣದಿಂದ! ಇದು ಮಾತ್ರವೇ
ಅಲ್ಲ; ಸ್ವಾಮಿ, ಕೇಳಿರಿ, ವಿಜೇತನಾಗಿ ನಗ
ರಕ್ಕೆ ಆಗಮಿಸುವಾ ಸೀಸರನನ್ನು ಸ್ವಾಗತಿ
ಸಲು ಇಂದು ದಿನವನ್ನು ರಜೆಯಂತೆ ಕಳೆಯಲೆಂದು!

ಮರುಲ್ಲಸ್— ಏನು ಕಾರಣಕ್ಕಾಗಿ ಈ ಸಂ—
ತೋಷ? ಇವನೆಲ್ಲಿ ಜಯಶಾಲಿಯಾಗಿ ಊರಿಗೆ
ಬರುತ್ತಿರುವನು? ಇವನ ರಥದ ಚಕ್ರಗಳು ಯಾ
ವಾವ ನೆಲವನ್ನು ಕ್ರಮಿಸಿ ಇವನು ವಶೀನು
ಕಪ್ಪ ಕಾಣಿಕೆಗಳನ್ನು ಪಡೆಯಲು ಇವನನ್ನು
ಹಿಂಬಾಲಿಸಿ ರೋಮಿಗೆ ಬರುತ್ತಿವೆ? ಎತ್ತೆ ಮರ
ಗೊರಡುಗಳೇ, ಶಿಲಾರೂಪಗಳೇ, ನೀವು ನಿರ್ಜೀವ
ವಸ್ತುಗಳಿಗಿಂತ ಕಡೆಗಿಟ್ಟಿಹಿರಿ; ರೋಮನ ದಾ
ರ್ಜನ್ಯ ಮೂರ್ತಿಗಳೇ, ನಿಮ್ಮ ಹೃದಯವು ಕಲ್ಲಾ
ಗಿವೆ. ಪಾಂಪೆಯನ್ನು ನೀವು ತಿಳಿದಿಲ್ಲವೇ? ಹಲವು
ಬಾರಿ ನೀವು ಕೋಟೆಯ ಪ್ರಾಂಗಣವನ್ನೇರಿ ನ
ಗರದ ಸ್ತಂಭಗಳನ್ನು ಎತ್ತರದ ಮನೆಗಳನ್ನು ಕಿ
ಟಿಕಿ ಹೊಗೆಯು ಹೋಗುವ ನಳಿಗೆಗಳಲ್ಲಿದ್ದರೂ ಮೇ
ಲೇರಿ ಚಿಕ್ಕ ಮಕ್ಕಳನ್ನು ತೋಳುಗಳಲ್ಲಿ ಇರು
ಸಿಕೊಂಡು ದಿನವಿಡೀ ಬಹು ತಾಳ್ಮೆಯಿಂದ ಆ
ಸೀನನಿದ್ದು ಪಾಂಪೆ ರೋಮನ ಬೀದಿಗಳನ್ನು ದಾ
ಟಿ ವೈಭವದಿಂದ ಹೋಗುವುದನ್ನು ನೋಡಲು

ಲ್ಲವೆ? ಅವನ ರಥವು ದೂರ ಬರುತ್ತಿದೆಯೆಂದೊಡನೆ
ಯೇ ನೀವು ಎದ್ದು ಟೈಬರ್ ಹೊಳೆಯು ತನ್ನ ಮತ್ತು
ಅದರ ದಂಡೆಗಳು ನಿಮ್ಮ ಸಿಳ್ಳಿನ ಧ್ವನಿಗೆ
ಬೆದರಿ ನಡುಗುವಂತೆ ನೀವು ಜಯಘೋಷವೆಬ್ಬಿಸ
ಲಿಲ್ಲವೆ? ಇದೀಗ ನಿಮ್ಮಲ್ಲಿರುವ ಉಡುಗೆಗಳಲ್ಲಿ
ಶ್ರೇಷ್ಠ ಬಟ್ಟೆ ಚೆಲುವಾದುದನ್ನು ಉಡುವಿರೇ? ಹಿಂದಿನ
ರಜೆಯನ್ನು ತಾವಾಗಿಯೇ ಪಡೆದುಕೊಳ್ಳುವಿರೇ?
ವೀರ ಪಾಂಪೆಯ ರಕ್ತವನ್ನು ಹರಿದ ದಾರಿಗ
ಗಿಯೇ ಇವನು ವಿಜೇತನೆನಿಸಿ ಬರಲು ಆ ದಾರಿ
ಉದ್ದಕ್ಕೂ ಇಂದು ಹೂಗಳನ್ನು ಚೆಲ್ಲುವಿರೇ? ಛೀ,
ನೀವೆಲ್ಲ ಮನೆಗಳಿಗೆ ಹಿಂದಿರುಗಿರಿ. ಕೃತಘ್ನ
ತಾ ವ್ಯಾಧಿಯೆಂಬ ತಾಪವನ್ನು ಶಿಕ್ಷೆಗೊಳಿಸದಂತೆ ತ
ಡೆಯಲು ದೇವರನ್ನು ಮೊರೆಯಾಗಿ ಪ್ರಾರ್ಥಿಸಿರಿ.

ಫ್ಲೇವಿಯಸ್ — ಹೋಗಿರಿ, ಎಲೆ ನಾಗರಿಕರೆ ಹೋಗಿರಿ. ಮಾಡಿದ
ಈ ತಪ್ಪಿಗೆ ಅಜ್ಞಾನಿಗಳೆನಿಸಿದ ಬಗೆಯ
ಜನವನ್ನು ಒಟ್ಟುಗೂಡಿಸಿ ಟೈಬರ್ ನದಿಯ ದಂ
ಡೆಯಲ್ಲಿ ಅವರನ್ನೆಲ್ಲ ನಿಲ್ಲಿಸಿರಿ; ಅಲ್ಲಿ ನಿ
ಮ್ಮ ಕಂಬನಿಯನ್ನು ಹರಿಸಿರಿ; ಆ ಹನಿಗಳು ಕಾ
ಲುವೆ ಮತ್ತು ತೊರೆಗಳ ಮೂಲಕ ಹರಿದು ಅವೆ
ಲ್ಲ ಎಲ್ಲದಕ್ಕಿಂತಲೂ ಮಹತ್ತೆನಿಸಿದ ಶಿಖ
ರಿಯ ದಡಗಳನ್ನು ಚುಂಬಿಸುವವರೆಗೂ ಅಳಿಸಿರಿ!

(ಪುರಜನರು ಹೋಗುವರು)

ನೋಡು, ಅವರು ಅತಿ ಕನಿಷ್ಠ ಲೋಹವು ನಿಜ ಅಲುಗ
ದಂತೆ ಮೌನದಲಿ ತಮ್ಮ ತಪ್ಪುಗಳನ್ನರಿತು
ಅಂತೆಯೆ ಅದೃಶ್ಯರಾದರು. ನೀನು ಆ ದಾರಿ
ಗಾಗಿ ರಾಜಧಾನಿಯ ಕಡೆ ಹೋಗು; ನಾನು ಈ
ಕಡೆಯಿಂದ ಬರುವೆ; ಅಲ್ಲಿರುವ ಪ್ರತಿಮೆಗಳ
ನ್ನು ಅಲಂಕರಿಸಿದ್ದರೆ ಆ ಅಲಂಕಾರವನ್ನೆ
ಕಿತ್ತು ಹಾಕು!

ಮರುಲ್ಲಸ್ — ನಾವು ಹಾಗೆ ಮಾಡೋಣವೇ? ಇದು ಲುಪರ್ಕಲ್
ಹಬ್ಬವೆಂದು ಹೀಗೂ ನಿನಗೆ ಗೊತ್ತಿದೆಯಷ್ಟೆ!

ಫ್ಲೇವಿಯಸ್ — ಅದು ಪರವಾಯಿಲ್ಲ; ಸೀಸರನ ವಿಜಯಸ್ಮಾರಕ
ದಿಂದ ಕೂಡಿದ ಪ್ರತಿಮೆಗಳಾವುದೂ ಅಲ್ಲಿ
ರುವುದು ಬೇಡ. ನಾನೇ ಹಾಗೆ ಹಾದು ಆ ಬೀ
ದಿಗಳಲ್ಲಿರುವ ಆ ಅಸಭ್ಯತೆಯನ್ನೆಲ್ಲ ಕಿ
ತ್ತು ಹಾಕುವೆನು. ನೀನು ಅವು ಎಲ್ಲೆಲ್ಲಿ ತುಂಬಾ

ಕಾರ್ಣಾತ್ತ್ಯವೋ ಅಲ್ಲಿಲ್ಲ. ಆದನ್ನುತ್ತಿಗೆ. ತುಂಬ
ಉದ್ದ ಬೆಳೆಯುತ್ತಿರುವ ಸಂಸಾರದ ರೆಕ್ಕೆಗಳ
ಗರಿಗಳನ್ನು ಕತ್ತರಿ ಅವನು ದಿಂದ ಸಾಮಾ
ನ್ಯ ಅಂತನ್ನ ನನು ಹಾರಾಡುವಂತವನಾಗಿ
ಹಾರುವುದು. ಮಾನವರ ದೃಷ್ಟಿಗೂ ಮೀರಿದ ಎತ್ತ
ರಕ್ಕೆ ಹಾರಿ ನಮ್ಮನ್ನೆಲ್ಲ ಭಯಭೀತರಂತೆ
ಗಿಡುವವನು ಬೇರಾರು ? (ಹೋಗುವರು)

ದೃಶ್ಯ — ೨ ; ರೋಮ್ — ಸಾರ್ವಜನಿಕ ಸ್ಥಳ.

(ಸೀಸರ್, ಆಂತೋನಿ, ಕ್ಯಾಲ್ಪೂರ್ನಿಯಾ, ಪೋರ್ಷಿಯ, ಡೆಸಿಯಸ್, ಸಿಸಿರೋ, ಬ್ರೂಟಸ್, ಕ್ಯಾಸಿಯಸ್, ಮತ್ತು ಕಾಸ್ಕಾ ದೊಡ್ಡ ಜನಸಂದಣಿಯೊಡನೆ ಗೂಡಿ ಮೆರವಣಿಗೆಯಂತೆ ಬರುವರು. ಅವರೊಡನೆ ಒಬ್ಬ ಭವಿಷ್ಯ ಹೇಳುವವನೂ ಬರುವನು.)

ಸೀಸರ್ — ಕ್ಯಾಲ್ಪೂರ್ನಿಯಾ

ಕ್ಯಾಸ್ಕ — ಮೌನವಾಗಿರಿ, ಮೌನ! ಹಾ, ಸೀಸರನು, ಸೀಸರನು ಮಾತಾಡುವುದು. (ಸಂಗೀತ ನಿಲ್ಲುವುದು)

ಸೀಸರ್ — ಕ್ಯಾಲ್ಪೂರ್ನಿಯಾ —

ಕ್ಯಾಲ್ಪೂರ್ನಿಯಾ — ಇಲ್ಲಿದ್ದೇನೆ, ನನ್ನ ಒಡೆಯರೆ,

ಸೀಸರ್ — ಆಂಟೋನಿಯಸ್‌ನ ದಾರಿಯ ಎಡೆಯಾಗಿ ಅಲ್ಲಿ ನಿಂತುಕೊ! ಆಂಟೋನಿಯೊ —

ಆಂಟೋನಿ — ಏನು ಸ್ವಾಮಿ, ಸೀಸರ್;

ಸೀಸರ್ — ವೇಗದಲ್ಲಿ ಮುಂದುವರಿದು ಹೋಗುವಾಗ ಕ್ಯಾಲ್ಪೋರ್ನಿಯಳನ್ನು ಮುಟ್ಟಲು ಮರೆಯಬೇಡ. ನಮ್ಮ ಹಿರಿಯರ ಮಾತಿನಂತೆ ಇಂಥ ಪವಿತ್ರ ಪಯಣದಿಡಿಯಲ್ಲಿ ಬಂಜೆಯರನ್ನು ಸ್ಪರ್ಶಿಸಿದರೆ ಅವರ ಬಂಜೆತನದ ಶಾಪವೇ ಪರಿಹಾರವಾಗುವುದು.

ಆಂಟೋನಿ — ನಾನು ನೆನಪಿಟ್ಟುಕೊಳ್ಳುವೆನು. ಸೀಸರನು "ಹೀಗೆ ಮಾಡು" ಎನ್ನುತಾಜ್ಞಾಪಿಸಿದರಂತೆಯೇ ಮಾಡಲಾಗುವುದು.

ಸೀಸರ್ — ಹೂಂ, ನಡೆಯಲಿ ಗಾಯನ! ಶುಭಕಾರ್ಯಗಳನ್ನು ನಡೆಸದೆಯೆ ಇರಬೇಡಿ. (ಸಂಗೀತ ಪ್ರಾರಂಭ)

ಭವಿಷ್ಯ ಹೇಳುವವ — ಸೀಸರ್ —

763

ಸೀಸರ್ — ಆಹಾ, ಅದಾರು ಕರೆದರು ?
ಕ್ಯಾಸ್ಕ — ಎಲ್ಲ ಮೌನವಾಗಲಿ, ಮೌನ.

(ಸಂಗೀತ ನಿಲ್ಲುವುದು)

ಸೀಸರ್ — ಈ ಜನ ನಿಬಿಡದಲ್ಲಿ ಅದಾರು ನನ್ನನ್ನು ಕರೆಯುವರು ? ಇಲ್ಲಿಯ ಈ ಇನಿವಾದ್ಯಗಳಿಗಿಂತಲೂ ಕರ್ಕಶ ನಾಲಗೆಯ ಕರ್ಕಶ ಧ್ವನಿಯು ಮೇಲೇರಿದ್ದು ಕೇಳಿಸುತ್ತಿದೆ. ಸೀಸರ್ ಎಂದೆನ್ನು! ಮಾತಾಡು! ಸೀಸರ್ ಆಲಿಸಲು ಇದೋ ಸಿದ್ಧನಿರುವನು.

ಭವಿಷ್ಯ ಹೇಳುವವ — ಈ ಮಾರ್ಚ್ ಮಾಸದಲ್ಲಿ ಬರುವಮಾವಾಸ್ಯೆಯ ವಿಷದಿನ! ಎಚ್ಚರ!

ಬ್ರೂಟಸ — ನೀನು ಮಾರ್ಚ್ ತಿಂಗಳ ವಿಷದಿನದಂದು ಎಚ್ಚರಿಕೆ, ಎಂದೊಬ್ಬ ಜೋಯಿಸ ಭವಿಷ್ಯವನ್ನುವನು.

ಸೀಸರ್ — ಆವನನ್ನು ನನ್ನ ಮುಂದೆ ತನ್ನಿರಿ; ಆವನ ಮುಖವನ್ನು ನಾನು ಒಮ್ಮೆ ನೋಡುವೆ.

ಕ್ಯಾಸ್ಯಸ್ — ಎಲಾ ಜೋಯಿಸನೆ, ಈ ಜನಸಂದಣಿಯಿಂದೀಚೆಗೆ ಸೀಸರನೆದುರಿಗೆ ಬಂದು ನಿಲ್ಲು (ಬರುವನು)

ಸೀಸರ್ — ನನಗೀಗ ನೀನು ಏನನ್ನುತ್ತೀ? ಪುನಃ ಹೇಳು.

ಭವಿಷ್ಯ ಹೇಳುವವ — ಈ ಮಾರ್ಚ್ ಮಾಸದಲ್ಲಿ ಬರುವಮಾವಾಸ್ಯೆಯ ವಿಷದಿನ! ಎಚ್ಚರ!

(ಹಿಂದಿರುಗುವನು)

ಸೀಸರ್ — ಅವನಿಗಾವುದೋ ಸ್ವಪ್ನ! ಆ ಮರುಳನನ್ನು ಅಂತೆಯೇ ಬಿಡುವ!

(ಬ್ರೂಟಸ್ ಮತ್ತು ಕ್ಯಾಸ್ಯಸ್ ಹೊರತು ಇತರರೆಲ್ಲರೂ ಹೋಗುವರು.)

ಕ್ಯಾಸ್ಯಸ್ — ಮುಂದೇನು ಎಂಬುದನ್ನು ಹೋಗಿ ನೋಡುವೆಯಾ ?
ಬ್ರೂಟಸ್ — ಅದಕ್ಕೆ ನಾನಲ್ಲ.
ಕ್ಯಾಸ್ಯಸ್ — ನೀನೇ ಹೋಗೆಂದು ಕೇಳಿಕೊಳ್ಳುತ್ತಿದ್ದೇನೆ.
ಬ್ರೂಟಸ್ — ನಾನು ಅಷ್ಟು ಲವಲವಿಕೆಯುಂಡೋಡಗನಂತವನು ಅಲ್ಲ. ನನ್ನಲ್ಲಿ ಆಂಟೋನಿಯನಲ್ಲಿರುವಷ್ಟು ಚುರುಕು ತೀಕ್ಷ್ಣಬುದ್ಧಿಯೇನೂ ಇಲ್ಲ; ಕ್ಯಾಸ್ಯಸ್, ನಿನ್ನನು ನಿರಾಶೆಗೀಡಾಗಿಸಲಾರೆನು. ನಿನ್ನನಿಲ್ಲಿ ಬಿಡುವೆನು.

ಕ್ಯಾಸ್ಯಸ್ — ಅದೇನೋ ನಿನ್ನಲ್ಲಿ ಇತ್ತೀಚೆಗೆ ನೋಡುತ್ತಿರುವೆನು. ನಿನ್ನ ಕಣ್ಣಿಂದಲೇ ನೋಡುವ ನಿನ್ನ ಆ ಸಹೃದಯ ಪ್ರೀತಿಯು ಅದೇಕೋ ಈಗ ನನಗೆ ತೋರುತ್ತಿಲ್ಲ. ನಿನ್ನನ್ನು ಅಭಿಮಾನಿಸುವ ನಿನ್ನ ಮಿತ್ರನೊಡನೆಯೆ ನೀನು ತುಂಬ ಕಟುವಾ

764

ರೀತಿಯನ್ನು ತೋರಿಸುವುದಲ್ಲದೆ ವಿಚಿತ್ರವಾಗಿ
ಯೂ ವರ್ತಿಸುತ್ತಿರುವೆ!

ಬ್ರೂಟಸ್— ತಪ್ಪು ತಿಳಿದುಕೊಳ್ಳುವುದು ಬೇಡ, ಎಲೈ ಕ್ಯಾ
ಸ್ಸಿಯಸ್, ನನ್ನ ಮುಖವು ಹಾಗೆ ಕಾಣುವುದಾದರೆ ಅ
ದು ನನ್ನ ತಾಪತ್ರಯಗಳನ್ನು ನನ್ನಲ್ಲೇ
ಹೊತ್ತುಕೊಂಡುದರಿಂದ! ಇತ್ತೀಚೆಗೆ ನನ್ನದೇ
ಅನುಭವಕ್ಕನುವಾಗಿಯೆಂಬಂತೆಯೇ ಬೇರಾರ
ಮತ್ತು ಉದ್ರೇಕಕ್ಕೆ ಈಡಾಗಿದ್ದು ನನ್ನ,
ವರ್ತನೆ ನಡೆನುಡಿಗಳನ್ನು ಬಹುಶಃ ಕಲ್ಮಿಗ
ಡಿಸಿದೆ; ಹಾಗಾದ ಮಾತ್ರಕ್ಕೆ ನನ್ನ ನೆಚ್ಚಿನ
ಮಿತ್ರರು, ಅವರಲ್ಲಿ ನೀನೂ ಒಬ್ಬನು ಕ್ಯಾಸ್ಸಿಯಸ್,
ಬೇಸರ ಪಡದೆಯೇ ಇರಲಿ, ಅಥವಾ ಮನನೊಂದ್ಸೇ
ಗೊಳಗಾದ ಬಡ ಬ್ರೂಟಸನು ನಿರ್ಲಕ್ಷಿಸಿದ
ನೆಂದೂ ಇತರರಲ್ಲಿ ಪ್ರೀತಿ ವಿಶ್ವಾಸಗಳು
ನಿಚ್ಚವನ ರೀತಿಯನ್ನು ತೋರ್ಪಡಿಸಿಕೊಳ್ಳಲು ಮ
ರೆತಿರುವನೆಂದೂ ಊಹಿಸದಿರಲಿ!

ಕ್ಯಾಸ್ಸಿಯಸ್— ಹಾಗಾದರೆ ಬ್ರೂಟಸ್, ನಿನ್ನ ಉದ್ರೇಕವ
ನ್ನು ತಪ್ಪಾಗಿ ನಾನು ತಿಳಿದುಕೊಂಡೆನು; ನಿಮ್ಮ
ಲ್ಲಿದ್ದ ಮನನ, ಚಿಂತನಕ್ಕೆ ಯೋಗ್ಯವಾದ ಗುಣಗಳ
ರಬೇಕಾದ ನನ್ನ ಹೃದಯವು ಎಲ್ಲಿ ಹುದುಗಿದೆ
ಯೆಂದು ತಿಳಿಯೆನು. ಮಾನ್ಯ ಬ್ರೂಟಸನೆ, ಹೇಳು ನಿನಗೆಯೆ
ನಿನ್ನ ಮುಖವನ್ನು ನೋಡಲಿಕ್ಕೆ ಸಾಧ್ಯವಿದೆಯೇ?

ಬ್ರೂಟಸ್— ಇಲ್ಲ ಕ್ಯಾಸ್ಸಿಯಸ್, ಆದೇನೋ ಬಿಂಬ
ಪ್ರತಿಬಿಂಬಯಿಂದು ಮೊದಲಾಗಿಯಲ್ಲದೆ ಕಣ್ಣಿ
ಗೆ ತನ್ನನು ತಾನೆ ನೋಡಲಿಕ್ಕೆ ಸಾಧ್ಯವಿಲ್ಲ.

ಕ್ಯಾಸ್ಸಿಯಸ್— ಸರಿ ಹೇಳಿದಿ. ನಿನ್ನನೆಲ್ಲರೂ ನ್ಯ
ಬ್ರೂಟಸ್, ನಿನಗರಿಯದೆ ನಿನ್ನಲ್ಲಿ ಅಡಗಿರುವ
ಯೋಗ್ಯತೆಗಳನ್ನು, ನಿನ್ನ ಕಣ್ಣಲ್ಲಿ ನೀನೆ ನೋ
ಡಬಹುದಾದ ಕನ್ನಡಿಗಳು ನಿನ್ನ ಬಳಿಯಿಲ್ಲ.
ಚಿರಂಜೀವಿ ಸೀಸರನನ್ನುಳಿದು ರೋಮಿನ ಬಹು
ಜನ ಶಿಷ್ಟರು ಬ್ರೂಟಸನನ್ನು ಕುರಿತು ಮಾತಾಡು
ವುದನ್ನು ನಾನು ಕೇಳಿರುವೆ; ಕಾಲದ ದಬ್ಬಾ
ಳಿಕೆಗೆ ಒಳಗಾಗಿ ನೊಂದು ಬೆಂದಾದ ಆ
ಜನ ಪೂಜ್ಯ ಬ್ರೂಟಸ್‌ಗೆ ಆವನ ಕಣ್ಣಲ್ಲಿ ದೃಷ್ಟಿಯು
ಸರಿಯಾಗಿ ಇದ್ದಿದ್ದರೆ ಒಳ್ಳೆಯದಿತ್ತೆಂದು
ಹೇಳಿದ್ದಾರೆ!

ಬ್ರೂಟಸ್ — ನನ್ನಲ್ಲಿ ಇಲ್ಲದುದನ್ನು ನನ್ನಲ್ಲಿ ಇದೆಯೆಂದು
ನನಗೆ ತೋರುತ್ತ, ನೀನು ಅದಾವ ಅಪಾಯಕ
ರ ಪರಿಸ್ಥಿತಿಗೆ ನನ್ನನ್ನು ಒಯ್ಯುತ್ತೀಯೆ, ಕ್ಯಾಸ್ಸಿಯಸ್?

ಕ್ಯಾಸ್ಸಿಯಸ್ — ಅಂತಾದರೆ ಮಾನ್ಯ
ಬ್ರೂಟಸನೆ, ಆಲಿಸಲು ಸಿದ್ಧನಾಗು! ನಿನ್ನ
ನ್ನು ನೀನಾಗಿಯೆ ನಿನ್ನ ಪ್ರತಿಬಿಂಬದಲ್ಲಿ ನೋಡಲು
ಅಸಾಧ್ಯವು ಎಂದು ನೀನು ತಿಳಿದಿರುವುದರಿಂದ
ನಿನ್ನ ಕನ್ನಡಿಯೇ ಆದ ನಾನು ನಿನಗಿ
ನ್ನೂ ಗೊತ್ತಿಲ್ಲದ ನಿನ್ನ ವ್ಯಕ್ತಿತ್ವದ ಒಂದು
ಮುಖವನ್ನಾದರೂ ಕಂಡುಹಿಡಿದು ನಿನಗೆ ತೋರಿಸು
ವೆನು. ಬುದ್ಧಿಜೀವಿ ಬ್ರೂಟಸನೆ, ನನ್ನಲ್ಲಿ ಮ
ತ್ಸರಪಡಬೇಡ. ನಾನೊಬ್ಬ ಸಾಮಾನ್ಯ ಹಾಸ್ಯಗಾ
ರನಾಗಿದ್ದರೆ ಪ್ರತಿಯೊಬ್ಬ ನಿವೇದಕನಲ್ಲಿ
ನನಗೆ ಅಭಿಮಾನವಿದೆಯೆಂದು ಆಣೆಯಿಟ್ಟು ಮ
ರುಳುಗೊಳಿಸುತ್ತಿದ್ದೆನೆಂದು ನೀನಿದನಿಲ್ಲವನು
ತಿಳಿದಿರುವಿಯೆಂದು ನಾನು ಜನವ ಜರೆಯುತಲಿ
ಅವರನ್ನು ಅನಂತರ ಬಲದಿಂದ ಅಪ್ಪುವೆನು;
ನಿನಗೆ ಗೊತ್ತಿದೆಯೋ ಏನೋ, ಗೊಂದಲವೆಬ್ಬಿಸುವ
ಜನಕೆಲ್ಲ ಆತಿಥ್ಯವನ್ನೀಯುತಿಹೆನೆಂದು
ಹೇಳಿಕೊಳ್ಳುತ್ತೇನೆ; ಅನಂತರ ಅವರು ನ
ನ್ನನ್ನು ಅಪಾಯಕಾರಕನೆಂಬುದಾಗಿ ಎಣಿಸುವರು!

(ಜನರ ಜೈಕಾರ ಕೇಳಿಸುವುದು)

ಬ್ರೂಟಸ್ — ಅದೇನದು ಆರ್ಭಟ? ಅದರ ಅರ್ಥವೇನು? ಸೀ
ಜರನನ್ನು ಒಬ್ಬ ಮಹಾರಾಜನೆಂದು ಗಣಿಸುವ
ಜನರಿಗೆ ನಿಜವಾಗಿಯೂ ನಾನು ಹೆದರುತ್ತೇನೆ!

ಕ್ಯಾಸ್ಸಿಯಸ್ — ಏಲಾ, ನೀನು ಅದಕ್ಕೆ ಹೆದರುವಿಯಾ?
ಹಾಗಾದರೆ ಅಂತಾಗಲು ನೀನು ಇಚ್ಛಿಸುವು
ದಿಲ್ಲವೆಂದು ನಾನು ತಿಳಿಯಲೆ?

ಬ್ರೂಟಸ್ — ನಾನು ಇಚ್ಛಿಸೆನು ಕ್ಯಾಸ್ಸಿಯಸ್, ಆದರೂ ನಾನು
ಅವನನ್ನು ತುಂಬಾ ಅಭಿಮಾನಿಸುತ್ತೇನೆ. ಆ
ದರೆ ನೀನು ಇಲ್ಲಿ ನನ್ನನ್ನು ಏಕೆ ಈ ವರೆ
ಗೆ ನಿಲ್ಲಿಸಿದೆ? ನೀನು ನನಗೆ ಹೇಳಲಿಕ್ಕಿರುವ
ವಿಷಯವೇನು? ಅದು ಸಾರ್ವಜನಿಕ ಹಿತದಿಂದ
ಎಂದೆನಿಸಿ ಒಂದು ಕಣ್ಣಲ್ಲಿ ನಾನು ನನ್ನದೇ
ಆತ್ಮಗೌರವವನ್ನು ಮತ್ತೊಂದರಲ್ಲಿ ಸಾವು
ಎಂದು ಇಟ್ಟಿದ್ದೇನೆ. ಇವೆರಡರ ಬಗ್ಗೆ ನಾ

ನು ನಿರ್ಲಕ್ಷ್ಯದಿಂದಿದ್ದರೂ ದೇವರಾಣೆಗೂ ನಾ
ನು ಸಾವಿಗೆ ಹೆದರುವುದಕ್ಕಿಂತ ಹೆಚ್ಚಾಗಿ ನಿನ್ನ
ಅಭಿಮಾನಾದಿಗಳನ್ನು ಮೆಚ್ಚುತ್ತೇನೆ.

ಕ್ಯಾಸ್ಯಸ್ — ನೀನು ತೋರಿಕೆಗೆ ಈ ರೀತಿ ನಮಗೆ ಕಾಣಿಸಿ
ಕೊಳ್ಳುತ್ತಿರುವಿಯೆಂಬುದರ ಜತೆಗೆ, ಬ್ರೂಟಸನೆ,
ನಿನ್ನಲ್ಲಿ ಮಾನಾಭಿಮಾನವೂ ಇದೆಯೆಂದು
ನನಗೆ ಗೊತ್ತು. ಆ ಅಭಿಮಾನ ಗೌರವದ ವಿಷ
ಯವಾಗಿಯೇ ನನ್ನ ಕಥೆ! ನೀನು ಮತ್ತಿತರ ಜನ
ತಾವೆತ್ತಿದ ಈ ಜನ್ಮದ ಬಗೆ ಏನು ಯೋ
ಚಿಸುತ್ತಾರೋ ನಾನು ಹೇಳಲಾರೆನು. ಆದರೂ
ನನ್ನ ಮಟ್ಟಿಗೆ ಹೇಳುವುದಾದರೆ ನಾನು ನ
ನ್ನಿಂದಲೇ ಭಯಕ್ಕೊಳಗಾಗಿ ಬದುಕುವ ಆಶೆ
ಯೇನೂ ನನಗೆ ಇಲ್ಲ. ಸೀಸರನ ಹಾಗೆಯೇ
ಸ್ವತಂತ್ರ ಜೀವಿಯಾಗಿ ನಾನೂ ಹುಟ್ಟಿದೆನು.
ನೀನೂ ಅದೇ ರೀತಿ! ನಾವು ಚೆನ್ನಾಗಿ ಸಲ
ಹಲ್ಪಟ್ಟಿದ್ದೇವೆ; ನಾವಿಬ್ಬರೂ ಚಳಿಗಾಲದ
ಶೈತ್ಯವನ್ನು ಅವನಂತೆಯೇ ಸಹಿಸಬಲ್ಲೆವು. ಒ
ರಟುಗಾಳಿ ಪತ್ತಳಿಗೆ ಟೈಬರ ನದಿ ನೊರೆಯುಂ
ಡುಕ್ಕಿ ದಡಗಳನ್ನು ಬಡಿಯುತ್ತಿರುವಾಗ ಸೀ
ಸರನು ನನಗೆ ಹೀಗೆಂದನು, "ಕ್ಯಾಸ್ಯಸ್, ನೀನು
ಕೋಪಗೊಂಡಂತೆ ತೆರೆಗಟ್ಟಿ ಹರಿಯುತ್ತಿರುವ
ಈ ಹೊಳೆಗೆ ಈಗ ನನ್ನೊಡನೆ ಹಾರಿ ಈಚೆ
ದೂರದಿಯ ಆಚೆ ದಡಕ್ಕೆ ಜತೆಗೂಡಿ ಈಜುವಿಯಾ?"
ಹೀಗೆ ಅವನು ಹೇಳಲು ನಾನು ಬೇರೇನೂ ಉ
ಪಾಯವಿಲ್ಲವೆಂದು ಹೊಳೆಗೆ ಹಾರಿದೆನು. ಅವನಿ
ಗೂ ಹಾರುವಂತೆ ಸಂಜ್ಞೆ ಮಾಡಿದೆನು. ಅವನೂ
ಹಾರಿದನು. ಆ ಹೊಳೆಯ ನೀರಿನ ಪ್ರವಾಹ ದನಿಗೂಡುತ್ತಿ
ರಲು ನಾವು ನಮ್ಮ ಮಾಂಸಲ ಕೈಗಳನ್ನು ಬ
ಡಿಯುತ್ತಾ, ಹುಮ್ಮಸ್ಸಿನ ದೀನಿಸಿ: ದ್ವಂದ್ವವೆಂಬಂ
ತೆ ಹೋರಾಡಿ ಈಜಿದೆವು. ಆದರೆ ನಾವು ಆ
ಚೆ ದಡವನ್ನು ತಲುಪುವ ಮುಂಚೆಯೇ ಸೀಸರನು
"ಹಾ ಕ್ಯಾಸ್ಯಸನೆ, ನನಗೆ ಕೈ ನೀಡು, ಸಹಕರಿಸು,
ನಾನು ಮುಳುಗುತ್ತಿದ್ದೇನೆ," ಎಂದೆನುತ: ಬೊಬ್ಬಿ
ಟ್ಟನು. ಆಗ ನಾನಾದರೋ ನಮ್ಮ ಪೂರ್ವಜನು —
ಆ ಏನಿಯಸನು ಟ್ರಾಯ್ ಯು ಅಗ್ನಿಗೆ ಅಂದು ಆ
ಹುತಿಯಾಗಿ ಉರಿಯುತ್ತಿದ್ದಾಗ ಎಂಚಿಸಿಸನು ಕ

ರಡಿಯುವನ್ನು ತನ್ನ ಹೆಗಲಲ್ಲಿ ಹೊತ್ತು, ಆ ಬೆಂ
ಕಿಯಿಂದ ಅವನು ಪಾರಾಗಿಸಿದಂತೆ ನಾನು ಟೈ
ಬರದ ಅಲೆತೆರೆಯಲ್ಲಿ ಸುಸ್ತಾಗಿದ್ದ ಸೀ
ಸ್ಸರನನ್ನು ಮೇಲೆತ್ತಿದೆನು. ಈಗ ಆ ವ್ಯಕ್ತಿ
ದೇವರ ಸಮಾನನಾಗಿದ್ದಾನೆ! ಸೀಸ್ಸರನೀಗ
ವನ್ನೀಗ ಅಲೋಚಿಸುತ್ತ ತಲೆ ಅಲ್ಲಾಡಿಸಿದ
ರೆ ನಾನು ಅವನಿಗೆ ಮೈಬಾಗಿ ವಂದಿಸಬೇಕು;
ಸ್ಪೈಯಿನ್‌ನಲ್ಲಿ ಅವನಿಗೆ ಒಮ್ಮೆ ಜ್ವರ ಬಂದಿ
ದ್ದಾಗಲೇ ಅವನ ಮೈನಡುಕವೆಂತು ಇದ್ದಿತೆಂ
ಬುದನ್ನು ಆ ದಿನ ನಾನು ನೋಡಿದೆನು; ಅದು ನಿಜ, ಇ
ದೀಗ ನಮ್ಮ ಮಹಾತ್ಮನು ಜ್ವರದ ಕಾವನ್ನು
ತಡೆಯಲಾಗದೆ ನಡುಗುತ್ತಿದ್ದನು; ಅವನ ನಿರ್ವೀ
ರ್ಯದ ತುಟಿಗಳು ಒಣಗಿ ಕಳೆಗೆಟ್ಟು ಹೋಗಿತ್ತು. ಇಂ
ದೀಗ ಲೋಕವನ್ನು ಬೆದರಿಸುವ ಕಣ್ಣುಗಳು ಕಾಂ
ತಿಯಿಲ್ಲದೆ ಇದ್ದುವು; ಅವನು ಬೇನೆಯಿಂದ ಹುಂ
ಕರಿಸುವುದನ್ನು ಆಲಿಸಿದೆನು; ರೋಮನ ಜನವೆಲ್ಲ
ತನ್ನನ್ನು ತುತಿಸುವಂತೆ ತನ್ನ ಭಾಷಣಗ
ಳನ್ನು ಅವರ ಪುಸ್ತಕಗಳಲ್ಲಿ ಬರೆಯುವಂ
ತೆ ಹುಕುಂ ಕೊಡುತ್ತಿದ್ದ ನಾಲಗೆಯು, ಆಹಾ ಈ
ಸೊಸೆತೆಗೊಳಗಾದ ಎಳೆ ಹುಡುಗಿಯು ಕೇಳುವಂತೆ,
"ನನಗೆ ಒಂದಿಷ್ಟು ಕುಡಿಯಲಿಕ್ಕೆ ಕೊಡು, ಟಿಟಿನ್ಯಸ್"
ಎಂಬುದಾಗಿ ಮೊರೆಯಿಡುತ್ತ! ಹಾ ದೇವತೆಗಳಿರಾ,
ನನಗೆ ಇದು ನಿಜಕ್ಕೂ ಆಶ್ಚರ್ಯಕರವಾಗಿ
ಇದೆ; ಅಷ್ಟು ದೌರ್ಬಲ್ಯ ಮನೋಗತನಾದ ವ್ಯಕ್ತಿಯು
ಠೀವಿಯಿಂದ ಈ ಜಗವನ್ನು ತನ್ನ ಕರತಲ
ದಲ್ಲಿರುವಂತೆ ಇಡುವಂತಾಯಿತು! ಆಹಾ!

(ಜನರ ಜಯಕಾರ ಧ್ವನಿ ಕೇಳಿಸುವುದು

ಬ್ರೂಟಸ್ — ಮತ್ತೊಂದು ಅದೇ ಜಯಕಾರ!
ಸೀಸ್ಸರನ ತಲೆಗೆ ಹೇರುವ ಹೊಸತು ಸನ್ಮಾನ
ಗೌರವಗಳಿಗಾಗಿ ಜನ ಕೈತಟ್ಟುತ್ತಿರುವುದು ತೆ
ಟ್ಟುವುದಾಗಿರಬಹುದೆಂದು ತೋರುತ್ತದೆ!

ಕ್ಯಾಸ್ಸಿಯಸ್ — ಏನಯ್ಯಾ ಇದು? ಈ ಇಕ್ಕಟ್ಟಿನ ಲೋಕದ
ಲ್ಲಿ ಅವನೊಬ್ಬ ಪ್ರಚಂಡಾಕಾರ ಮಾನವನಂತೆ
ಕಾಲುಗಳನ್ನು ಅಗಲಿಸಿ ನಿಂತಿರುವನಲ್ಲ! ಕೀ
ವಲ ಅಲ್ಪ ಜೀವಿಗಳೆನಿಸಿದ ನಾವು ಆ ಬೃಹ
ದಾಕಾರದ ಕಾಲುಗಳ ಅಡಿಗಾಗಿ ನಡೆದು ಇ

ಸುತ್ತಿದಾಗ ನಾವು ಅವಮಾನಕರವಾದ ಮರಣ ಹೊಂದಲು ರಹಸ್ಯದ ಸಮಾಧಿಗಳನ್ನು ಹುಡುಕುವೆವು; ಜನ ಒಮ್ಮೊಮ್ಮೆ ತಮ್ಮ ವಿಧಿಗೆ ತಾವೇ ಅಧಿಕಾರಿಗಳಾಗುತ್ತಾರೆ; ಪ್ರಿಯ ಬ್ರೂಟಸನೆ, ತಪ್ಪು ನಮ್ಮ ನಕ್ಷತ್ರಗಳದಲ್ಲ; ನಮ್ಮದ್ದೇ ಆಗಿದೆ. ಅಡಿಯಾಳುಗಳಾಗಿ ನಾವು ಇದ್ದೇವೆ; ಬ್ರೂಟಸ್ ಮತ್ತು ಸೀಸರ್; ಈ ಸೀಸರ್, ಇದ್ದೇನು ಹೆಚ್ಚು? ಅದರಲ್ಲೇನಿದೆ? ನಿನ್ನ ಹೆಸರಿಗಿಂತ ಆ ಹೆಸರು ಹೆಚ್ಚಾಗಿ ಧ್ವನಿಸಲು ಏನಿದೆ? ಎರಡನ್ನೂ ಬರೆ; ನಿನ್ನದೂ ಶ್ರೇಷ್ಠ ಸುಂದರವಾದ ಹೆಸರಾಗಿದೆ; ಅವುಗಳನ್ನು ಉಚ್ಚರಿಸು; ನಿನ್ನ ಹೆಸರು ಸಹ ಬಾಯ್ತುಂಬುವಷ್ಟೇ ಇದೆ; ತೂಗಿ ನೋಡು; ಸರಿಸಮವಾಗಿಯೇ ಇದೆ; ಮಾಂತ್ರಿಕವಾಗಿ ಬ್ರೂಟಸ್ ಹೆಸರು ಸೀಸರನಷ್ಟೇ ಸ್ಫೂರ್ತಿದಾಯಕವಾಗಿದೆ —

(ಹೊರಗೆ ಜನರ ಜಯಘೋಷ)

ಈಗ ಎಲ್ಲ ದೇವರುಗಳ ಹೆಸರಿನಲ್ಲಿ ಹೇಳು ಏನಾದರೆ ಇಷ್ಟು ಪ್ರಸಿದ್ಧಿಯನ್ನು ಪಡೆದ ಸೀಸರನು ಸೇವಿಸುವ ಆಹಾರ ಯಾವುದು? ಓ ಕಾಲಪುರುಷಾ, ನೀನು ನಾಚಿಕೆಗೊಳಗಾದೆ. ಓ ಹಾ ರೋಮ್ ಸಾಮ್ರಾಜ್ಯವೆ, ವೀರ ಜನಾಂಗದ ಪರಂಪರೆಯನ್ನು ನೀನು ಕಳೆದುಕೊಂಡೆ. ಮಹಾಪ್ರಳಯದ ದಿನದಿಂದೀಚೆಗೆ ಜಗತ್ತು ಒಬ್ಬನೇ ವ್ಯಕ್ತಿಯ ಪ್ರಸಿದ್ಧಿಯೊಳಗಡಗಿದ್ದಿತೆ? ರೋಮಿನ ವಿಶಾಲ ಆವರಣದ ಗೋಡೆಗಳು ಈ ವರೆಗೆ ಒಬ್ಬನ ಪ್ರಭಾವಕ್ಕೆ ಮಾತ್ರ ಒಳಗಾಗಿತ್ತೆಂದು ಯಾವಾಗ ಅವರು ಹೇಳಿರುವರು? ಈ ರೋಮ್‌ನಲ್ಲಿ ಸಾಕಷ್ಟು ಸ್ಥಳವಿದ್ದರೂ ಒಬ್ಬನೇ ಈಗ ಅದರಲ್ಲಿರುವನು.

ಒಂದು ಕಾಲದಲ್ಲಿದ್ದ ಬ್ರೂಟಸನು ತನ್ನ ಪ್ರಭಾವವನ್ನು ರೋಮಿನ ಭದ್ರತೆಗೆಂದು ನಿರಂತರ ಕಾಡಿಸುವ ಸೈತಾನನನ್ನು ಸಹ ಲಕ್ಷಿಸದೆ ಒಬ್ಬ ರಾಜನಂತೆ ನಿರಾಯಾಸದಿಂದ ರಕ್ಷಿಸುವನೆಂದೆನುತ್ತ ನಿನ್ನ ಹಾಗೂ ನನ್ನ ಅಪ್ಪಂದಿರುಗಳು ಹೇಳುವುದನ್ನು ಕೇಳಿದ್ದೇವೆ!

ಬ್ರೂಟಸ್ — ನೀನು ನನ್ನನ್ನು ನಿಜವಾಗಿ ಪ್ರೀತಿಸುವೆ! ನಾನಂತೂ ಅಸೂಯಾಪ

ರವಾಗಿಲ್ಲ. ನೀನೀಗ ನನ್ನನ್ನು ಕೋರುವ ಕಾರ್ಯಕ್ಕೆ ಪ್ರೇರೇಪಿಸುತ್ತಿರುವುದರ ಬಗ್ಗೆ ನನಗೊಂದು ಅಭಿಪ್ರಾಯವಿದೆ. ಇಂದಿನ ಪರಿಸ್ಥಿತಿಯನ್ನು ಕುರಿತಾಗಿ ಅದೇನು ಆಲೋಚಿಸಿರುವೆನೆಂದು ಅನಂತರ ತಿಳಿಸುವೆ. ಈಗ ವಿಶ್ವಾಸದಿಂದ ನಿನಗೆ ಹೇಳುವುದೇನೆಂದರೆ ಸದ್ಯಕ್ಕೆ ನಾನು ಇದರ ಬಗ್ಗೆ ಇನ್ನೂ ಹೆಚ್ಚು ಉದ್ರೇಕಗೊಳ್ಳಲಾಗೆನು. ನೀನೆಂದುದರ ವಿಷಯದ ಕುರಿತು ಆಲೋಚಿಸುವೆನು. ನೀನನ್ನುವುದ ನಾನು ತಾಳ್ಮೆಯಿಂದಾಲಿಸುವೆನು. ಸಮಯವಿದ್ದರೆ ನಾವಿಬ್ಬರು ಜೊತೆಯಾಗಿ ಈ ಗಹನ ವಿಷಯದ ಬಗ್ಗೆ ಮಾತಾಡುವ. ಅಲ್ಲಿಯವರೆಗೆ ನನ್ನ ಮಾನ್ಯ ಮಿತ್ರನೆ, ಈ ವಿಚಾರ ತುಂಬಾ ಆಲೋಚಿಸು. ಈ ಕಾಲದಲ್ಲಿ, ಅದಕ್ಕೆ ಇಲ್ಲ, ಈ ಪರಿಸ್ಥಿತಿಯಲ್ಲಿ ರೋಮ್ ಸಾಮ್ರಾಜ್ಯದ ಹೀನರಾಂತ ಪುತ್ರನೆಂದು ಅನಿಸಿಕೊಳ್ಳುವುದಕಿಂತ ಈ ಬ್ರೂಟಸನೊಬ್ಬ ಗ್ರಾಮೀಣನಾಗಿರುವುದೆ ಉತ್ತಮ!

ಕ್ಯಾಸ್ಯಸ್— ನನ್ನ ನಿಸ್ಸತ್ವ ನುಡಿಗಳು ಬ್ರೂಟಸನ ಮನಸ್ಸಿಗೆ ತಾಗಿ ಅವನಲ್ಲಿ ಸ್ಫೂರ್ತಿಯ ಕಿಡಿ ಚಿಮ್ಮಿದ್ದುದರಿಂದ ನನಗೆ ಸಂತೋಷ.

ಬ್ರೂಟಸ್— ಆಟೋಟ ಸಮಾರಂಭಗಳು ಮುಗಿದುವು. ಸೀಸರನು ಈಗ ಹಿಂದಿರುಗುತ್ತಿದ್ದಾನೆ!

ಕ್ಯಾಸಿಯಸ್— ಅವರು ಈ ಕಡೆ ದಾಟುವಾಗ ಕ್ಯಾಸ್ಕನ ತೋಳಿನ ಅಂಗಿಯನ್ನು ಹಿಡಿದು ಇತ್ತ ಎಳೆ; ಈ ದಿನ ವಿಶೇಷ ವಿಚಾರವೇನೇನು ನಡೆಯಿತೆಂಬುದನವನು ತನ್ನ ಒರಟುತನಕ್ಕೆ ತಕ್ಕಂತೆ ನಿನಗೆ ಹೇಳುವನು!

(ಪುನಃ: ಸೀಸರ್ ಮತ್ತು ಪರಿಜನ ಪ್ರವೇಶ.)

ಬ್ರೂಟಸ್— ನಾನು ಅಂತೆಯೆ ಮಾಡುವೆನು, ಆದರೆ ಕ್ಯಾಸಿಯಸನೆ, ನೋಡು, ಸೀಸರನ ಕಣ್ಣುಹುಬ್ಬಿನಲ್ಲಿ ಕೋಪದ ಜ್ವಾಲೆಯಿದೆ; ಉಳಿದವರೆಲ್ಲ ಅವನ ಛೀಮಾರಿಗೊಳಗಾದ ಜನತೆಯಂತೆ ಅವನನ್ನು ಹಿಂಬಾಲಿಸುತ್ತಿರುವರು. ಕ್ಯಾಲ್ಪೂರ್ನಿಯಳ ಕೆನ್ನೆಯೂ ಕಳೆಗೆಟ್ಟಿದೆ. ಸೀಸರನು ರಾಜಧಾನಿಯಲ್ಲಿ ನಡೆಸಿದ ಸಭೆಯಲ್ಲಿ ಕೆಲವು ಗಣ್ಯ

ರೊಡನೆ ವಾದಿಸಿ ಕೋಪಗೊಂಡು ಹಿಂದು ಸಿಡುಕಿನ
ಇಲಿಯಂತೆ ಉಗ್ರ ಕಣ್ಣುಗಳಿಂದ ಕಾಣುತ್ತಾನೆ!

ಕ್ಯಾಸ್ಸಿಯಸ್ — ಆಗ್ಗೆ ಏನೇನು ನಡೆ
ಯಿತೆಂದು ಕ್ಯಾಸ್ಕನು ನಮಗೆ ಹೇಳುವನು.

ಸೀಸರ್ — ಆಂಟೋನಿಯೋ!

ಆಂಟೋನಿಯೋ — ಸೀಸರ್?

ಸೀಸರ್ — ನನ್ನ ಬಳಿ ಗಟ್ಟಿಮುಟ್ಟಾದ ಜನಗಳು ಇರಲಿ,
ಮೃದುವಾದ ತಲೆಯ ಮತ್ತು ರಾತ್ರಿಯಲಿ ತೀರಾ
ನಿದ್ರಿಸುವವರು, ಮತ್ತೆ, ಅಗೋ, ಅಲ್ಲಿ ತೆಳ್ಳನೆ ಶ
ರೀರ, ತುಂಬ ಹಸಿದಿಹನ ನೋಟದ ಕ್ಯಾಸ್ಸಿಯಸನು
ತನ್ನಷ್ಟಕೆ ತುಂಬಾ ಅದೇನೇನೋ ಆಲೋಚಿ
ಸುವನು; ಅಂಥ ಜನವು ಅಪಾಯಕರ!

ಆಂಟೋನಿಯೋ — ಸೀಸರ್, ಅವನಿಗೆ ಹೆದರದಿರು; ಅವನು ಅಪಾಯ
ಕರ ವ್ಯಕ್ತಿ ಅಲ್ಲ; ಅವನೊಬ್ಬ ಸನ್ಮಾನ್ಯ ರೋ
ಮನ್ ನಾಗರಿಕನು!

ಸೀಸರ್ — ಅವನು ತೋರದೇಹದವನಾಗಿದ್ದರೆ, ಇರಲಿ,
ನಾನೇನು ಅವನಿಗೆ ಹೆದರುತ್ತಿಲ್ಲ. ಆದರೂ
ನನ್ನ ಹೆಸರೇ ಹೆದರಿಕೆಗೆ ಪಾತ್ರವೆನಿಸಿದರೆ ಇ
ರಲಿ; ನಾನು ಯಾವಾವ ವ್ಯಕ್ತಿಯನ್ನು ದೂರವಿ
ರಿಸಬೇಕೋ ನಾನರಿಯೆನು; ಅವನು ಬಹು ತೀಕ್ಷ್ಣ
ದರ್ಶಿ; ಬಹು ನಿಗೂಢ ಪರಿಶೀಲಕ; ಜನವೆಡೆ
ಹರಿಂದವರ ನಡೆನುಡಿಯಿಂದರಿಯುವವನು; ಅವ
ನಿಗೆ ನಾಟಕಗಳಲ್ಲಿ, ಆಂಟೋನಿಯೋ, ಏನೊಂದೂ
ಇಷ್ಟವಿಲ್ಲ, ಸಂಗೀತವನ್ನು ಅವನಾಲಿ
ಸನು; ವಿರಳಗಳಲ್ಲಿಯವನ ನಗು ಅಪರೂಪ. ನಕ್ಕರೂ
ಅವನು ತನ್ನನೆ ಮೂದಲಿಸುವಂತೆ ತನ್ನ ಆ
ತ್ಮವನೆ ತೃಣೀಕರಿಸುವಂತೆ ನಗುವನು; ಅಂತ
ವರು ಯಾವುದಕ್ಕೂ ನಗುವರು; ತಮ್ಮ ಮನವನ್ನು
ಹಗುರವಾಗಿಸಲು ನಗುತಲೇ ಇರುವರು. ತಮಗಿಂ
ತ ಪ್ರಸಿದ್ಧರಾದವರನ್ನು ಕಂಡಾಗ ತ
ಮ್ಮಲ್ಲೇ ಕೊರಗುವರು. ಆದುದರಿಂದ ಅವರು ತುಂ
ಬಾ ಅಪಾಯಕರರು. ನಾನು ಯಾವುದಕ್ಕೆ ಹೆದರು
ತ್ತೇನೆಂಬುದಕ್ಕಿಂತ ನೀನು ಯಾವುದಕ್ಕೆ ಹೆದ
ರಬೇಕೆಂದೀಗ ನಿನಗೆ ಹೇಳುವೆನು. ಏಕೆಂ
ದರೆ ನಾನು ಯಾವಾಗಲೂ ಸೀಸರನೇ ಆ
ಗಿರುವೆ. ಇತ್ತ ನನ್ನ ಬಲಕ್ಕೆ ಬಾ, ಏಕೆಂದ

ರೆ ನನ್ನ ಕಿವಿ ಕೇಳಿಸಿದುದು. ನೀನು ಆವನ ವಿ
ಷಯವಾಗಿ ಏನು ಊಹಿಸಿರುವಿಯೋ ನನಗೆ ನಿಜ
ಹೇಳು.

(ಸೀಸರ್, ಇತರರು ಹೋಗುವರು. ಕ್ಯಾಸ್ಕ ಇರುವನು)

ಕ್ಯಾಸ್ಕ — ನೀನು ನನ್ನ ತೋಳಿನ ಅಂಗಿಯನ್ನೆಳೆದೆ, ನನ್ನೊಡನೆ ಮಾತಾಡುವಿಯಾ?

ಬ್ರೂಟಸ್ — ಅಹಾ ಕ್ಯಾಸ್ಕ, ಹೇಳು, ಏಕೆ ಸೀಸರನು ಇಂದು ಬಹು ಬೇಸರದಲ್ಲಿರುವಂತೆ ಕಾಣುತ್ತಿದ್ದಾನೆ?

ಕ್ಯಾಸ್ಕ — ಏಕೆ? ನೀನು ಆವನೊಡನೆಯೇ ಇದ್ದೆ! ನೀನು ಇರಲ್ಲವೆ?

ಬ್ರೂಟಸ್ — ಹಾಗಾದರೆ ಏನೇನು ಆಲ್ಲಿ ನಡೆಯಿತೆಂದು ನಾನು ಕ್ಯಾಸ್ಕನನ್ನು ಕೇಳಬಾರದು.

ಕ್ಯಾಸ್ಕ — ಏಕೆ; ಒಂದು ಕಿರೀಟವನ್ನು ಅಲ್ಲಿ ಆವನಿಗೆ ಅರ್ಪಿಸಲಾಯಿತು. ಹಾಗೆ ಒಪ್ಪಿಸುತ್ತಿರಲು ಆವನದನ್ನು ತನ್ನ ಮುಂಗೈಯಲ್ಲಿ ಹೀಗೆ ಇಟ್ಟಾಗ ಜನ ಗೊಲ್ಲೆಬ್ಬಿಸಿದರು.

ಬ್ರೂಟಸ್ — ಎರಡನೇ ಬಾರಿಗೂ ಗೊಲ್ಲೆಬ್ಬಿಸಿದರಲ್ಲ, ಅದೇಕೆ?

ಕ್ಯಾಸ್ಕ — ಅದಕ್ಕೇನೇ!

ಕ್ಯಾಸ್ಸಿಯಸ್ — ಅವರು ಮೂರು ಬಾರಿಗೂ ದನಿಗರೆದರು, ಕಡೆಬಾರಿಗೆಯೇಕೆ?

ಕ್ಯಾಸ್ಕ — ಆ ಬಾರಿಯೂ ಅದಕ್ಕೇನೇ.

ಬ್ರೂಟಸ್ — ಮೂರು ಬಾರಿ ಕಿರೀಟವನ್ನು ಆವನಿಗೆ ಅರ್ಪಿಸಿದರೇ?

ಕ್ಯಾಸ್ಕ — ಹೌದು, ಅಂತಲ್ಲ, ಆವನು ಅದನ್ನು ಮೂರು ಸರ್ತಿಯೂ ಒಂದು ಕಡೆ ಇಡುತ್ತಾನೆ, ಪ್ರತಿ ಸರ್ತಿ ಮೆತ್ತನೆಯ ಇನ್ನೊಂದರಿಂದ ಇಡುವನು, ಹಾಗೆ ಇಟ್ಟಾಗಲೆಲ್ಲ ಅದನು ಎತ್ತಿ ನಾನು ಆವನಿಗೆ ಕೊಡುತ್ತಿರಲು ನೆರೆದಿದ್ದ ಆ ಸರಳ ಸ್ವಭಾವದ ಪರಿಜನದ ತುಮುಲ ಗೊಲ್ಲೆಬ್ಬಿಸಿತು.

ಕ್ಯಾಸ್ಸಿಯಸ್ — ಆವನಿಗೆ ಕಿರೀಟವನ್ನು ಹಿಡಿಸಿದವರಾರು?

ಕ್ಯಾಸ್ಕ — ಏಕೆ? ಆಂತೋನಿ.

ಬ್ರೂಟಸ್ — ಮಾನ್ಯ ಕ್ಯಾಸ್ಕ, ನಡೆದ ವಿಚಾರಗಳನ್ನು ನಮಗೆ ಪೂರ್ತಿ ಹೇಳು.

ಕ್ಯಾಸ್ಕ — ಅಲ್ಲಿ ನಡೆದುದನ್ನೆಲ್ಲವನ್ನೂ ನಾನು ಹೇಳುವುದಕ್ಕಿಂತ ನನ್ನನ್ನು ಗಲ್ಲಿಗೆ ಏರಿಸಿದರೂ ಸರಿ! ಅದೆಲ್ಲ ಬರಿ ಹಾಸ್ಯಾಸ್ಪದ; ನಾನು ಆ—

ದನ್ನು ಗುರುತಿಸಲಿಲ್ಲ. ಮಾರ್ಕ್ ಆಂತೋನಿಯು ಅವ
ನಿಗೆ ಕಿರೀಟವನ್ನೀಯುವುದನ್ನು ನಾನು ಕಂ
ಡೆ. ಆದರೆ ಅದು ಕಿರೀಟವಲ್ಲ, ಅದೊಂದು ಅ
ಲಂಕಾರಿಕ ತಲೆದೊಡಿಗೆ. ಆದರೂ ನಾನು ಅಂ
ದಂತೆ ಅವನು ಅದನ್ನು ಒಮ್ಮೆ ಒಂದೆಡೆಯಿಟ್ಟ
ನು. ಸಂತೋಷದಿಂದ ಅದನ್ನು ಸೀಸರನು ಸ್ವೀ
ಕರಿಸುತ್ತಿದ್ದನೆಂದೇ ನನಗನ್ನಿಸುತ್ತ; ಪುನಃ
ಅದನ್ನೊಪ್ಪಿಸಲು ಪುನಃ ಅದನ್ನು ಅವನು ತನ್ನ
ಬೆರಳುಗಳನ್ನು ಅದರಿಂದ ತೆಗೆಯಲು ಹಿಂಜರಿಯು
ತ್ತಿದ್ದನೆಂದು ನನಗನ್ನಿಸುತ್ತದೆ. ಮೂರನೆಯ
ಬಾರಿಗೂ ಅವನಿಗೆ ಅದನ್ನು ಕೊಟ್ಟಾಗ ಅಂ
ತೆಯೇ ಅದನ್ನು ಒಂದೆಡೆ ಇಟ್ಟನು. ಕಿರೀಟವ
ನ್ನು ಹೀಗೆ ಅವನು ತಿರಸ್ಕರಿಸಿದಾಗ ನೆರೆದಿ
ದ್ದ ಬೀದಿಜನಗಳು ಗುಲ್ಲೆಬ್ಬಿಸಿ ಅರಚಿದರು, ಕ
ರೆಚಿದರು, ಕೈಚಪ್ಪಾಳೆ ಮೇಲಿಂದ ಮೇಲೆ ಹೊ
ಡೆದರು, ಬೆವರಿಂದ ತೊಯ್ದ ರಾತ್ರಿ ಉಡುವ ತಮ್ಮ
ಟೋಪಿಗಳನ್ನು ಮೇಲಕ್ಕೆಸೆಯುತ್ತಾ, ಚೀರಿ
ದರು; ಸೀಸರನು ಕಿರೀಟವನ್ನು ತಿರಸ್ಕರಿಸಿ
ದನೆಂದು ಜನರು ಬಹುಬಗೆಯಲ್ಲಿ ಅರಚುತ್ತಾ
ಚೀರಾಟವೆಬ್ಬಿಸಿದರು. ಪರಿಣಾಮವೆಂದರೆ
ಸೀಸರನಿಗೆ ಮಾತಾಡಲಿಕ್ಕಾಗದೆಯೇ ಹೋ
ಯಿತು, ಗಂಟಲು ಕಟ್ಟಿತು, ಅಯ್ಯೋ ಮೂರ್ಛೆಹೊಂ
ದಿ ಅಲ್ಲಿಯೇ ಕುಸಿದುಬಿದ್ದನು. ಹೀಗೂ ನಾನಂತೂ
ನಗಲಾರೆ; ನಾನು ಬಾಯ್ತೆರೆದು ಜನರಿಂದ ಹೊಲ
ಸು ಮಾತುಗಳನ್ನು ಆಲಿಸಿಕೊಳ್ಳಲು ಹೆದರಿದೆ
ನು, ಮೌನದಿಂದ ಇದ್ದೆನು!

ಕ್ಯಾಸ್ಯಸ್ – ದಯಮಾಡಿ ಸ್ವಲ್ಪ ತಡೆ; ಸೀಸರನು ಮೂರ್ಛೆಹೊಂ
ದಿದನೇನು?

ಕ್ಯಾಸ್ಕ – ಅವನು ನಡುಬೀದಿಯಲ್ಲಿ ಬಿದ್ದನು. ಬಾಯಿಂದ
ನೊರೆ ಬಂತು, ಮಾತಾಡಲಾರದವನಾದನು.

ಬ್ರೂಟಸ್ – ಇರಬಹುದು, ಅವನಿಗೆ ಪ್ರಜ್ಞೆತಪ್ಪಿ ಬೀಳುವ
ಬಾಯಿಲೆಯು ಇದೆ.

ಕ್ಯಾಸ್ಕ – ನೀನು ಯಾವ ಅರ್ಥದಲ್ಲಿ ಹಾಗಂದೆಯೋ ತಿಳಿಯೆ.
ಸೀಸರನು ಕೆಳಗೆ ಬಿದ್ದುದು ಮಾತ್ರ ನಿಜವೆಂದು
ನನಗೆ ಗೊತ್ತು. ಅವನಿಗೆ ಒಪ್ಪಿದಂತೆ ಅಲ್ಲಿದ್ದ
ಬೀದಿಯ ಜನಕ್ಕೆ ಒಪ್ಪದ ಹಾಗೆ ರಂಗಸ್ಥಳದ

ಕೆಲಸದಲ್ಲಿ ನಗರದ ಕೈಕಸುಬುದಾರನಾಗಿದ್ದರೆ
ತಕ್ಕರವಿದ್ದಿದ್ದರೆ ಹೋಗಿದ್ದರೆ ನಿಜಕ್ಕೂ ನಾ
ನು ಅವನ ಮಾತನ್ನು ನಂಬುತ್ತಿರಲಿಲ್ಲ.

ಬ್ರೂಟಸ್ – ಅವನು ಮೂರ್ಛೆಯಿಂದೆದ್ದನಂತರ ಏನಂದನು?

ಕ್ಯಾಸ್ಕ – ಅಯ್ಯೋ ಏನೆನ್ನಲಿ; ಅವನು ಕೆಳಗೆ ಬೀಳುವುದಕ್ಕಿಂತ ಮುಂಚೆ ತಾನು ಕಿರೀಟವನ್ನು ಸ್ವೀಕರಿಸದೆ ಇದ್ದುದನ್ನು ನೋಡಿ ಸಂತೋಷಿಸಿದ ಗುಂಪನ್ನು ತಿಳಿದು ಅವನು ತನ್ನ ಒಳಅಂಗಿಯನ್ನು ಬಿಚ್ಚಲು ಎದೆಗೆ ತೋರಿಸಿದನು. ಆನಂತರ ಅವನು ತನ್ನ ಕತ್ತನ್ನು ಕತ್ತರಿಸುವಂತೆ ಅವರಿಗೆ ಹೇಳುತ್ತ ತನ್ನದನ್ನು ಮುಂದಕ್ಕೆ ಚಾಚಿದನು. ನಾನೇನಾದರೂ ಯಾವುದನ್ನಾದರೂ ಮಾಡಬಲ್ಲವನು. ನಾನು ಅವನ ಮಾತಿಗೆ ಅಕ್ಷರಶಃ ಒಪ್ಪದೇ ಹೋಗಿದ್ದರೆ, ನಾನು ಆ ಪೋಕರಿ ಜನಗಳೊಡನೆ ನರಕವನ್ನು ಸೇರುತ್ತಿದ್ದೆನೋ ಏನೋ! ಹೀಗೂ ಅವನು ಕೆಳಗೆ ಬಿದ್ದನು, ಅವನು ಪುನಃ ಎಚ್ಚೆತ್ತನಂತರ ತಾನು ಏನಾದರೂ ಅನುಚಿತವಾಗಿ ವರ್ತಿಸಿದ್ದರೆ ಅದು ಬರೀ ತನ್ನ ಅಸ್ವಸ್ಥತೆಯ ದೆಸೆಯಿಂದ ಎಂದು ಜನ ತಿಳಿದುಕೊಳ್ಳಬೇಕೆಂದು ಹೇಳಿದನು. ನನ್ನ ಸಮೀಪವೇ ನಿಂತಿದ್ದ ಮೂರೋ ನಾಲ್ಕೋ ತರುಣಿಯರು "ಅಹಾ ಪುಣ್ಯಾತ್ಮ" ಎಂದು ಉದ್ಗರಿಸುತ್ತ ಹೃತ್ಪೂರ್ವಕವಾಗಿ ಅವನನ್ನು ಕ್ಷಮಿಸಿದರು. ಆದರೆ ಅವರನ್ನು ನಾವು ಗಣಿಸಬೇಕಾಗಿಲ್ಲ; ಸೀಸರ್ ತನ್ನ ತಾಯಿಯನ್ನೇ ಇರಿದು ಕೊಂದಿದ್ದರೂ ಅವರು ಅಂತೆಯೇ ಅನ್ನುತ್ತಿದ್ದರು.

ಬ್ರೂಟಸ್ – ಅದರನಂತರ ಅವನು ದುಃಖದಿಂದ ಬಂದೇ ಬಿಟ್ಟನು!

ಕ್ಯಾಸ್ಕ – ಅಹಾ!

ಕ್ಯಾಸ್ಸಿಯಸ್ – ಸಿಸಿರೋನು ಏನಾದರೂ ಹೇಳಿದನೆ?

ಕ್ಯಾಸ್ಕ – ಹೌದು, ಅವನು ಗ್ರೀಕ್ ಭಾಷೆಯಲ್ಲಿ ಮಾತಾಡಿದನು.

ಕ್ಯಾಸ್ಸಿಯಸ್ – ಯಾವ ವಿಷಯವನ್ನು ಕುರಿತಾಗಿ?

ಕ್ಯಾಸ್ಕ – ಇಲ್ಲ, ಇಲ್ಲ. ನಾನು ಅದೇನೆಂದು ತಿಳಿಯದಂತೆ ಹೇಳಿದರೆ ನಿನ್ನ ಮುಖವನ್ನು ಪುನಃ ನೋಡಲಾರೆನು; ಅವನು ಹೇಳುವುದನ್ನಾಲಿಸಿ ಅರ್ಥ ಮಾಡಿಕೊಂಡವರು ಒತ್ತಿತ್ತ ನೋಡುತ್ತಾ ಮು

ಗುಳ್ನಕ್ಕರು, ತಲೆ ಅಲ್ಲಾಡಿಸಿದರು. ಆದರೆ
ನನಗೆ ಅದು ಬರೀ ಗ್ರೀಕ್ ಭಾಷೆಯಾಗಿತ್ತು. ನಾ
ನು ಹೆಚ್ಚಿನ ವಿಶೇಷಗಳನ್ನೂ ಹೇಳಬಲ್ಲೆ; ಸೀ
ಸರನ ಪ್ರತಿಮೆಗಳಿಂದ ಇಳಿಬಿದ್ದ ಚಿಕ್ಕ ಅಂ
ಗವಸ್ತ್ರಗಳನ್ನು ಕಿತ್ತುದಕ್ಕಾಗಿ ಮೆರುಲ್ಲಸನ
ನು ಫ್ಲೇವ್ಯಸನನ್ನು ಮೌನವಾಗಿಸಿದರು. ತಮಗೆ
ನಮಸ್ಕಾರಗಳು, ನನಗೆ ನೆನಪಿಡಬಹುದಾದ
ಕೆ ಇನ್ನೆಷ್ಟೋ ತಮಾಷೆ ನಡೆಯಿತು.

ಕ್ಯಾಸ್ಯಸ್ — ಕ್ಯಾಸ್ಕ, ಇದೀಗ ಈ ಸಾಯಂಕಾಲ ನೀನು ನ
ನ್ನೊಡನೆ ಊಟಕ್ಕೆ ಬರುವೆಯಾ?

ಕ್ಯಾಸ್ಕ — ಇಲ್ಲ, ನಾನು ಬೇರೆಡೆ ಹೋಗಲು ಒಪ್ಪಿಯಾಗಿದೆ.

ಕ್ಯಾಸ್ಯಸ್ — ನಾಳೆ ಮಧ್ಯಾಹ್ನ ನನ್ನೊಡನೆ ಊಟ ಮಾಡುವೆಯಾ?

ಕ್ಯಾಸ್ಕ — ಹಾ, ಆವರೆಗೆ ನಾನು ಬದುಕಿದ್ದರೆ, ನಿನ್ನ ಮ
ನಸ್ಸು ಅಂತೆಯೇ ಇದ್ದರೆ ಮತ್ತೂ ನಿನ್ನ ಊ
ಟವು ಉಣ್ಣಲು ತಕ್ಕುದಾಗಿದ್ದರೆ!

ಕ್ಯಾಸ್ಯಸ್ — ಸಂತೋಷ, ನಾನು ನಿನ್ನನ್ನು ನಿರೀಕ್ಷಿಸುತ್ತೇನೆ.

ಕ್ಯಾಸ್ಕ — ಹಾಗೆ ಮಾಡು; ಇವರಿಬ್ಬರಿಗೂ ನಮಸ್ಕಾರ. (ಹೋಗುವನು)

ಬ್ರೂಟಸ್ — ಇವನದೆಷ್ಟು ಖಂಡಿತವಾದಿ ಮಾತುಗಾರನು
ಎಂದೆನಿಸುವನು! ಶಾಲೆಯಲ್ಲಿದ್ದಾಗ ತುಂ
ಬಾ ಚುರುಕುಮತಿಯಾಗಿದ್ದನು.

ಕ್ಯಾಸ್ಯಸ್ — ಧೈರ್ಯ ಮತ್ತು ಸಾಹಸದ ಕೆಲಸವನೆಸಗುವುದ
ರಲ್ಲಿ ಅವನು ಈಗಲೂ ಅಂತೆಯೇ ಇದ್ದಾನೆ.
ಆದರೆ ಅವನ ಒರಟು ಸ್ವಭಾವದೊಂದನೆ ಬುದ್ಧಿ
ಮತಿಗಳು ಅವನ ಆ ತಿಳಿಗೇಡಿತನಕ್ಕೆ ಸಾರು ಬ
ಡಿಸಿದಂತೆ! ಇದು ಜನಕ್ಕೆ ಅವನ ಮತಿಗಳನ್ನು
ಜೀರ್ಣಿಸಲನುವಾಗಿಸುವುದಲ್ಲದೆ ಒಳ್ಳೆಯ ಹ
ಸಿವನ್ನೂ ಕೊಡುವುದು!

ಬ್ರೂಟಸ್ — ಅದು ಹಾಗಿರಲಿ, ಸದ್ಯಕ್ಕೆ ನಾನು ನಿನ್ನಿಂದ
ಬೀಳ್ಕೊಡುವೆನು. ನಿನಗೇನಾದರೂ ಮಾತಾಡ
ಬೇಕಿದ್ದರೆ ನಾಳೆ ನಾನು ನಿನ್ನನ್ನು ಇಲ್ಲಿಯೆ
ಕಾಣುವೆನು; ಸಾಧ್ಯವಾದರೆ ನೀನು ನನ್ನಲ್ಲಿ
ಗೆ ಬಾ, ನಾನು ನಿನಗಾಗಿ ಕಾಯುವೆನು!

ಕ್ಯಾಸ್ಯಸ್ — ಅಂತೆಸಗುವೆನು, ಆವರೆಗೆ ಲೋಕವು ಎಂತಿದೆ
ಎಂದು ಆಲೋಚಿಸು! (ಬ್ರೂಟಸ್ ಹೋಗುವನು)

ಅಹಾ ಬ್ರೂಟಸ್, ನೀನು ಮಾನ್ಯನೇ ಹೌದು; ಆ

ದರೂ ನಿನ್ನ ಪ್ರತಿಷ್ಠೆಯು ರೀತಿಯನ್ನು, ಇನ್ನೂ
ನಯಗೊಳಿಸಬೇಕೆಂದೆಣಿಸುತ್ತೇನೆ. ಆ ಕಾರ
ಣದಿಂದಾದರೂ ಸಭ್ಯಜನ ಯಾವಾಗಲೂ ಸ
ಮದರ್ಶಿಗಳಾದ ಆವರವರೊಳಗೆ ಕೂಡುವುದೊ
ಳಿತು. ಇತರರ ಕುಯುಕ್ತಿಗೆ ಮರುಳಾಗದ ಚಿತ್ತಂ
ಪ್ರಿಯರು ಯಾರು? ಸೀಸರನಿಗಾದರೋ ನನ್ನಲ್ಲಿ
ತೀವ್ರ ವಿಶ್ವಾಸವಿದೆ; ಆವನಿಗೆ ಹೇಗೂ ಬ್ರೂಟ
ಸನಲ್ಲಿ ಅಭಿಮಾನವಿದೆ. ನಾನೀಗ ಬ್ರೂಟಸನು
ಎಂದೆನಿಸಿ ಆವನು ಕ್ಯಾಸಿಯಸ್ಸೆಂದೆನಿಸಿದಾಗ
ಆವನು ನನ್ನನ್ನು ತಲೆಗೆಯಲಿ ಕಾಣಬಾರದು.
ನಾನು ಈ ರಾತ್ರಿಯೆ ಹಲವು ಜನರ ಮೂಲಕ ಆ
ವನ ಮನೆಯ ಕಿಟಕಿಗಳ ಒಳಗಾಗಿ "ರೋಮ್ ಎಂ
ದರೆ ಸೀಸರನು" ಎಂದು ಎಲ್ಲಾ ಕಡೆಯ ಜನರು
ಬರೆದರೆಂಬಂತಿರುವ ಕಾಗದಪತ್ರಗಳನ್ನು ಎಸೆ
ಯುವೆನು. ರೋಮಿನ ಜನ ಸೀಸರನನ್ನು ಹೇಗೆ ಕಾ
ಣುವರೆಂಬುದು ಅದರಿಂದ ತಿಳಿಯುವುದರೊಡನೆಯೆ
ಸೀಸರನ ಅತ್ಯಾಶೆ ಅದರಿಂದಲೂ ತಿಳಿದ
ಬಂತಾಗುವುದು. ಸರಿ, ಅಧಿಕಾರಕ್ಕೆ ಸೀಸರನು
ಏರಲಿ; ಆವನನ್ನು ಅಲುಗಿಸಬೇಕು ನಾವು; ಅ
ಥವಾ ಬರಲಿರುವ ದುರ್ದಿನಗಳನ್ನು ಎದುರಿಸಲಿ
ಹೆವು!!! (ಹೋಗುವನು.)

ದೃಶ್ಯ ೨ — ರೋಮ್; ಒಂದು ಬೀದಿ

ಗುಡುಗು — ಮಿಂಚುಗಳು.
ಕ್ಯಾಸ್ಕ ತನ್ನ ಖಡ್ಗ ಹಿರಿದನು, ಮತ್ತು ಸಿಸಿರೋ
ಇಕ್ಕಡೆಗಳಿಂದ ಪ್ರವೇಶಿಸುವರು.

ಸಿಸಿರೋ — ಒಳ್ಳೆ ಸಾಯಂಕಾಲ ಇದು, ಎಲೆ ಕ್ಯಾಸ್ಕ, ನೀನು
ಮನೆಗೆ ಸೀಸರನನ್ನು ಕರೆತಂದೆಯೇ? ಅದೇಕೆ
ಬುಸುಗುಡುತ್ತಿರುವೆ? ಏಕೆ ನಿಟ್ಟನೆ ಅದೇನು ನೋ
ಡುತ್ತಿರುವೆ?

ಕ್ಯಾಸ್ಕ — ಭೂಮಿಯಲ್ಲಿ ಸರ್ವವೂ ಭದ್ರವಾಗಿಲ್ಲವೆಂಬಂ
ತೆ ಕಂಪಿಸುತ್ತಿರುವಾಗ ನಿನಗೆ ಆಶ್ಚರ್ಯವಾಗದೆ? ಎ
ಲೈ ಸಿಸಿರೋ, ಉದ್ವೇಗದಲ್ಲಿ ಗಾಳಿಯು ಬೀಸ
ಲು ಬಹಳ ಮೇಲೇರಿ ಬೆಳೆದ ಬಾನವೃಕ್ಷಗಳ
ನು ಸೀಳಾಗಿರುವ ಬಿರುಗಾಳಿಯನ್ನು ನೋಡಿ

ದ್ದೇನೆ. ಗತಕಾಲದ ಮಿಂಚುಗಳಿಂದ ಹೆದರಿಸುವ ಪ್ರೇ
ತಗಳಿಂದ, ದೆವ್ವ ನರಸೋರೆಗಳಿಂದ ತೆರೆಗಟ್ಟಿ ಭೋ
ರ್ಗರೆಯುತಲು ತವಕಿಸುತಿಹ ಸಾಗರವು ಉಕ್ಕೇರು
ವುದನ್ನು ನೋಡಿದ್ದೇನೆ; ಆದರೆ ಈ ರಾತ್ರಿ
ವರೆಗೆ, ಇಂದಿನ ವರೆಗೆ, ಈ ರೀತಿ ಉರುಗಾಳಿ
ಯು ಬೆಂಕಿ ಕಿಡಿಗಳನ್ನು ಚೆಲ್ಲುವುದು ನಾನು ನೋ
ಡಿಯೇ ಇರಲಿಲ್ಲ. ಸ್ವರ್ಗದಲ್ಲಿ ಏನೋ ನಾ
ಗರಿಕ ಕೋಲಾಹಲವೇ ಎದ್ದಿರಬಹುದು. ಇನಿ
ತಿಲ್ಲವಾದರೆ ದೇವತೆಗಳೊಡನೆ ವಿರಸಕ್ಕೊಳ
ಗಾದ ಭೂಮಿಯು ಸಿಟ್ಟುಗೊಂಡು ಈ ರೀತಿ ನಾ
ಶಕಾರಕ ಶಕ್ತಿಯನ್ನು ಕಳುಹಿಸಲು ಅವರ
ನ್ನು ಪ್ರೇರೇಪಿಸುತ್ತ ಇರಬಹುದು.

ಸಿಸ್ಸೆರೋ — ಏಕೆ? ಇನ್ನೂ ಆಶ್ಚರ್ಯಕರವಾದುದನ್ನು ಏ
ನಾದರೂ ನೋಡಿದೆಯೇ?

ಕಾಸ್ಕಾ — ಬರೀ ನೋಟದಿಂದಲೇ ನೀನು ಚೆನ್ನಾಗಿ ತಿಳಿ
ದಿರುವ ಸಾಮಾನ್ಯ ಕೆಲಸಗಾರನು ತನ್ನ ಎಡ
ಗೈಯನ್ನು ಎತ್ತಿದ್ದ, ದೀವಟಿಗೆಗಳು ಜ್ಯೋ
ತಿಗೆ ಸಮವಿರುತ್ತ ಬೆಂಕಿಯನು ಹೊತ್ತಿಸಲು ವ್ಯಾ
ಪ್ತವಾದ ಅವನ ಕೈಯನು ಬಿಂಬಿಸುತ್ತ ಸುಡದಂ
ತೆಯೇ ಉಳಿಸಿತ್ತು. ಅಲ್ಲ, ನನ್ನೀ ಖಡ್ಗವನು
ಇತ್ತೀಚೆಗೆ ನಾನು ಉಪಯೋಗಿಸಿಲ್ಲ. ರಾ
ಜಧಾನಿಗೆ ಎದುರಾಗಿ ನಾನು ಒಂದು ಸಿಂಹವ
ನು ಕಂಡೆನು. ಬೀದಿಗಳಲ್ಲಿ ಜನಗಳು ಮೈಗೆ
ಬೆಂಕಿ ಹೊತ್ತಿಸಿಕೊಂಡು ಅತ್ತಿತ್ತ ಅಲೆದಾಡು
ತಿಹರೆಂದು ಭಯಭ್ರಾಂತರಾದ ಒಂದ್ನೂರು
ಬಹುತ ವಿಕಾರ ರೂಪಿನ ಹೆಂಗಸರು ತುಂಬ ಕಲ್ಲು
ಎಳಗೊಂಡು ಬೊಬ್ಬಿಟ್ಟರು. ಅಲ್ಲದೆ ರಾತ್ರಿ ಎ
ಚ್ಚೆತ್ತಿರುವ ಗೂಗೆ ನಿನ್ನೆ ಮಧ್ಯಾಹ್ನ ಹೊತ್ತಿಗೆ
ಬೀದಿ ಚೌಕದಲ್ಲಿ ಕೂಗುತ್ತ ಚೀತ್ಕರಿಸುತ್ತ
ಇತ್ತು. ಕೌತುಕವನುಂಟು ಮಾಡುವ ಈ ಸನ್ನಿ
ವೇಶಗಳು ಒಟ್ಟುಗೂಡಿ ತೋರ್ಪಡಿಸಿಕೊಂಡಾಗ,
"ಹೀಗೆ ಅವು ಒಮ್ಮೊಮ್ಮೆ ಕಾಣಿಸುವುದು ಸ್ವಾಭಾ
ವಿಕ" ವೆಂದು ಜನರು ಹೇಳದೆಯೇ ಇರಲಿ; ಇವೆಲ್ಲ
ಮುಂದೆ ಸಂಭವಿಸಬಹುದಾದುದಕ್ಕೆ ಅನಿಷ್ಟ
ಸೂಚಕವಾದ ಶಕುನಗಳೆಂಬುದಾಗಿ ನಾನು ನಿ
ಜವಾಗಿಯೂ ನಂಬುತ್ತೇನೆ!

+++

ಸಿಸ್ಸಿರೋ — ಇದು ನಿಶ್ಚಯವಾಗಿಯೂ ಆಶ್ಚರ್ಯದ ಹಾಗೂ
ಅನಿರೀಕ್ಷಿತ ಕಾಲ ಘಟನೆಗಳು; ಅವುಗಳು ಉ
ದ್ದೇಶವೇನೆಂದು ಜನರು ಎಣಿಸಿದರೆ ಅವುಗಳ
ನ್ನು ಕುರಿತಾಗಿ ಏನೇನೋ ಕಲ್ಪಿಸಿ ತಮಗೆ ತೋ
ರಿದಂತೆ ಉಸುರುವರು; ಇರಲಿ, ಸೀಸರನು ನಾಳೆ
ನಗರ ಕೇಂದ್ರಕ್ಕೆ ಬರುವನೇ?

ಕ್ಯಾಸ್ಕ — ಹೌದು, ನಾಳೆ ಅಲ್ಲಿರುವನೆಂದು ನಿನಗೆ ತಿಳಿಸ
ಲು ಅವನು ಆಂಟೋನಿಯೋಗೆ ಹೇಳಿದ್ದಾನೆ.

ಸಿಸ್ಸಿರೋ — ಹೊತ್ತಾಯಿತು ಕ್ಯಾಸ್ಕ, ನಮಸ್ಕಾರ, ಗೊಂದಲ
ಕ್ಕೊಳಗಾದ ಈ ಭೂಮಿ ಆಕಾಶಗಳು ಮಧ್ಯೆ
ಕತ್ತಲಲ್ಲಿ ನಡೆಯುವುದು ಕಷ್ಟ!

ಕ್ಯಾಸ್ಕ — ನಮಸ್ಕಾರ, ಸಿಸ್ಸಿರೋ, (ಸಿಸ್ಸಿರೋ ಹೋಗುವನು.)

ಕ್ಯಾಸ್ಯಸ್ — (ಪ್ರವೇಶಿಸುತ್ತ) ಅದಾರು?

ಕ್ಯಾಸ್ಕ — ಓರ್ವ ರೋಮನ್ ನಾಗರಿಕ

ಕ್ಯಾಸ್ಯಸ್ — ಹೋ, ಆ ಕೊರಳ್ದನಿ ಪ್ರಕಾರ ನೀನು ಕ್ಯಾಸ್ಕ

ಕ್ಯಾಸ್ಕ — ನಿನ್ನ ಕಿವಿ ಚೆನ್ನಾಗಿವೆ, ಕ್ಯಾಸ್ಯಸ್; ರಾತ್ರಿ ಇದು ಹೇಗೆ?

ಕ್ಯಾಸ್ಯಸ್ — ಸತ್ಯಸಂಧರಿಗೆ ಅತಿ ಪ್ರಿಯವಾದ ರಾತ್ರಿ

ಕ್ಯಾಸ್ಕ — ಪ್ರಕೃತಿಯು ಇಷ್ಟು ಉದ್ರೇಕಗೊಳ್ಳುವುದೆಂದು
ತಿಳಿದಿದ್ದವರಾರು?

ಕ್ಯಾಸ್ಯಸ್ — ಭೂಮಿಯು ಈ ಆಘಾತಗಳು ಸಂಭವಿಸುವುದೆಂ
ದು ತಿಳಿದವರು! ನಾನಾದರೋ ಅಪಾಯಕಾರಕ
ರಾತ್ರಿಗಳಲ್ಲಿ ನನ್ನಷ್ಟಕ್ಕೆ ತಿರುಗಾಡಿದ್ದೇ
ನೆ. ಹಾಗಾಗಿ ಕ್ಯಾಸ್ಕನನು ಇಲ್ಲಿ ಎದುರುಗೊಂಡೆ
ನಷ್ಟೇ ಅಲದೆ ನಾನು ಸಿಡಿಲಿನ ಬಡಿತಕ್ಕೆ ಎ
ದೆಯೊಡ್ಡಿ ನಡೆದೆನು. ಆಕಾಶವು ಸೀಳಿತ್ತೆಂಬ
ನಕ್ಷತ್ರಮಾರ್ಗದ ಪ್ರಭೆಗೆ ಸ್ವರ್ಗವೇ ತೆರೆದಂತೆ
ಬಿಳುಗಳದರ ಎಡೆ ಎಡೆ ನಾನು ಹೊಂಚುತ್ತಾ ನೇ
ರವಾಗಿ ನಡೆದೆನು.

ಕ್ಯಾಸ್ಕ — ಸರಿ, ಆದರೆ ಪ್ರಕೃತಿಯನ್ನು ನೀನು ಇಷ್ಟರ
ಮಟ್ಟಿಗೇಕೆ ಕೆದಕಿದೆ? ಪ್ರಬಲ ಶಕ್ತಿಗಳು ಬಹು
ಭಯಾನಕ ಪರಿಸ್ಥಿತಿಯನ್ನಿರಿಸಿ ನಮ್ಮನ್ನು
ಚಕಿತಗೊಳಿಸಲದೆ ದೈವ, ಅದೇ ಭಯಂಕರವಾಯಿತು!

ಕ್ಯಾಸ್ಯಸ್ — ನೀನು ಜಡ, ಕ್ಯಾಸ್ಕ, ಓರ್ವ ರೋಮನ್ನನಲ್ಲಿ
ಇರುತಕ್ಕ ಜೀವದ ಕಿಡಿಗಳು ನಿನ್ನಲ್ಲಿ ಇರ
ಬೇಕಿತ್ತು! ಅಂತಿಲ್ಲದಿದ್ದರೆ ನಿರ್ವೀರ್ಯನಾಗುವೆ.
ನೀನು ಕೃಶನಾದಂತೆ ಇರುವೆ, ಪ್ರಕೃತಿಯ ಈ

ಪೂರ್ವ ಕಂಡೀಷನಿಂಗ್‌ಗಳಿಗೆ ಬೇರೆಯಾಗಿ ಭ
ಯಾನಕತ್ವದಿಂದ ಭಿನ್ನವಾಗಿರುವವು; ಇದೇಕೆ
ಇಷ್ಟೆಲ್ಲ ಬೆಂಕಿ? ಬಹು ಪರಿಯ ಭೂತ ಪಿಶಾಚಿ
ಗಳು? ಮೃಗ ಪಕ್ಷಿಗಳು? ಮತಿಗೆಟ್ಟರಾದ ಮುದುಕರು?
ಚಪಲರಾದ ಮಕ್ಕಳು? ಪ್ರಕೃತಿಯೂ ಏಕೆ ಬದ
ಲಾಗುತ್ತಾ ಇದೆ? ಹಲವು ಶಕ್ತಿಗಳು ಭಯವನ್ನು
ಹುಟ್ಟಿಸುವುದರ ಜತೆಗೆ ಮುಂಬರುವ 'ಗಂಡಾಂತ
ರದ ಬಗ್ಗೆ ಎಚ್ಚರಿಕೆಯನ್ನೂ ಕೊಡುವುದು. ಪ್ರ
ಕೃತಿಯ ಪರಿವರ್ತನೆಯೆಲ್ಲವೂ ದೈವ ಪ್ರೇರಣೆ!
ಅದಿರಲಿ, ಕ್ಯಾಸ್ಕ, ಇದೀಗ ಈ ಭಯಂಕರ
ರಾತ್ರಿ, ಗರ್ಜಿಸುವ ಮೋಡ, ಗುಡುಗುಗಳು ಮಿಂಚುಗ
ಳಂತೆ ರಾಜಧಾನಿಯ ಅರಿತ ಸಿಂಹದಂತೆ ಆ-
ಪರಿಮಿತನೆನಿಸಿ ಬೆಳೆದ, ಆದರೂ ನಿನಗಿಂತ
ನನಗಿಂತ ಹೆಚ್ಚೇನೂ ಅಲ್ಲದ, ಒಬ್ಬ ವ್ಯಕ್ತಿಯ
ವಿಷಯವಾಗಿ ನಿನಗೆ ಹೇಗೆ ಹೇಳಲಿ?

ಕ್ಯಾಸ್ಕ — ನೀನು ಹೇಳುತ್ತಿರುವುದು ಸೀಸರನನ್ನು ಕುರಿತಾಗಿ!
ಅಲ್ಲವೆ ಕ್ಯಾಸ್ಸಿಯಸ್?

ಕ್ಯಾಸ್ಸಿಯಸ್ — ಅದಾರಾದರೂ ಇರಲಿ, ರೋಮನ್ ಜನಕ್ಕೆ ಅ
ವರ ಪೂರ್ವಜರಿಗೆ ಇದ್ದಂತೆಯೇ ಈಗಲೂ
ಗಟ್ಟಿಮುಟ್ಟಾದ ಅಂಗಾಂಗಗಳು ನರನಾಡಿ
ಗಳೂ ಇವೆ! — ಆದರೇನು? ಈಚೆಗೆ ಅವರಲ್ಲದೆ
ನಮ್ಮ ತಾತಂದಿರಲ್ಲಿ ಇದ್ದ ವಿಶಿಷ್ಟ ಬು
ದ್ಧಿಶಕ್ತಿಯೆ ಇಲ್ಲದಾಗಿರಲು ನಾವೆಲ್ಲ ನ
ಮ್ಮ ತಾಯಂದಿರ ಸ್ವಭಾವಕ್ಕೊಳಗಾಗಿದ್ದೇವೆ.
ನಮ್ಮ ಕಷ್ಟ ದೌರ್ಬಲ್ಯಗಳೆಲ್ಲ ನಮ್ಮನ್ನ
ಸ್ತ್ರೀತ್ವಕ್ಕೆಳೆದಿವೆ!

ಕ್ಯಾಸ್ಕ — ಎಲ್ಲಿ, ಹೇಳಲಿ? ಶಾಸಕರು ನಾಳೆ ಸೀಸರನ
ನು, ಇಟಲಿಯನ್ನು ಉಳಿದು, ಇತರ ಎಲ್ಲ ಭೂಮಿ ಸಾ
ಗರಾಧಿಪತಿಯೆನಿಸಿ ಕಿರೀಟಧಾರಿಯೆಂದಾ
ಗಿಸುವರೆಂದು ಅವರು ಹೇಳುವರು!

ಕ್ಯಾಸ್ಸಿಯಸ್ — ಈಗ ನನ್ನೀ ಕಠಾರಿಯನ್ನೆಲ್ಲಿ ನಾನು ತೊ
ಡುವೆನೆಂದು ನನಗೆ ಗೊತ್ತಿದೆ; ಈ ಗುಲಾಮಗಿರಿ
ಯಿಂದ ಕ್ಯಾಸ್ಸಿಯಸನು ಕ್ಯಾಸ್ಸಿಯಸನನ್ನು ಪಾರಾಗಿ
ಸುವನು; ಆವಾಗ ಓ ದೇವತೆಗಳಿರ, ನೀವು
ನಿಸ್ಸಹಾಯಕರನ್ನು ವೀರರಂತಾಗಿಸುವಿ
ರಿ, ದೇವಾ, ನೀನು ದುಷ್ಟರನು ನಿರ್ನಾಮವಾ

ಗಿಸುವ, ಆ ಶಿಲಾಸ್ತಂಭ ಹಿತ್ತಾಳೆಯಿಂದ ಮಿ
ನುಗಿತವ ಗೋಡೆ, ಗಾಳಿಯೇ ಇಲ್ಲದಾ ಕತ್ತಲೆಯ
ಕೋಣೆ, ಕೈಕಾಲುಗಳನು ಬಿಗಿಯುವ ಕಬ್ಬಿಣದ
ಸರಪಣಿ, ಇವೆಲ್ಲ ಆತ್ಮಬಲವನು ಮೀರಿಸುವು
ಗಳಲ್ಲ; ಜಗತ್ತಿನ ಹಲವು ನಿಯಮ ನಿರ್ಬಂಧ
ದಿಂದ ಬೇಸತ್ತ ಜೀವಾತ್ಮನು ಅವುಗಳಿಂದ
ಪಾರಾಗುವ ಶಕ್ತಿಯನು ಪಡೆಯದೆ ಇಲ್ಲ; ಇದು
ನನಗೆ ತಿಳಿದಿದ್ದರೆ ಇಡೀ ಲೋಕಕೂ ತಿಳಿದಿ
ದೆ; ನಾನು ಸಿಲ್ಕಿಗಾಗಿರುವ ದಬ್ಬಾಳಿಕೆಯ ಕ್ರೂ
ರತನವನು ನನಗೆ ಬೇಕಾದಾಗ ಕಿತ್ತೆಸೆಯ
ಲು ನನಗೆ ಸಾಧ್ಯವಿದೆ!

(ಧ್ವನಿ: ಸಿಡಿಲು ಧ್ವನಿ, ಮಿಂಚು)

ಕ್ಯಾಸ್ಕ — ನನಗೂ ಅದು ಸಾಧ್ಯವಿದೆ; ದಬ್ಬಾಳಿಕೆಯೊಳಗ
ಆಗಿದ ಪ್ರತಿಯೊಬ್ಬನು ತನ್ನನ್ನು ತಾನೇ ಸೆ
ರೆಯಿಂದ ಬಿಡಿಸಿಕೊಳ್ಳುವ ಶಕ್ತಿ ನಿಜಕ್ಕೂ ಇದೆ!

ಕ್ಯಾಸ್ಯಸ್ — ಹಾಗಾದರೆ ಸೀಸರನೇಕೆ ಒಬ್ಬ
ನಿರಂಕುಶ ಪ್ರಭುವೆಂದೆನಿಸಿದನು? ಪಾಪ, ಅವ
ನೊಂದು ತೋಳನೆ ಆಗಲಾರನೆಂದು ನನಗೆ ತಿ
ಳಿದಿದೆ! ಆದರೆ ಅವನು ರೋಮನ್ನರನ್ನು ಕುರಿ
ಗಳೆಂದೆಣಿಸಿದ್ದಾನೆ; ಅವನು ಸಿಂಹವಾಗುತಿರ
ಲ್ಲವಾದರೆ ರೋಮನರು ಹೇಡಿ ಜಿಂಕೆಗಳಂತು
ಅಲ್ಲ. ಸಡಗರದಲಿ ದಾವಾಗ್ನಿಯನ್ನು ಹೊ
ತ್ತಿಸುವವರು ಬರೀ ಒಂದೆರಡು ಒಣಹುಲ್ಲು ಕ
ಡ್ಡಿಗಳಿಂದ ಪ್ರಾರಂಭಿಸುವರು. ರೋಮನ್ನರು ಎ
ಷ್ಟು ಕಚಡವಿದೆ, ಹೊಲಸಿದೆ, ನಿಷ್ಪ್ರಯೋಜಕ ವಸ್ತು
ಗಳಿವೆ; ಅವು ಬತ್ತಿಗೂಡಿ ಬೆಂಕಿಯಲ್ಲಿ ಉರಿಸಿದು
ದಾದರೆ ಅವು ದುಷ್ಪ್ರವೃತ್ತಿಯುಳ್ಳ ಸೀಸರನ
ನ್ನು ಇನ್ನಷ್ಟು ಬೆಳಗಿಸಿದಂತಾಗುವುದು; ಓಹ
ದುರ್ದೈವವೇ, ನೀನು ಇದೀಗ ನನ್ನನ್ನು ಎ
ತ್ತ ಒಯ್ಯುತ್ತಿರುವೆ? ಬಹುಶಃ ನಾನು ಬಹು ಸ್ವೇ
ಚ್ಛೆಯಿಂದ ದುಡಿಯುವ ಸೇವಕನೊಡನೆ ಇದನ್ನೆಲ್ಲ
ಹೇಳುತ್ತಿರಬಹುದು, ಅಂತಾದರೆ ಅವನಿಗೊಪ್ಪು
ವ ಮಾತನು ಹೇಳಬೇಕೆಂದು ಗೊತ್ತಿದೆ; ಆದೇ
ನಿದ್ದರೂ ನಾನು ಶಸ್ತ್ರಸಜ್ಜಿತನಾಗಿರುವೆ.
ಅಪಾಯದ ಬಗ್ಗೆ ನಾನೇನು ಚಿಂತಿಸಲಾರೆ!

ಕ್ಯಾಸ್ಕ — ನೀನು ಕ್ಯಾಸ್ಕನೊಡನೆ ಮಾತಾಡುತ್ತಿರುವೆ; ಅಂ

ಸಾ ಓರ್ವನಿಗೆ ನೀನು ಹೇಳುವುದು ಚಾಡಿಕೋರತ್ತಿ
ಇಲ್ಲ; ಇಕೋ ನನ್ನ ಕೈ ಹಿಡಿ; ಈ ಹಲವು ದುರಂ
ತಗಳಿಂದ ಪಾರಾಗಲು ಕೆಚ್ಚೆದೆಯಿಂದ ನಾ
ಮಾಡುವವನಾಗು; ಇದರಲ್ಲಿ ಯಾರು ಬಹು ಮುಂ
ದೆ ಹೋಗುವನೋ ಅವನೊಡನೆ ಸಮಗೂಡಿ ನಡೆಯಲು
ನಾನು ಸಿದ್ಧನಿದ್ದೇನೆ!

ಕ್ಯಾಸ್ಸಿಯಸ್— ಹಾಗೊಂದು ಪಂಥ ತೊಟ್ಟಿಹೆವು. ಕ್ಯಾಸ್ಕ, ಕೇಳು,
ಬಹಳ ಗೌರವಪ್ರದವೆನಿಸಿದರೂ ಅಪಾಯಕ
ರವಾಗಿ ಕೊನೆಗೊಳ್ಳುವ ಕಾರ್ಯಕ್ರಮವೊಂದ
ನ್ನು ಕುರಿತಾಗಿ ಹಲವಾರು ಸನ್ಮಾನ್ಯ ರೋಮ
ನ್ನರೊಡನೆ ಪ್ರಸ್ತಾಪಿಸಿರುವೆನು. ಅವರು ಈಗ
ಪಾಂಪೇಯ ಕೈಸಾಲೆ ಬಳಿಯಲ್ಲಿ ನನಗಾಗಿ
ಕಾದುನಿಂತಿರುವರೆಂದು ನನಗೆ ತಿಳಿದಿದೆ. ಈ
ಭಯಾನಕವಾದ ರಾತ್ರಿಯಲ್ಲಿ ಬೀದಿಗಳಲ್ಲಿ ಯಾ
ರೂ ನಡೆಯುತ್ತಿಲ್ಲ, ಏನೂ ಚಲಿಸುತ್ತಿಲ್ಲ, ಪಂ
ಚಭೂತಗಳ ಚಲನವಲನವು ಸಹ ನಾವು ಕೈ
ಗೆತ್ತಿಕೊಂಡಿರುವ ಕೆನ್ನೆತ್ತರಿನ ಲೀಲೆಯಾದ
ಆ ಕಠೋರ ಯೋಜನೆಗನುವಾಗಿಯೇ ಇದೆ!

ಕ್ಯಾಸ್ಕ— ಒಂದು ಕ್ಷಣ ಇತ್ತ ಸಮೀಪದಲ್ಲಿ ನಿಲ್ಲಿ; ಅ
ದಾರೋ ಬಹಳ ತ್ವರಿತವಾಗಿ ಇತ್ತ ಬರುತ್ತಿರುವನು.

ಕ್ಯಾಸ್ಸಿಯಸ್— ಅವನು ಸಿನ್ನಾ, ಅವನ ನಡಿಗೆಯಿಂದಲೇ ಅವನಾ
ರೆಂದು ಹೇಳಬಲ್ಲೆ. ಅವನೊರ್ವ ಮಿತ್ರ! (ಸಿನ್ನಾ ಬರುವನು)
ಸಿನ್ನಾ, ಎತ್ತ ಕಡೆ ನಿನ್ನ ಪಯಣ?

ಸಿನ್ನಾ— ನಿನ್ನನ್ನು ಹುಡುಕುತ್ತ ಬಂದೆನು. ಅದಾರು? ಮೆ
ಟೆಲ್ಲಸ್ ಸಿಂಬರನೆ?

ಕ್ಯಾಸ್ಸಿಯಸ್— ಇಲ್ಲ, ಅವನು ಕ್ಯಾಸ್ಕ, ನಮ್ಮ ಪ್ರಯತ್ನಕ್ಕೆ ಕೈ
ಗೂಡುವವ ಮತ್ತೊಬ್ಬ! ಸಿನ್ನಾ, ನನಗೆ ಕಾಯುತಿರುವರೆ?

ಸಿನ್ನಾ— ನನಗದೇ ಸಂತೋಷ! ಇದೆಂಥಾ ಭಯಂಕರ
ರಾತ್ರಿ! ನಮ್ಮಲ್ಲಿ ಎರಡೋ ಮೂರೋ ಜನ ಆಶ್ಚ
ರ್ಯಕರ ದೃಶ್ಯಗಳನ್ನು ಕಂಡಿರುವರು.

ಕ್ಯಾಸ್ಸಿಯಸ್— ನನಗಾಗಿ ಕಾಯುತಿದ್ದಾರಲ್ಲವೆ? ಹೇಳು!

ಸಿನ್ನಾ— ಹೌದು, ಕಾಯುತಿದ್ದಾರೆ; ಹಾ, ಕ್ಯಾಸ್ಸಿಯಸ್, ನೀ
ನು ಮಾನ್ಯ ಬ್ರೂಟಸನನ್ನು ನಮ್ಮ ಜೊತೆಗೆ ಸೇರಿ
ಸುವುದರಲ್ಲಿ ಜಯಪ್ರದನಾದರೆ—

ಕ್ಯಾಸ್ಸಿಯಸ್— ಮಿತ್ರಾ, ಸಿನ್ನಾ, ತಾಳು. ಈ ಓಲೆಗಳನು ತೆಗೆ
ದುಕೋ, ಒಂದು ಬ್ರೂಟಸನಿಗೆ ದೊರೆಯುವಂತೆ ಸೇ

ನಾಶತೆಯ ಕತ್ತಲೆಯಲ್ಲಿ ಇದೆ; ಇದನ್ನು ಅವನಿಗೆ
ಕಿಟಕಿಯಾಗಿ ಒಳಗೆ ಎಸೆ; ಇದನ್ನು ಬ್ರೂಟಸನ ಹಳೆ
ಪ್ರತಿಮೆಗೆ ಗೋಂದು ಹಾಕಿ ಅಂಟಿಸು; ಅನಂತರ
ಪಾಂಪೆ ಕೈಸಾಲೆಯತ್ತ ಬಾ, ಅಲ್ಲಿ ನೀನು ನ
ಮ್ಮನ್ನು ಕಾಣುವೆ. ಡೆಸಿಯಸ ಬ್ರೂಟಸ್ ಮತ್ತು ತ್ರೆ
ಬೊನ್ಯಸ್ ಅಲ್ಲಿ ಇದ್ದಾರೆಯೆ?

ಸಿನ್ನಾ — ಮೆಟೆಲ್ಲಸ್ ಸಿಂಬರನು ಒಬ್ಬನಲ್ಲದೆ ಎಲ್ಲರೂ
ಇರುವರು. ಅವನು ನಿನ್ನ ಮನೆಯ ಕಡೆ ನಿನ್ನನ್ನು
ಹುಡುಕುತ್ತ ಹೋದ. ಹೇಗೂ ನೀನು ಅಂದಂತೆ
ನಾನು ಬೇಗನೆ ಹೋಗಿ ಈ ಓಲೆಯನ್ನೆಲ್ಲ
ಅಲ್ಲಲ್ಲಿ ಹಾಕುವೆನು.

ಕ್ಯಾಸ್ಯಸ್ — ಅಂತೆಯೇ ನೀನು ಪಾಂಪೇ ಥೀಯಟರತ್ತ ಬಾ!
(ಸಿನ್ನಾ ಹೋಗುವನು)
ಕ್ಯಾಸ್ಕಾ ಬಾ, ನಾವು ಈ ದಿನವೆ ಬ್ರೂಟಸನನ್ನು
ಅವನ ಮನೆಯಲ್ಲಿ ಕಾಣುವ. ಅವನ ವ್ಯಕ್ತಿತ್ವ
ದಲ್ಲಿ ಮುಕ್ಕಾಲು ಪಾಲು ನಮ್ಮದು; ಇನ್ನೊಮ್ಮೆ
ಅವನೊಡನೆ ಮಾತಾಡಿದರೆ ಅವನು ಪೂರ್ತಿ ನ
ಮ್ಮೊಡನೆ ಇರುವನು.

ಕ್ಯಾಸ್ಕಾ — ಅವನು ಸರ್ವರ ಹೃದಯದಲ್ಲೂ ಅಭಿಮಾನ್ಯ
ನಾಗಿ ನೆಲೆಸಿದ್ದಾನೆ. ಅವನ ಮುಖವು ರಸಾ
ಯನಿಕವಾಗಿ ಮಾರ್ಪಡಿಸುವ ಸ್ವರ್ಣದಂತೆ ನಾ
ಜನ್ಯ ಸಭ್ಯತೆಯ ಸ್ವರೂಪವಾಗಿ ತೋರಲು
ನಮ್ಮ ಕೊರತೆಗಳು ಎನಿಷ್ಟರೂ ಕಾಣದಾ
ಗುವುವು!

ಕ್ಯಾಸ್ಯಸ್ — ಅವನು, ಅವನ ಯೋಗ್ಯತೆ ಮತ್ತು ನಮಗೆ ಅವನ
ಆವಶ್ಯಕತೆ ನಿನಗಂತು ಹೆಮ್ಮೆಯನಿಸುವಂತೆ ಮಾ
ಡಿದೆ. ಇರಲಿ, ಈಗ ನಾವು ಹೋಗುವ. ಮಧ್ಯರಾ
ತ್ರಿಯನಂತರ, ದಿನಬೆಳಗಾಗುವುದರೊಳಗೆ ಅವ
ನನ್ನು ಎಬ್ಬಿಸಿ ಅವನು ನಮ್ಮೊಡನಿರುವನೆಂಬು
ದನು ನಾವು ಖಚಿತಪಡಿಸಿಕೊಳ್ಳುವ!
(ಹೋಗುವರು)

—— x ——

ಅಂಕ – ೨

ದೃಶ್ಯ ೧ – ಬ್ರೂಟಸನ ಹೂತೋಟ.

ಬ್ರೂಟಸನ ಪ್ರವೇಶ.

ಬ್ರೂಟಸ್ – ಏನು ? ಲೂಸಿಯಸ್, ಓಹೋ;
ನಕ್ಷತ್ರಗಳ ಚಲನೆಯಿಂದ ಇಂದೇನಿಂಬು
ದನು ನನಗೆ ತಿಳಿಯದು, ಲೂಸಿಯಸ್; ಚೆನ್ನಾಗಿ
ನಿದ್ರಿಸುವುದದೊಂದು ನನ್ನ ತಪ್ಪು ಏನೋ, ಲೂಸಿಯಸ್;
ಯಾವಾಗ? ಏನು? ಕರೆದಿದ್ದೀನು, ಏಹೋ ಲೂಸಿಯಸ್
(ಲೂಸಿಯಸನ ಪ್ರವೇಶ)

ಲೂಸಿಯಸ್ – ಪ್ರಭುವೆ, ನನ್ನನ್ನು ಕರೆದಿರಾ?

ಬ್ರೂಟಸ್ – ನನ್ನ ಓದುವ ಕೋಣೆಗೆ ಮೇಣದ ಬತ್ತಿಯೊಂ
ದು ತಾ, ಲೂಸಿಯಸ್; ಅದನ್ನು ಹೊತ್ತಿಸಿ ಬಂದು ನ
ನ್ನನ್ನು ಇಲ್ಲಿ ಕರೆ.

ಲೂಸಿಯಸ್ – ಅಂತೆ ಮಾಡುವೆನು, ಪ್ರಭುವೆ! (ಹೋಗುವನು)

ಬ್ರೂಟಸ್ – ಅವನ ಸಾವಿನಿಂದಲೇ ಅದು ಆಗಬೇಕು; ದೇ
ಶದ ಹಿತಕ್ಕಾಗಿ ಅಲ್ಲದೆ ನನಗೆ ಅವನಲ್ಲಿ
ದ್ವೇಷವೇನೂ ಇಲ್ಲ; ಅವನಿಗೆ ಕಿರೀಟಧಾ
ರಣೆಯಾಗುವುದು; ಅದರಿಂದ ಅವನ ಸ್ವಭಾವವ
ನು ಬದಲಾಯಿಸುವುದು ? ಅದೇ ನಮ್ಮ ಪ್ರಶ್ನೆ! ಓ
ಕ್ಕೆಯು ಬಿಸಿಲಿನ ದಿನ ವಿಷಹಾವು ಹೊರಬರುವುದು, ಅ
ದು ಬಹು ಜಾಗ್ರತೆಯಿಂದ ನಡೆದಾಡಬೇಕಾಗುವುದು;
ಅವನಿಗೆ ಕಿರೀಟಧಾರಣೆ ?
ಸ್ವೇಚ್ಛೆಯಿಂದ ಅವನು ಅನ್ಯಾಯದ
ರಕ್ಷಕನಾದರೆ ಅಧಿಕಾರವನ್ನು ದುರುಪಯೋಗ
ಪಡಿಸಿದರೆ ಮತ್ತು ನಿರ್ದಯತೆಗೆ ಒಳಗಾದರೆ
ಆಗ ನಾವು ನಿಜಕ್ಕೂ ವಿಷದ ಕೊಂಡಿಯಿಂದವ
ನನ್ನು ಚುಚ್ಚುವೆವು.
ಸೀಸರನ ವಿಷಯ ನಿಜವನ್ನು ಹೇಳುವುದಾದ
ರೆ ಅವನ ಪ್ರೀತಿ ಬುದ್ಧಿಗಿಂತಲೂ ಹೆಚ್ಚಾದು
ದು ಯಾವಾಗಲೆಂಬುದನು ನಾನರಿಯೆನು, ಆದ
ರೆ ವಿನಾಂಗಿ ಇರುವಿಕೆಯು ಎಳೆ ಆಕಾಂಕ್ಷೆಗೊಂ
ದು ಏಣಿಯು. ಎಂಬುದು ಸರ್ವವಿದಿತವೆ ಸರಿ. ಅಂಥ
ಏಣಿಯನು ಏರುವವನು ತನ್ನ ಮುಖವನು ಮೇ
ಲೆತ್ತಿ ಮೆಟ್ಟಿಲುಗಳನು ಏರುವನು; ಅನಂತರ
ಅವನದಕೆ ತನ್ನ ಬೆನ್ನನು ತೋರಿಸುವನು; ಹಾ

ಗೆ ಬರುತ್ತ ತಾನ್ ಮೋಡಗಳನ್ನು ನೋಡುವನು; ತಾ
ನಾವುದರ ಮೂಲಕ ಗಗನವನೇರಿದನೊ ಅವು
ಕ್ಷುಲ್ಲವೆಂದು ನಿರ್ಲಕ್ಷಿಸುವವನು; ಸೀಸರನೂ ಅಂ
ತಾಗಬಹುದು; ಅಂತಾಗದಂತೆ, ಇದೀಗ ಅವ
ನೆಂತಿರುವನೊ, ಅದಕ್ಕೆ ನಾವು ಒಪ್ಪದಿರುವುದೆ
ನಮ್ಮೊಳಗಿರುವ ಭೇದ!
ಆ ಕಾರಣದಿಂದ ಅವನನು ನಾಗರಹಾವಿನ
ಮೊಟ್ಟೆಯೆಂದು ಭಾವಿಸಬೇಕು. ಆ ಮೊಟ್ಟೆಯೊಡೆದು ಬ
ಳೆದನಂತರವದು ಜಾತಿಯಲಿ ಸಹಜವಾಗಲ
ದನು ಚಿಪ್ಪಿನೊಳಗಿರುವಾಗಲೇ ಕೊಲ್ಲಿರಿ!
(ಲೂಸ್ಯಸನು ಪ್ರವೇಶ; ಬರುವನು)

ಲೂಸ್ಯಸ್— ಸ್ವಾಮಿ, ತಮ್ಮ ಕಿರುಕೋಣೆಯಲಿ ಮೋಂಬತ್ತಿ ಉರಿಯುತ್ತಿದೆ; ಕಿಟಕಿಯಲಿ ಒಂದು ಚಕಮಕಿ ಕಲ್ಲನ್ನು ನೋಡಲು ನನಗೆ ಇದು ದೊರೆಯಿತು.
(ಒಂದು ಪತ್ರವನ್ನು ಕೊಡುವನು)
ನಾನು ಮಲಗಲಿಕ್ಕೆ ಹೋದಾಗ ಈ ಲಕೋಟೆಯೊಳಗಿರುವ ಪತ್ರವು ಅಲ್ಲಿ ಇರಲಿಲ್ಲವೆಂದು ನನಗೆ ಖಂಡಿತಾ ಗೊತ್ತು!

ಬ್ರೂಟಸ್— ಹೋಗು, ಪುನಃ ಮಲಗಿಕೊ. ಇನ್ನೂ ಬೆಳಗಾಗಲಿಲ್ಲ. ಏಲೊ ಹುಡುಗ, ನಾಳೆ ಅಲ್ಲವೆ ಮಾರ್ಚ್ ತಿಂಗಳ ಅಮಾವಾಸ್ಯೆ ವಿಷದಿನ?

ಲೂಸ್ಯಸ್— ನನಗೆ ತಿಳಿಯದು, ಪ್ರಭೂ!

ಬ್ರೂಟಸ್— ಪಂಚಾಂಗದ ಹಾಳೆ ನೋಡಿ ಹೇಳು.

ಲೂಸ್ಯಸ್— ಆಗಲಿ, ಪ್ರಭುವೆ! (ಹೋಗುವನು)

ಬ್ರೂಟಸ್— ಆ ಹಬೆಯು ಮೇಲೇರುವಿಕೆ ಗಾಳಿಯು ಸಂಯೋಗವಾಗುವಿಕೆ ನನಗೆ ಸಾಕಷ್ಟು ಬೆಳಕನ್ನೀಯಲದರಿಂದಿದ ಇದನ್ನು ಓದಬಹುದು. (ಪತ್ರವನ್ನು ತೆರೆದು ಓದುವನು)
"ಬ್ರೂಟಸನೆ, ನಿದ್ರಿಸುತ್ತಿರುವೆಯೊ! ಎಚ್ಚರವಾಗು; ನಿನ್ನನ್ನು ನೀನು ನೋಡು. ರೋಮ್ ಹೀಗೆ-----
ಮಾತಾಡು, ಮತ್ಸರವನು ಹೊಡೆ; ಬ್ರೂಟಸನೆ,
ನಿದ್ರಿಸುವೆಯಾ? ಎಚ್ಚರವಾಗು!"
ಬಲತ್ಕಾರಕ ನುಡಿಗಳು, "ರೋಮ್, ರೋಮನ್ನರು ---"
ಎಂಬಿವುಗಳನ್ನು ಅಲ್ಲಿ ಬಿಟ್ಟುಹೋದುದನು ಈ
ಗ ನಾನು ಜತೆಗೂಡಿಸಿಕೊಂಡು ಓದಬೇಕಾ
ಗಿದೆ; ರೋಮ್ ಒಬ್ಬ ವ್ಯಕ್ತಿಯ ಅಧಿಕಾರ ಪ್ರಭಾ
ವದೊಳಗಡಗಬೇಕೇ? ರೋಮನ ಬೀದಿಗಳಲ್ಲಿ

ಒಂದನ್ನು ನನ್ನ ಪೂರ್ವಜರು ಆಗ ಅರಸನೆ
ನಿಸಿದ್ದ ಜೀವನ ಹೆಸರಿನಲಿ 'ಟಾರ್ಕ್ವಿನ್ ಮಾರ್ಗ'ವನ್ನು
ನಿರ್ಮಿಸಿದರು; ಅದಕ್ಕಾಗಿಯೇ ನನ್ನನ್ನು ಮಾತಾ
ಡಲು ಮತ್ತು ಪ್ರಹರವೆಸಗಲು ಬೇಡುತ್ತಿರುವುದೇ? ಹಾ,
ರೋಮ್, ನಿನ್ನ ಉದ್ಧಾರಕೆ ನಾವು ತೊಡಗಿದಾಗ
ಬ್ರೂಟಸನ ಹಸ್ತದಿಂದಲೇ ನಿನ್ನ ಮನವಿಯನು
ನೀನು ಹೊಂದುವೆಯೆಂದು ನಾನು ಭರವಸೆಯನ್ನು
ಇದೋ ಕೊಡುತ್ತಿದ್ದೇನೆ!

(ಲೂಸ್ಯಸನು ಪುನಃ ಬರುವನು)

ಲೂಸ್ಯಸ್ — ಪ್ರಭುವೆ, ಮಾರ್ಚ್ ತಿಂಗಳು ಹದಿನಾಲ್ಕು ದಿನಗಳನ್ನು ಈಗಾಗಲೇ ಕಳೆದುಕೊಂಡಿದೆ.

(ಬಾಗಿಲು ತಟ್ಟುವ ಸದ್ದು)

ಬ್ರೂಟಸ್ — ಒಳ್ಳೆಯದು; ಹೊರಗೆ ಹೆಬ್ಬಾಗಿಲನ್ನು ಯಾರೋ ತಟ್ಟುತ್ತಿದ್ದಾರೆ, ನೋಡು.

(ಲೂಸ್ಯಸ್ ಹೋಗುವನು)

ಕ್ಯಾಸ್ಯಸನು ಸೀಸರನನು ಕುರಿತಾಗಿ ಮೊದಲನೆ
ದಲ ನನ್ನನು ಪ್ರಚೋದಿಸಿದಂದಿನಿಂದ ಈ ವರೆ
ಗೆ ನಿದ್ರಿಸಲಿಲ್ಲ; ಘೋರ ಕೃತ್ಯವನು ಕೈಗೊ
ಳ್ಳುವ ಮತ್ತು, ಅದನ್ನು ಕುರಿತಾಗಿ ಮೊದಲು ಯೋಚಿ
ಸಿದಲ್ಲಿಂದ ಉರುಳುವ ಆ ಮಧ್ಯಕಾಲವು ಅ
ದೇನೋ ಒಂದು ಅನಿಶ್ಚಿತ ದೃಶ್ಯವು; ಅಥವಾ ಅ
ಸಹ್ಯ ಸ್ವಪ್ನದಂತೆ; ಮನವು ಬುದ್ಧಿ ಮತ್ತು ಶ
ಲ್ಲಕ ವಿಚಾರಗಳಲ್ಲಿ ತಾಕಲಾಡುವವು; ಮಾ
ನವನದೇನೊ ತಾನೆಯೇ ಚಿಕ್ಕ ರಾಜ್ಯವೆಂಬಂ
ತಾಗಿ ತಾನದೇನೋ ಬಗೆಯ ದಂಗೆ ಕೂಡ
ಲ್ಪಡುವವನ ರೀತಿಯಲ್ಲಿ ನರಳುವನು.

(ಲೂಸ್ಯಸನು ಪುನಃ ಬರುವನು)

ಲೂಸ್ಯಸ್ — ಪ್ರಭುವೆ, ಬಾಗಿಲಿನ ಬಳಿ ನಿಂತಿರುವ ನಿಮ್ಮ ಸೋದರನು, ಕ್ಯಾಸ್ಯಸನು, ನಿಮ್ಮನ್ನು ನೋಡಲು ಇಚ್ಛಿಸುತ್ತಿದ್ದಾನೆ!

ಬ್ರೂಟಸ್ — ಅವನೊಬ್ಬನೆಯೇ?

ಲೂಸ್ಯಸ್ — ಸ್ವಾಮಿ, ಇಲ್ಲ; ಅವನೊಡನೆ ಹಲವರು ಇರುವರು

ಬ್ರೂಟಸ್ — ನಿನಗೆ ಅವರನ್ನು ಗೊತ್ತಿದೆಯೇ?

ಲೂಸ್ಯಸ್ — ಇಲ್ಲ, ಸ್ವಾಮಿ, ಅವರ ಟೋಪಿಗಳು ಅವರ ಕಿವಿಯವರೆಗೆ ಮುಚ್ಚಿವೆ; ಅವರ ಅಂಗಿಯೊಳಗೆ ಅವರ ಮುಖವು ಹೂತು ಹೋಗಿರಲು ಅವರ ಯಾವೊಂದು ಚ

ಚಹರೆಯಿಂದಲು ಅವರು ಯಾರಾರು ಎಂದು ನಾನು ಕಂಡು ಹಿಡಿಯುವಂತೆಯೇ ಇಲ್ಲ!

ಬ್ರೂಟಸ್ — ಅವರು ಒಳಗೆ ಬರಲಿ.

(ಲೂಸಿಯಸ್ ಹೋಗುವನು)

ಅವರದೊಂದು ಪಂಗಡ. ಎಲೈ ಒಳಸಂಚೇ, ದುಷ್ಪ್ರವೃತ್ತಿಗಳು ಬಹು ಯಥೇಚ್ಛವಾಗಿ ನಡೆಯುತ್ತಿರುವಾಗಲೇ ನೀನು ನಿನ್ನ ಅಪಾಯಕರ ಕಣ್ಣು ಹುಬ್ಬನ್ನು ಈ ರಾತ್ರಿಯಲಿ ತೋರ್ಪಡಿಸಲು ನಿನಗೆ ನಾಚಿಕೆಯೆನಿಸದೆ? ಹಾ, ಹಗಲಲ್ಲಿ ಭಯಾನಕವಹ ನಿನ್ನ ರೂಪವನ್ನು ಮರೆಸಿಕೊಳ್ಳಲು ಅಷ್ಟು ಕತ್ತಲಹ ಗವಿಯನ್ನು ನೀನೆಲ್ಲಿ ಕಾಣುವೆ? ಎಲೈ ಪಿತೂರಿಯೇ, ನೀನು ಕಾಣುವುದು ಬೇಡ. ನಿನ್ನ ಮುಗುಳ್ನಗುವಿನೊಳಗೆ ಸಭ್ಯತೆಯೊಳಗದನ್ನು ಮುಚ್ಚಿರು. ಏಕೆಂದರೆ ನಿನ್ನ ಸಹಜ ಸ್ವಭಾವವೇ ತೋರಿದ್ದಾದರೆ ಅಂತೆ ಆಗದಿಹ ರೀತಿಯಲಿ ನಿನ್ನನ್ನು ಮರೆಮಾಡಲಾ ಗ್ರೀಕ ದೇವತೆ ಇರೆಬಸನಾ ಕತ್ತಲೆ ಸಹ ಸಾಲದು.

(ಕ್ಯಾಸಿಯಸ್, ಕ್ಯಾಸ್ಕಾ, ಡೀಸಿಯಸ್, ಸಿನ್ನಾ, ಮೆಟೆಲ್ಲಸ್ ಸಿಂಬರ್ ಮತ್ತು ಟ್ರೆಬೋನ್ಯಸ್ ಬರುವರು.)

ಕ್ಯಾಸಿಯಸ್ — ನಿನ್ನ ವಿಶ್ರಾಂತಿ ವೇಳೆಯಲ್ಲಿಯೇ ನಾವು ಬಹು ಧೈರ್ಯದಿಂದ ಬಂದೆವು ಎಂದು ನಾನು ಯೋಚಿಸುತಿರುವೆ; ಶುಭಮಸ್ತು ಬ್ರೂಟಸ್; ನಾವು ನಿನ್ನನ್ನು ತೊಂದರೆಕೊಡುತಿದ್ದೇವೆಯೇ?

ಬ್ರೂಟಸ್ — ನಾನು ಎದ್ದು ಇದೀಗ ಒಂದು ತಾಸು ಕಳೆಯಿತು. ಇಡೀ ರಾತ್ರಿ ಎಚ್ಚತ್ತಿದ್ದೆ; ನಿನ್ನೊಡನಿರುವ ಇವರು ಯಾರಾರು ಎಂದು ನನಗೆ ತಿಳಿದಿದೆಯೇ?

ಕ್ಯಾಸಿಯಸ್ — ಹೌದು, ನಿನ್ನನ್ನು ಗೌರವದಿಂದ ಕಾಣದೇ ಇರುವವನು ಇಲ್ಲಿ ಯಾರೂ ಇಲ್ಲ; ಪ್ರತಿಯೊಬ್ಬ ಸನ್ಮಾನ್ಯ ರೋಮನ್ ಜನಕ್ಕೆ ನಿನ್ನನ್ನು ತಿಳಿದಿದೆ; ಅವರು ನಿನ್ನಲ್ಲಿ ತಳೆದ ಅಭಿಪ್ರಾಯವೇ ನಿನ್ನಲ್ಲಿ ಇರಲೆಂದೆ ಇಚ್ಛಿಸುವರು; ಇವನೇ ಟ್ರೆಬೋನ್ಯಸನು!

ಬ್ರೂಟಸ್ — ಅವನಿಗೆ ಇಲ್ಲಿ ಸುಸ್ವಾಗತ.

ಕ್ಯಾಸಿಯಸ್ — ಇವನು ಡೀಸಿಯಸ್ ಬ್ರೂಟಸನು.

ಬ್ರೂಟಸ್ — ಅವನಿಗೂ ಸ್ವಾಗತವಿದೆ.

ಕ್ಯಾಸ್ಸಿಯಸ್ — ಇವನು ಕ್ಯಾಸ್ಕ, ಇವನು ಸಿನ್ನ,
ಮತ್ತು ಇವನೇ ಮೆಟೆಲ್ಲಸ್ ಸಿಂಬರನು.

ಬ್ರೂಟಸ್ — ಅವರಿಗೆಲ್ಲ ಸುಸ್ವಾಗತವಿದೆ;
ಈ ನಿಮ್ಮ ಕಣ್ಣುಗಳ ಮತ್ತು ಈ ನಡುರಾತ್ರಿ
ಯ ಮಧ್ಯೆ ಬಹು ಎಚ್ಚರದಿಂದ ಇರುತ್ತಕ್ಕಂಥ
ವಿಚಾರಗಳು ಯಾವುವು?

ಕ್ಯಾಸ್ಸಿಯಸ್ — ನಾನು ಒಂದು ವಿಷಯ ಅರಿಕೆ ಮಾಡಲೆ?
(ಬ್ರೂಟಸ್ — ಕ್ಯಾಸ್ಸಿಯಸ್ ಪಿಸುಮಾತು ಆಡುವರು)

ಡೆಸಿಯಸ್ — ಪೂರ್ವ ದಿಕ್ಕು ಇತ್ತ ಇದೆ; ದಿನ ಬೆಳಗಾಗುವುದು
ಈ ಕಡೆ ಅಲ್ಲವೆ?

ಕ್ಯಾಸ್ಕ — ಅಲ್ಲ,

ಸಿನ್ನ — ಓಹೋ ಕ್ಷಮಿಸಿರಿ, ಸ್ವಾಮಿ, ಮೋಡಗಳನು ಸೀಳುವ ಬೂ
ತೆರೆ ಎಂದು ಹಗಲು ಬರೆಸಿದ ನೀವು ಕಾಣುವಿರಿ,

ಕ್ಯಾಸ್ಕ — ನೀವಿಬ್ಬರೂ ಮೋಸಹೋಗಿರುವಿರೆಂದು ಒ
ಪ್ಪಿಕೊಳ್ಳಿ. ಇದೋ ಈ ಕತ್ತಿಯನು ನಾನು ಯಾವ ಕಡೆ
ಗೆ ತೋರಿಸುವೆನೋ ಆ ಕಡೆ ಸೂರ್ಯೋದಯವಾಗಿ
ದಕ್ಷಿಣದ ಕಡೆ ಬೆಳೆಯಲದು ದೊಡ್ಡದಾಗಿ ಯೌ
ವನದ ಋತುವನ್ನು ಪರ್ಯಾಯದಲಿ ತೂಗುತ್ತ, ಎರ
ಡು ತಿಂಗಳಲಿ ಉತ್ತರಕೆ ಸರಿಯುತ ಅದು ಮೊದಲಿಗೆ
ತನ್ನ ಉರಿಯನ್ನು ತೋರುವನು; ಪೂರ್ವ ದಿಕ್ಕಿನ
ಎತ್ತರದಲಿ ಇಲ್ಲಿಂದ ನೇರನೆ ಅಲ್ಲಿಯೇ
ಇದೆ ರಾಜಧಾನಿ!

ಬ್ರೂಟಸ್ — ಒಬ್ಬೊಬ್ಬರಾಗಿ ನೀವು ಕೈಗಳನು ಪುನಃ ಕೊಡಿ.

ಕ್ಯಾಸ್ಸಿಯಸ್ — ನಾವು ನಮ್ಮ ನಿರ್ಧಾರದ ಬಗ್ಗೆ ಪ್ರಮಾಣ ಮಾಡುವ.

ಬ್ರೂಟಸ್ — ಅಲ್ಲ, ಪ್ರಮಾಣವಲ್ಲ; ಜನರ ಮುಖಭಾವವು
ಅಲ್ಲವಾದರೆ ನಮ್ಮ ಆತ್ಮದ ದುಗುಡ ದುಃಖ
ಗಳನು ಭಾವಿಸಿ; ಈ ನಮ್ಮ ಉದ್ದೇಶವು ದುರ್ಬ
ಲವೆನಿಸಿದರೆ ಪ್ರತಿಯೊಬ್ಬನು ಸೋಮಾರಿತನದ ಹಾಸಿ
ಗೆಯಲಿ ನಿದ್ರಿಸಲಿ. ಅಂತಾಗಲಿ ಪ್ರತಿಯೊಬ್ಬನು
ಚೀಟಿಯ ಸರದಿಯಲಿ ಸೋಲುವವರೆಗೂ ಈ
ನಿರಂಕುಶ ಪ್ರಭುತ್ವವೇ ನಡೆಯಲಿ!
ಆದರೂ ಈ ಜನಕ್ಕೆ ಇದೆಯೆಂದೇ ನಾನು
ನಂಬಿರುವ ಆತ್ಮಬಲವು ಹೇಡಿಗಳನ್ನು ಹುರಿ
ದುಂಬಿಸಲು ಮತ್ತು ಉಕ್ಕಿನ ಸಮದಾರ್ಢ್ಯ ನಿಶ್ಚಯ
ಹೆಂಗಸರ ಕೋಮಲತೆಯನ್ನೂ ಕಿಸ ಅವರನ್ನು
ಕೆರಳಿಸಲಿದೆಯೆಂದಾದರೆ, ಎಲ್ಲ ದೇಶೀಯ

ಕೆ, ಆಗ ಜನರ ಕಷ್ಟ ನಿವಾರಣೆಗೆ ನಮ್ಮ
ಧ್ಯೇಯವೊಂದು ಅಲ್ಲದೆ ಬೇರೆ ಉದ್ದೇಶವಾ
ವುದು ಇರುತ್ತ ಏಕೆ?
ನಡೆದುದಕ್ಕೆ ತಪ್ಪುದೆಯೆ ರಹಸ್ಯವನು ಸಾಧಿಸಿ
ದೋಷಿತನ್ನರಿಗೆ ಸತ್ಯವನು ಸತ್ಯವಾಗಿ ಬರೆಸಿ
ತಾವು ನಿರ್ಧರಿಸಿದವನ್ನು ಮಾಡುವೆವು, ಹೇಳಿದ
ಕೆ ತಪ್ಪು ನಡೆಯಿತು, ಎಂಬುವರಿಗೆ ಪ್ರಮಾಣ ಪ್ರ
ತಿಜ್ಞೆಗಳು ಏಕೆ?
ಆಹಾರ್ಯ ನಡೆಯು ಸಾಧನಗಳೆ, ಹೊಡಿಗಳೆ, ಮೋಸ
ಗಾರರೆ, ಎಲ್ಲ ನಿರ್ಜೀವಿ ಹುಳುಗಳೆ, ಓಳಿತಲ್ಲ
ದನಾಧ್ಯಾನಿತರವರೆ, ಸಂಶಯಾಗ್ರಸ್ತರೆ,
ಈ ನಮ್ಮ ಯೋಜನೆಯಲ್ಲಿ ಇಂಥ ಸಾಧನವನ್ನು ಉಪ
ಗಿಸಲಾಗದು ನಮ್ಮ ಧ್ಯೇಯಕ್ಕೆ ಕಳಂಕವನ್ನು
ಹಚ್ಚದೆಯೇ ಇರಿ!
ನಮ್ಮ ಸಂಕಲ್ಪವನ್ನು ನಮ್ಮ ಕ್ರಿಯೆಯನು ನಿ
ಷ್ಠೆಯಲ್ಲಿ ನಡೆಸಿದಿದ್ದರೆ ಪ್ರತಿಯೊಬ್ಬ ರೋಗಿಯನ್ನು
ನು ಹಿಡಿಯುತ್ತಲಿ ಹಾಗೂ ಸಲ್ಲಿ ಸ್ತೋತ್ರ ಪ್ರತಿಯೊಂದು
ಹನಿ ರಕ್ತವು ಬಹುತರ ಹಾದರದ ಪರಿಣಾಮ
ವೆಂದು ಎತ್ತುತ್ತ ತಾವೇ ಪ್ರಕಾಶೋತ್ತಿ ಉದರೊಂದು ಅಣ
ಅಂಶ ಮಾಡಿದರೂ ನಡೆಸದೆಯೇ ಇದ್ದರೆ ನಾವು
ದ್ರೋಹಿಗಳೆ ಆಗುವೆವು!

ಕಸ್ತೂರ್ — ನಿಶ್ಚಿರೋನ ವಿಚಾರವೇನು? ಅವನನ್ನು ಮಾ
ತಾಡಿಸಿ ತಿಳಿಯೋಣವೆ? ಅವನು ನಮ್ಮೊತನೆ ಬಹು
ನಿಷ್ಠೆಯಿಂದ ಸೇರುವನು ಎಂದು ನೆನೆಯುತ್ತೇನೆ.

ಕಾಸ್ಕ — ಅವನನ್ನು ನಾವು ಬಿಟ್ಟುಬಿಡಬಾರದು.

ಸಿನ್ನ — ಇಲ್ಲ, ಹಾಗಾಗಲೇ ಬಾರದು.

ಮೆಟೆಲ್ಲಸ್ — ಹಾ, ನಾವು ಅವನನ್ನು ನಮ್ಮೊತನೆ ಸೇರಿಸುವ;
ಅವನ ನರೆತ ಕೂದಲು ನಮ್ಮ ಬಗೆ ಒಳ್ಳೆಯ
ಅಭಿಪ್ರಾಯವನ್ನು ಕೊಂಡಂತಾಗುವುದು; ನಮ್ಮ
ಸಾಧನೆಗಳನ್ನು ಸಮರ್ಥಿಸುವ ಜನಾಭಿಪ್ರಾಯವ
ನು ಕೊಂಡಂತಾಗುವುದು; ಅವನ ನ್ಯಾಯದರ್ಶನ
ವು ನಮಗೆ ಪ್ರೇರಕವು ಎಂದು ಮುಂದಿನ ದಿನಗ
ಳಲಿ ಹೇಳುವರು; ನಮ್ಮ ಯುವಜನ ಮತ್ತಿತರ
ಜನ ಮುಂದಾಳೆ ಬರಲಾರರು ದೊಡಿಯು ಅವನ
ಗಂಭೀರ ತ್ವಾಕರ್ಷಣೆಯೊಳಗೆ ಅವರು ಅಡಗುವರು.

ಬ್ರೂಟಸ್ — ಓ, ಅವನ ಹೆಸರೆತ್ತಬೇಡಿ; ಅವನಿಂದ ಪ್ರೊ

ರವಾಗತವುದೂ ಬೇಡ; ಏಕೆಂದರೆ ಇತರರು
ಪ್ರಾರಂಭಿಸಿದಂತದಾವುದನ್ನು ಅವನು ಹಿಪ್ಪ ಅ
ನುಸರಿಸಿದ್ದಿಲ್ಲ, ಇಲ್ಲ!

ಕ್ಯಾಶ್ಯಸ್ — ಹಾಗಾದರೆ ಅವನನ್ನು ಬಿಟ್ಟುಬಿಡುವ.

ಕ್ಯಾಸ್ಕ — ನಿಜಕ್ಕೂ ಸರಿ, ಅವನು ಇದಕ್ಕೆ ತಕ್ಕವನಲ್ಲ.

ಡೆಸಿಯಸ್ — ಸೀಸ್ಸರನನ್ನು ಹೊರತು ಬೇರಾವನನ್ನೂ
ಕೆಣಕುವುದು ಬೇಡವಲ್ಲವೆ?

ಕ್ಯಾಶ್ಯಸ್ — ಚೆನ್ನಾಗಿ ಹೇಳಿದೆ ಡೆಸಿಯಸ್; ಆದರೆ ಅದು ಸರಿ
ಯಲ್ಲವೆಂದು ನನ್ನ ಎಣಿಕೆಯಾಗಿದೆ. ಸೀಸ್ಸರ
ನ ವಿಶೇಷ ವಿಶ್ವಾಸಕ್ಕೆ ಪಾತ್ರನಾಗಿಸಿದ ಮಾರ್ಕ್
ಆಂತೋನಿಯು ಸೀಸ್ಸರನನಂತರ ಬದುಕಿದರೆ ಅ
ವನೊಬ್ಬ ಚತುರಕುಬುದ್ಧಿಯು ಸಂಚುಗಾರನೆಂದು ತಿ
ಳಿದುಕೊಳ್ಳಬಹುದು. ಅವನ ಕ್ರಮವು ವೆಂತೆಂದು ನಿ
ಮಗೆ ಗೊತ್ತೆ? ಅವನು ಅದನ್ನು ಸಾಧಿಸಿದರೆ ಅದ
ನ್ನವನು ಮುಂದೊತ್ತಿ, ನಮ್ಮನ್ನೆಲ್ಲ ಉಪದ್ರವಗೊಳಿ
ಸಿದರೂ ಸರಿ. ಅಂತಾಗದಂತೆ ಸಗಲು ಆಂತೊ
ನಿ ಸೀಸ್ಸರರಿಬ್ಬರು ಒಟ್ಟಿಗೂಡಿ ಹತರಾಗಲಿ.

ಬ್ರೂಟಸ್ — ಹಾ, ನಾವು ಹಿಡಿದ ದಾರಿ ತುಂಬಾ
ರಕ್ತದಿಂದ ತೋಯ್ದಂತೆ ಆಗುವುದು, ಕೈಯಸ್ ಕ್ಯಾ
ಸ್ಸಿಯಸ್! ಅದು ತಲೆಯನ್ನು ಕಡಿದು ಅನಂತರ ಅಂಗ
ಗಳನ್ನು ತುಂಡರಿಸಿದಂತೆ! ಕ್ರೋಧದಲಿ ಕೊಂದು ಅ
ನಂತರ ಅಸೂಯೆಯನ್ನು ತೋರಿಸಿದಂತಾಗು
ವುದು; ಆಂತೋನಿಯು ಸೀಸ್ಸರನ ಒಂದು ಅಂಗ ಮಾ
ತ್ರ; ನಾವು ತ್ಯಾಗಿಗಳಾಗಿನಿಸುವ, ಕಟುಕರೆಂದೆನಿ
ಸುವುದು ಬೇಡ, ಕೈಯಸ್, ನಾವು ಸೀಸ್ಸರನ ಜೀ
ವಕ್ಕೆ ಎದುರಾಗಿರುವೆವು; ಆದರೆ ಜನದ ಜೀ
ವದಲ್ಲಿ ರಕ್ತವಿಲ್ಲ. ಆಹಾ, ನಾವು ಸೀಸ್ಸರನ
ನು ವಧಿಸದೆಯೆ ಅವನಾತ್ಮಕ್ಕೆ ಎದುರಾಗುವ. ಅ
ಹಾ, ಆಂತೆನಿಸಿ ಸೀಸ್ಸರನು ತನ್ನ ರಕ್ತವನ್ನು
ಸುರಿಯಬೇಕಾಗುತ್ತದೆ. ಮಾನ್ಯ ಗೆಳೆಯರೆ, ನಾ
ವು ನಿರ್ಭೀತರಾಗಿಯೆ ಅವನನ್ನು ಕೊಲ್ಲುವ,
ದ್ವೇಷದಿಂದಲ್ಲ. ಅವನನ್ನು ದೇವತೆಗಳಿಗೆ
ಆಹಾರವಾಗಿ ಮಾಡುವ, ನಾಯಿಗಳಿಗೊಪ್ಪು
ವ ಸತ್ತ ಪಶುಗಳ ಮಾಂಸವಾಗಿ ಅಲ್ಲ. ಚತುರರೆ
ನಿಸಿದ ಧನಿಕರಂತೆಯೆ ನಮ್ಮ ಹೃದಯವು ಅವರ
ಜೀತದವರನ್ನು ಉದ್ರೇಕಗೊಳಿಸಿ ಅವರ

ನಮ್ಮ ಕಾರ್ಯ ರಕ್ಷಿಸುವಂತಾಗಲಿ. ಇದು ನಮ್ಮ ಉದ್ದೇ
ಶದ ಅವಶ್ಯಕತೆಯನ್ನು ಸೂಚಿಸುವುದು, ಮತ್ಸರ
ವನ್ನಲ್ಲ; ಆಗ ಜನಸಾಮಾನ್ಯರು ನಮ್ಮ
ನ್ನು ಸಂಹಾರಕರೆಂದೆನ್ನುವರಲ್ಲದೆ ಕೊಲೆಗಾ
ರರೆಂದು ಅಲ್ಲ. ಮಾರ್ಕ್ ಅಂತೋನಿಯ ಬಗ್ಗೆ ಹೇ
ಳುವುದಾದರೆ ಅವನನ್ನು ಗಮನಿಸುವುದೆ ಬೇಡ.
ಸೀಸ್ಸರನ ತಲೆ ಹೋಗಲು ಸೀಸ್ಸರನ ತೋಳುಗ
ಳೆಷ್ಟು ಸಾಧಿಸುವುದೋ ಅದಕ್ಕಿಂತ ಹೆಚ್ಚು
ಅವನಿಂದ ಸಾಧ್ಯವಾಗದು!

ಕ್ಯಾಸ್ಯಸ್ — ಹಾಗಿದ್ದರೂ ಸೀಸ್ಸರನಲ್ಲಿ ಅವನು ಕಟ್ಟಿಟ್ಟಾ
ಡೆ ಬೆಳೆಸಿದ ಅವನ ಪ್ರೀತಿಗೆ ನಾನು ಹೆದರುವೆನು.

ಬ್ರೂಟಸ್ — ಮಿತ್ರ, ಕ್ಯಾಸ್ಯಸನೆ,
ಹಾಗೆ ಯೋಚಿಸಬೇಡ. ಅವನು ಸೀಸ್ಸರನನು
ಪ್ರೀತಿಸುವುದಾದರೆ ಅದೆಲ್ಲ ಅವನಿಗಾಗಿಯೇ!
ಸೀಸ್ಸರನನು ನೆನೆಯುತ್ತ ಅವನಿಗೆಯೇ ಕೊಂಡೆ ಸಾ
ಯುವುದಷ್ಟೆ ಅವನಿಂದ ಸಾಧ್ಯ; ಆದರೆ ಅವನು
ಆಟ, ಸರಸತನ ಮತ್ತು ಜನಸಹವಾಸಕ್ಕೆ
ಎಂದು ಇಚ್ಛಿಸುವವನು.

ಟ್ರಿಬೋನ್ಯಸ್ — ಅವನ ಬಗ್ಗೆ ಹೆದರಿಕೆ ಇಲ್ಲ. ಅವನು ಸಾಯದೆ
ಉಳಿಯಲಿ, ಏಕೆಂದರೆ ಅನಂತರ ಅವನು ಬ
ದುಕುತ್ತಲೆ ಇದನ್ನೆಲ್ಲ ಕುರಿತಾಗಿ ನಗುವನು!

(ಗಡಿಯಾರ ಬಾರಿಸುವುದು)

ಬ್ರೂಟಸ್ — ಮೌನವಿರಿ, ಸಮಯವೆಷ್ಟಾಯಿತು, ನೋಡಿ.

ಕ್ಯಾಸ್ಯಸ್ — ಗಡಿಯಾರ ಮೂರು ಗಂಟೆಯಾದುದನು ಹೇಳಿತು.

ಟ್ರಿಬೋನ್ಯಸ್ — ಹೋಗಲು ಹೊತ್ತಾಯಿತು.

ಕ್ಯಾಸ್ಯಸ್ — ಈ ದಿನವೆ ಸೀಸ್ಸರನು ಹೊರಬರುವನೋ ಎಂಬುದು
ಸಂದೇಹವೆ ಸರಿ; ಈಚೀಗೆ ಅವನು ಅಂಧಶ್ರ
ದ್ಧೆಗೊಳಗಾಗಿದ್ದಾನೆ. ವಾಸ್ತವಿಕ ವಿಚಾರಗ
ಳನು ಬಿಟ್ಟು ಒಮ್ಮೆ ಅವನು ಕಾಲ್ಪನಿಕ ಕತೆಗಳು
ಸ್ವಪ್ನಗಳು ಉತ್ಸವಾದಿಗಳನ್ನು ನಂಬುವವನು;
ಈ ವಿಲಕ್ಷಣ ವಿಚಾರಗಳು ರಾತ್ರಿಯಲ್ಲಿ ಎಂದೋ
ಅಸಾಧಾರಣವಾಗಿ ತೋರ್ಪಡಿಸಲಾ ಭಯಾನಕ ಘ
ಟನೆಗಳು ಅವನನ್ನಿಂದು ಶಾಸನ ಸಭಾಭವ
ನಕ್ಕೆ ಹೋಗುವುದು ಬೇಡವೆಂದವನ ಭವಿಷ್ಯವ
ನು ಹೇಳುವವರು ಅವನನು ತಡೆಹಿಡಿಬಹುದು.

ಡೆಸ್ಯಸ್ — ಅದೇನೂ ಭಯಬೇಡ; ಅವನು ಹೋಗುವುದಿಲ್ಲ

ವೆಂಬುದು ನಿರ್ಧಾರವಾದರೆ ಅವನನ್ನು ನಾನು ಒಪ್ಪಿಸುವೆ; ಒಂದೇ ಕೊಂಬಿನ ಕುದುರೆಯಂತಿರುವ ಕಾಲ್ಪನಿಕ ಮೃಗಗಳು ಮರಗಳಿಂದ, ಕರಡಿಗಳು ಕನ್ನಡಿಗಳಿಂದ; ಆನೆಗಳು ಗುಂಡಿಗಳಿಂದ ಸಿಂಹಗಳು ಬಲೆಗಳಿಂದ ಜನವು ಹೊಗಳುಭಟ್ಟರಿಂದ ಮೋಸಕ್ಕೆ ಒಳಗಾಗಬಹುದಷ್ಟೆ! ನಾನು ಹೊಗಳಿಕೆಯ ಜನವನ್ನವನು ಮೆಚ್ಚುವುದಿಲ್ಲವೆಂದೆನ್ನುವಾಗ ಅವನದಕ್ಕೆ ಇನ್ನಷ್ಟು ಹೊಗಳು

ಪ್ರಿಯವನೆನಿಸಿ ಹಿಗ್ಗುವನು.

ಅದನು ಕುರಿತಾಗಿ ನಾನು ನೋಡುವೆನು; ಅವನ ಅಹಂಕಾರವನೊಂದಷ್ಟು ಉಬ್ಬಿಸಿ ಅವನನು ಸೆನೆಟ್ ಸಭಾ ಭವನಕೆ ಕರೆತರುವೆನು!

ಕ್ಯಾಸ್ಯಸ್ — ಅವನನ್ನು ಎದುರುಗೊಳ್ಳಲು ನಾವೆಲ್ಲ ಅಲ್ಲಿರುವೆವು

ಬ್ರೂಟಸ್ — ಎಂಟುಗಂಟೆಯೊಳಗಾಗಿ; ಹೆಚ್ಚಾದರೆ ಅದೇ ಸಮಯಕಷ್ಟೆ!

ಸಿನ್ನ — ಅದೆ ತಡವಾದ ಸಮಯ; ಆಗಲೆ ಅಲ್ಲಿರಲು ತಪ್ಪದಿರಿ,

ಮೆಟೆಲ್ಲಸ್ — ಪಾಂಪೆಯನ್ನು ಕುರಿತಾಗಿ ಅಭಿಮಾನದಿಂದ ನುಡಿದು ಸೀಸರನ ಕೋಪಕ್ಕೊಳಗಾದ ಕೈಯಸ್ ಲಿಗಾರಿಯಸನನು ನೀವೆಲ್ಲ ಯೋಚಿಸಲಿಲ್ಲವೇಕೆಂದು ಊಹಿಸುತ್ತಿದ್ದೇನೆ,

ಬ್ರೂಟಸ್ — ಮಿತ್ರ, ಮೆಟೆಲ್ಲಸ್, ಅವನ ಬಳಿಗೆ ಹೋಗು. ನನ್ನಲ್ಲಿ ಅವನಿಗೆ ತುಂಬ ಅಭಿಮಾನವಿದೆ, ಅದಕ್ಕೆ ನಾನೆಯೆ ಕಾರಣನು; ಅವನನಿತ್ತ ಕಳುಹಿಸು, ನಾನು ಅವನನ್ನು ಒಪ್ಪಿಸುತ್ತೇನೆ.

ಕ್ಯಾಸ್ಯಸ್ — ಬೆಳಗು ಹೊತ್ತು ನಮ್ಮತ್ತ ಹರಿಯುತಿದೆ; ಬ್ರೂಟಸ್, ನಾವೀಗ ಇಲ್ಲಿಂದ ಹೋಗುವೆವು; ಹೊ ಮಿತ್ರರೆ, ನೀವೆಲ್ಲ ಒಬ್ಬೊಬ್ಬರಾಗಿ ಚದುರಿಹೋಗಿರಿ; ಆದರೊಡನೆಯೆ ಇಲ್ಲಿ ಹೇಳಿದನೆಲ್ಲ ನೆನಪಿಟ್ಟುಕೊಂಡು ನೀವು ರೋಮನರೆಂಬುದನು ತೋರ್ಪಡಿಸಿ.

ಬ್ರೂಟಸ್ — ಸಂತೋಷ, ಮಹನೀಯರೆ, ಹುಮ್ಮಸಿನಲಿ ಸಂತೋಷದಲಿ ಕಾಣಿಸಿಕೊಳ್ಳಿರಿ; ನಮ್ಮ ಉದ್ದೇಶವೇನೆಂಬುದನ್ನು ನಮ್ಮ ನೋಟದಿಂದ ತೋರ್ಪಡಿಸಬಾರದು; ತಮ್ಮ ಸೋಲಿಲ್ಲದ ಮನೋಶಕ್ತಿ ಮತ್ತು ಔಪಚಾರಿಕ ನಿಷ್ಠೆಯನು ನಮ್ಮ ರೋಮನ್ ನಟರು ತೋರ್ಪಡಿಸುವ

800

ವರೆಂಬುದನು ಗಮನಿಸಿರಿ; ನೀವೆಲ್ಲರಿಗೂ
ಮುಂದಿನ ದಿನ ಶುಭವನ್ನು ತರಲಿ.

(ಬ್ರೂಟಸ್ ಹೊರತು ಎಲ್ಲರೂ ಹೋಗುವರು)

ಎಚ್ಚರ ಹುಡುಗ, ಲೂಸಿಯಸ್,
ನಿದ್ದೆ ಹೊಡೆಯುತ್ತಿರುವೆಯೊ? ಪರವಾಗಿಲ್ಲ, ತನಿಮಂ
ಜಿನ ನಿದ್ದೆಯ ಮಾಧುರ್ಯವನ್ನು ಅನುಭವಿಸು; ಮಾ
ನವರ ಮೆದುಳನ್ನು ಕೊರೆಯುವ ತಾಪತ್ರಯವೇ
ಆಗಲಿ ಕನಸು ಕಲ್ಪನೆಗಳಾಗಲಿ ಇಲ್ಲದೆ
ಇರುವ ನೀನು ಚೆನ್ನಾಗಿ ನಿದ್ರಿಸುವೆ, ನಿದ್ರಿಸು!

(ಪೋರ್ಷಿಯಾ ಬರುವಳು)

ಪೋರ್ಷಿಯಾ — ಬ್ರೂಟಸ್, ನನ್ನ ಪ್ರಿಯತಮ,

ಬ್ರೂಟಸ್ — ಪೋರ್ಷಿಯಾ; ಏನಿದು? ಏತಕ್ಕಾಗಿ? ನೀನೇಕೆ
ಎದ್ದೆ? ಮುಂಜಾವದ ಚಳಿಗೆ ನಿನ್ನ ದೌರ್ಬಲ್ಯ
ವನ್ನೊಡ್ಡಿದರೆ ಅದು ನಿನ್ನ ಶರೀರಕ್ಕೆ
ಒಳ್ಳೆಯದಲ್ಲ.

ಪೋರ್ಷಿಯಾ — ನಿನಗೂ ಅದು ಒಳ್ಳೆಯದಲ್ಲ, ಬ್ರೂಟಸ್, ನೀನು
ನನ್ನ ಹಾಸಿಗೆಯಿಂದ ಸದ್ದಿಲ್ಲದೆ ನನಗರಿ
ಯದಂತೆಯೆ ಎದ್ದು ಹೋದೆ; ಅಲ್ಲದೆ ನಿನ್ನೆ ರಾ
ತ್ರಿ ಊಟದ ಮಧ್ಯೆ ನೀನು ತಕ್ಷಣ ಎದ್ದು ನಿ
ನ್ನ ಕೈಗಳನು ಅಡ್ಡಡ್ಡ ಹಾಕಿ ಎದೆಮೇಲಿ
ಟ್ಟು ಏನೋ ಆಲೋಚಿಸುತ್ತ, ನಿಟ್ಟುಸಿರು ಬಿಡು
ತ್ತ ಅತ್ತಿತ್ತ ನಡೆದೆ; ಅದೇಕೆ, ಏನಾಯಿತೆಂ
ದು ಕೇಳಲು ನೀನು ನನ್ನತ್ತ ಅಸಹನೀಯತೆ
ಯಿಂದ ನೋಡಿದೆ. ನಾನು ಏನಾಯಿತು ಎಂದು ಪು
ನಃ ನಿನ್ನನ್ನು ಕೇಳಲು ನೀನು ನಿನ್ನ ತಲೆಯನು
ಅದೇಕೋ ಕೆರೆದೆ; ತುಂಬ ತಾಳ್ಮೆಗೆಟ್ಟವನಂತೆ
ಕಾಲಿಂದ ನೆಲವನ್ನು ಒದ್ದು ಬಡಿದೆ. ನಾನು ಪು
ನಃ ಏನದು ಎಂದು ಕೇಳಿದೆ; ನೀನು ಉತ್ತರಿಸ
ಲಿಲ್ಲ; ಕೋಪದ ಕೊಳ್ಳಗಾಗಿ ಕೈ ಬೀಸುತ್ತ ನಿ
ನ್ನಿಂದ ಆಗಲಲು ಸಂಜ್ಞೆಯನು ಮಾಡಿದೆ; ನಿನ್ನ ಮ
ನೋವ್ಯಾಕುಲತೆ ಹೆಚ್ಚುವುದನು ಕಂಡು ನಾನು ಅ
ಲ್ಲಿಂದ ಬಂದೆನು; ನಿನ್ನ ಮನಸ್ಸಿನ ತಾಕಲಾಟ
ನಿನ್ನನ್ನು ತಿನ್ನಲಿಕ್ಕೆ ಮಾತಾಡಲಿಕ್ಕೆ ನಿದ್ರಿಸ
ಲಿಕ್ಕೆ ಬಿಡದು; ಅದು ನಿನ್ನ ದೇಹಕ್ಕೆ ಹಿತವಲ್ಲ;
ಆ ಕಾರಣದಿಂದ ಅದು ಏಕೆಂದು ನಾನು ತಿಳಿ
ಯಬೇಡವೆ? ನನ್ನ ಪ್ರಿಯನೆ, ಬ್ರೂಟಸನೆ, ನಿನ್ನ

ಮನಸ್ಸೋದ್ವೇಗವದು ಏಕೆಂದು ಹೇಳು.

ಬ್ರೂಟಸ್ — ಅದೇಕೋ ನನ್ನ ದೇಹಾರೋಗ್ಯ ಸರಿಯಿಲ್ಲ, ಅಷ್ಟೆ!

ಪೋರ್ಷಿಯ — ಬ್ರೂಟಸನು ಬುದ್ಧಿಜೀವಿ; ಅವನಿಗೆ ದೇಹಸುಖ ವಿಲ್ಲವಾದರೆ ಅವನು ಅದಕ್ಕೆ ಚಿಕಿತ್ಸೆಯನು ಕುರಿತಾಗಿ ಕೂಡಲೆ ಯೋಚಿಸುವನು!

ಬ್ರೂಟಸ್ — ಏಕೆ? ಅಂತೆಯೆ ಮಾಡುವೆನು; ಪ್ರಿಯೆ, ಪೋರ್ಷಿಯ ಹೋಗಿ ಮಲಗಿಕೋ;

ಪೋರ್ಷಿಯ — ಬ್ರೂಟಸನಿಗೆ ಮೈ ಚೆನ್ನಾಗಿಲ್ಲವೆ? ಮೈಯನ್ನು ಚೆನ್ನಾಗಿ ಹೊದೆಯದೆ ಬೆಳಗಿನ ಸಮಯದ ಶೈತ್ಯಕೆ ಮೈಯೊಡ್ಡಿ ನಡೆಯುವುದು ಒಳ್ಳೆಯದೆ? ಏನು? ಬ್ರೂಟಸನು ಅಸ್ವಸ್ಥನೆ? ಅನಿಷ್ಟಕಾರಕ ಪ್ರಕೃತಿಯನು ಎದುರಿಸಿ ಅವನು ಆ ರಾತ್ರಿಯ ತಣ್ಣನೆ ಗಾಳಿಯಲಿ ತನ್ನ ಅಸ್ವಸ್ಥತೆಯನು ಹೆಚ್ಚಿಸಿಕೊಳ್ಳಲು ಬ್ರೂಟಸನು ತನ್ನ ಹಾಸಿಗೆಯಿಂದ ಕದ್ದು ಹೋಗುವನೆ? ಇಲ್ಲ, ನನ್ನ ಪ್ರಿಯ ಬ್ರೂಟಸ್, ನಿನ್ನ ಮನಸಿನಲಿ ಏನೊ ಅಸಹ್ಯ ಅಪರಾಧ ಮನೆಮಾಡಿದೆ. ಅದು ಏನೆಂದು ನಾನು ನನ್ನ ಸ್ಥಾನವನು ನಿನ್ನ ಹಕ್ಕನ್ನು ಗಮನಿಸಿ ತಿಳಿಯಬೇಕಾಗಿದೆ. ನಾನು ಕಾಲೂರಿ ನಿನ್ನನ್ನು ಬೇಡುವೆನು. ಒಮ್ಮೆ ನೀನು ತುಂಬಾ ಮೆಚ್ಚಿದ್ದಾ ನನ್ನ ಸೌಂದರ್ಯ, ನೀನು ಹಲವು ಸಲ ಪ್ರಮಾಣಿಸುತ್ತ ನನಗೆ ತೋರಿಸಿದ ನಲವುಗಳು, ನಾವಿಬ್ಬರೊಂದಾದಾಗ ಸಲ್ಲಿಸಿದ ಪ್ರಮಾಣ ವಚನ, ಅಂತೆಯೆ ನೀನು ನನಗೆ ನಿನ್ನ ಅರ್ಧಾಂಗಿಗೆ ಯಾವ ರಹಸ್ಯ ವಿಷಯವನ್ನು ಹೇಳುವೆನು ಎಂದು ನೀನಿತ್ತ ವಚನಗಳಿಗನುವಾಗಿ ನೀನೇಕೆ ಇಂದು ವ್ಯಾಕುಲತೆಗೊಳಗಾಗಿರುವೆಯೆಂದು ಹೇಳು; ಜನ ಅದಾರು ರಾತ್ರಿಯಲಿ ನಿನ್ನ ಸಹಕಾರವನು ಬಯಸಿ ಬಂದರು? ಏಕೆ? ಆ ಆರೋ ಏಳೋ ಜನ ತಮ್ಮ ಮುಖವನ್ನು ಕತ್ತಲೆಯಲೂ ಸಹ ಮರೆಸಿಕೊಂಡು ಬಂದರೇಕೆ?

ಬ್ರೂಟಸ್ — ಮೊಣಕಾಲೂರುವುದು ಬೇಡ, ಪ್ರಿಯ ಪೋರ್ಷಿಯ!

ಪೋರ್ಷಿಯ — ನೀನು ಸನ್ಮಾನ್ಯ ಬ್ರೂಟಸನೆ ಆದರೆ ಅಂತೆ ಸಗೆನು; ನಮ್ಮ ವೈವಾಹಿಕ ನಿಯಮದಂತೆ ನಿನಗೆ ಸಂಬಂಧಿಸಿದ ಗಹನ ವಿಷಯವದೇನೂ ನ

ನ್ನಗೆ ತಿಳಿಯಬಾರದೆಂದಿದೆಯೆ? ನಿನ್ನೊಡನೆ ನಾ
ನು ಒಂದು ಮಿತಿಗೊಳಪಟ್ಟು ಬರೀ ಊಟ ಶಯ್ಯೆಯಲಿ
ಎನುತದರೊಡನೆ ಒಂದಿಷ್ಟು ಮಾತಾಡಲಿಕೆ ಮಾ
ತ್ರವೆ? ನಿನ್ನದೆ ಸಂತೃಪ್ತಿಯ ಉಪನಗರದಲಿಯೆ
ಹೊರರೀತಿಯಂತೆ ಮಾತ್ರ ನಾನು ಇರಬೇಕೆ? ಅಂ
ತಾದರೆ ಪೋರ್ಷಿಯಾಳು ಬ್ರೂಟಸನ ವೇಶ್ಯೆ ಮಾ
ತ್ರ! ಹೆಂಡ್ತಿ!!

ಬ್ರೂಟಸ್ — ನೀನು ನನ್ನ ಖಿನ್ನ ಹೃದಯದಲಿರುತ್ತಿಹ ಕೆ
ನ್ನೆತ್ತರ ಹನಿಗಳಷ್ಟೆ ನನಗೆ ಪ್ರಿಯಳೆನಿಸಿಹ
ನಿಷ್ಠೆಯ ಸನ್ಮಾನ್ಯತೆಯ ಹೆಂಡ್ತಿ!

ಪೋರ್ಷಿಯಾ — ಇದು ಸತ್ಯವೆಂದರೆ ರಹಸ್ಯವದು ಏನೆಂದು
ನಾನು ತಿಳಿಯಲೇಬೇಕು; ನಾನೊಪ್ಪುವೆ ಹೆಣ್ಣು, ನಿಜ;
ಆದರೆ ಅದಕ್ಕಿಂತ ಹೆಚ್ಚಾಗಿ ಮಾನ್ಯ ಬ್ರೂ
ಟಸನು ತನ್ನ ಸತಿಯಾಗಿ ಒಪ್ಪಿದ ಹೆಣ್ಣು; ಕೇ
ಟೋನ ಮಗಳು, ಇಂತಾ ತಂದೆ ಮತ್ತು ಇಂತಾ
ಪತಿಯನ್ನು ಹೊಂದಿದ್ದೇ ನನ್ನ ಹೆಣ್ತನವನ್ನು
ಮೀರಿಯೂ ಶಕ್ತಿ ನನಗಿಲ್ಲವೆಂದೆಣಿಸಿದೆಯಾ?
ನಾನು ಯಾರಿಗೂ ಹೇಳಲಾರೆನು; ನಿನ್ನ ವಿಷ
ಯವೇನೇನು ಹೇಳು; ಇದೋ ನನ್ನೀ ತೊಡೆಯಲ್ಲಿ
ನಾನು ಈ ಗಾಯವನು ಮಾಡಿಕೊಂಡಿರುವುದು ನನ್ನ
ದೃಢನಿರ್ಧಾರಕ್ಕೆ ಸಾಕ್ಷಿಯಾಗಿದೆ. ಅದನು
ಸಹಿಸಲು ನನಗೆ ಸಾಧ್ಯವಿರುವಾಗ ನನ್ನ ಪತಿ
ಯ ಗುಟ್ಟುಗಳನಿಟ್ಟುಕೊಳಲೇನು ಅಸಾಧ್ಯವೆ?

ಬ್ರೂಟಸ್ — ಹಾ ದೇವರೆ ಈ ನನ್ನ ಸನ್ಮಾ
ನ್ಯಳಾದ ಸತಿಗೆ ತಕ್ಕವನಾಗಿರುವಂತೆ ನ
ನ್ನನ್ನು ಕಾರುಣಿಸು.

(ಟಕ, ಟಕ - ಬಾಗಿಲು ತಟ್ಟುವರು)

ಯಾರೋ ಬಾಗಿಲು ತಟ್ಟುವರು; ಒಂದು ನಿಮಿಷಕ್ಕೆ,
ಪೋರ್ಷಿಯಾ, ಒಳಗೆ ಹೋಗು;
ನನ್ನ ಎಲ್ಲ ಕಾರ್ಯಕ್ರಮಗಳನ್ನು, ದುಃಖದಿಂ
ದ ತೋರುತಿರುವ ನನ್ನೀ ಹುಬ್ಬುಗಳ ಕಾರಣವೆಲ್ಲ
ವನ್ನು ನನ್ನ ಹೃದಯಾಂತರಾಳದ ಗುಟ್ಟನ್ನು ನಿ
ನಗೆ ಕ್ರಮಶಃ ಹೇಳುವೆನು. ಈಗ ನನ್ನನ್ನು
ಇಲ್ಲಿ ಬೇಗನೆ ಬಿಡು!

(ಪೋರ್ಷಿಯಾ ಹೋಗುವಳು)

ಲೂಸಿಯಸ್, ಯಾರು ಬಾಗಿಲು ತಟ್ಟಿದರು?

(ಲೂಸಿಯಸ್ ಲಿಗಾರ್ಯಸನೊಡನೆ ಬರುವನು)

ಲೂಸಿಯಸ್ – ಇಲ್ಲಿ ಅಸ್ವಸ್ಥತೆಗೊಳಗಾದ ಓರ್ವನಿಗೆ ನಿನ್ನೊಡನೆ ಮಾತಾಡಬೇಕಂತೆ.

ಬ್ರೂಟಸ್ – ಮೆಟೆಲ್ಲಸ್ ಹೇಳುತ್ತಿದ್ದ ಕೈಯಸ್ ಲಿಗಾರ್ಯಸನೊ; ಹುಡುಗನೆ ಒಂದೆಡೆ ನಿಂತುಕೊ.
ಕೈಯಸ್ ಲಿಗಾರ್ಯಸನೆ ಹೇಗಿದ್ದಿ?

ಲಿಗಾರ್ಯಸ್ – ನನ್ನ ಈ ದುರ್ಬಲ ನಾಲಗೆಯಿಂದ ನಾಳಿನ ಒಳ್ಳಿದಾಗಲಿ ಎಂದು ಹೇಳಲು ಕೃಪೆ ನೀಡು.

ಬ್ರೂಟಸ್ – ಹಾ, ಧೈರ್ಯಶಾಲಿ ಕೈಯಸನೆ, ನೀನೊಂದು ವಸ್ತ್ರವನು ಹೊದ್ದು ಹೊರಬಂದ ಸಮಯವು ಎಂಥದು? ಅಸ್ವಸ್ಥನಾಗಿ ಇಲ್ಲವಾದರೆ!

ಲಿಗಾರ್ಯಸ್ – ಗೌರವವನು ತರುವ ಅತಿ ಸಾಹಸಕರವಾದ ಕಾರ್ಯವೇನಾದರೂ ಬ್ರೂಟಸನಿಗೆ ಇದ್ದರೆ ನಾನು ಅಸ್ವಸ್ಥನಲ್ಲ.

ಬ್ರೂಟಸ್ – ಅಂಥ ಒಂದು ಸಾಹಸಕಾರ್ಯವಾಗಬೇಕಾಗಿದೆ, ಲಿಗಾರ್ಯಸ್, ಅದನು ಕುರಿತು ಹೇಳುವುದನ್ನು ಆಲಿಸಲು ನಿನಗೆ ಸ್ವಾಸ್ಥ್ಯವುಳ್ಳ ಕಿವಿಗಳಿತ್ತೆ?

ಲಿಗಾರ್ಯಸ್ – ರೋಮನ್ನರು ಸ್ತುತಿಸುವ ದೇವರುಗಳೆಲ್ಲರ ಕೃಪೆಯಿಂದ ನನ್ನ ಅಸ್ವಸ್ಥತೆಯನು ನಿವಾರಿಸುವೆನು; ರೋಮಿನ ಆತ್ಮವೆ! ಗೌರವಾನ್ವಿತ ಕುಲದಲಿ ಜನಿಸಿದ ವೀರಪುತ್ರನೆ! ಕಟ್ಟದನು ತೊಲಗಿಸುವ ಮಂತ್ರಗಾರನೆಂಬಂತೆ ನೀನು ನನ್ನ ನಿರುತ್ಸಾಹದ ಸ್ಥಿತಿಗೆ ಹುರುಪನ್ನು ಇತ್ತೆ! ಈಗ ನನಗಾದೇಶವನು ಕೊಡು; ಅಸಾಧ್ಯವಾದುದನು ಮಾಡಲು ಯತ್ನಿಸುವೆನು; ಹೌ! ಅದರಿಂದಲು ಹೆಚ್ಚು ಸಾಧಿಸುವೆ, ಏನು ಮಾಡಲಿ? ಹೇಳು.

ಬ್ರೂಟಸ್ – ಒಂದಿಷ್ಟು ಕೆಲಸ ಮತ್ತೆಗೆ ಸುಖವಿಲ್ಲದವರನು ಸಹ ನಿಸ್ಸ್ವಗಾಗಿಸುವುದು.

ಲಿಗಾರ್ಯಸ್ – ಸುಖದಲ್ಲಿರುವ ಕೆಲವರನ್ನು ತಾನೆ ನಾವು ಸುಖವಿಲ್ಲದಂತೆ ಮಾಗಿಸಬೇಕು?

ಬ್ರೂಟಸ್ – ಹೌದು, ಪ್ರಿಯ ಕೈಯಸ್, ಹಾಗೂ ಮಾಡಬೇಕು; ಈಗ ನಾವು ಹೋಗುತ್ತಾ ಯಾರಿಗೆ ಏನೇನು ಮಾಡುವುದೆಂಬುದರ ಸೂಕ್ಷ್ಮವನು ಹೇಳುವೆನು.

ಲಿಗಾರ್ಯಸ್ – ನೀನು ಹೊರಡು; ನಾನು ಹೊಸ ಸ್ಫೂರ್ತಿಗೊಂಡವನಂತೆ ನಿನ್ನನ್ನು ಹಿಂಬಾಲಿಸುವೆನು; ನಾನೇನನ್ನು ಮಾಡಬೇಕೊ ತಿಳಿಯೆನು; ಆದರೂ

ಬ್ರೂಟಸನು ನಿನ್ನನ್ನು ಮುಂದೊಯ್ಯುವವನಾದ
ರದೇ ಸಾಕು!

ಬ್ರೂಟಸ್ – ಹಾಗಾದರೆ ನನ್ನನನುಸರಿಸಿ ಬಾ. (ಹೋಗುವರು)

ದೃಶ್ಯ – ೨ : – ಸೀಸರನ ಅರಮನೆಯ ಕೋಣೆ.
(ಹೊರಗೆ ಸಿಡಿಲ್ಮಿಂಚುಗಳು; ಸೀಸರನು ತನ್ನ ಮನೆ
ಉಡುಪಿನಲ್ಲಿ ಬರುವನು)

ಸೀಸರ್ – ಈ ರಾತ್ರಿ ಭೂಮಿಯಾಗಲೀ ಆಕಾಶವೇ
ಇರಲಿ, ಪ್ರಶಾಂತವಾಗಿ ಕಾಣಿಸುತ್ತಿಲ್ಲ; ಮೂ
ರು ಬಾರಿ ಕ್ಯಾಲ್ಫೂರ್ನಿಯಾ ತನ್ನ ನಿದ್ದೆಯ
ಲಿ "ಹಾ ಬನ್ನಿ, ಬನ್ನಿರಿ, ಓಹೋ ಅವರು ಸೀಸರನ
ನು ಕೊಲ್ಲುತ್ತಿರುವರು, ಬನ್ನಿರಿ," ಎಂದು ಮೊರೆಯಿಟ್ಟ
ಳು; ಒಳಗೆ ಅದಾರು?

(ಒಬ್ಬ ಸೇವಕನ ಪ್ರವೇಶ)

ಸೇವಕ – ನನ್ನ ಪ್ರಭು?

ಸೀಸರ್ – ಪುರೋಹಿತರಿಗೆ ಹೋಗಿ ಹೇಳು ಪ್ರಾರ್ಥನಾ ಬಲಿ
ಯನ್ನು ಒಪ್ಪಿಸಲಿ ಎಂದು; ಕಾರ್ಯ ಕೈಗೂಡುವುದೋ
ಎಂಬುದನ್ನು ಕುರಿತಾಗಿ ಅವರ ಅಭಿಪ್ರಾಯವೇ
ನೆಂಬುದನ್ನು ನನಗೆ ತಿಳಿಸು.

ಸೇವಕ – ಹಾಗೆಯೇ ಮಾಡುವೆನು, ನನ್ನ ಪ್ರಭು!

(ಕ್ಯಾಲ್ಫೂರ್ನಿಯಳ ಪ್ರವೇಶ)

ಕ್ಯಾಲ್ಫೂರ್ನಿಯಾ – ಸೀಸರ್, ಇದರ ಅರ್ಥವೇನು? ಏನೋ ಯೋಚಿ
ಸುತ್ತ ಅತ್ತಿತ್ತ ನಡೆಯುವೆ? ಈ ದಿನ ನೀನು ಮ
ನೆಯನ್ನು ಬಿಟ್ಟು ಹೋಗಕೂಡದು.

ಸೀಸರ್ – ಸೀಸರನು ಹೊರಗೆಯೇ ಹೋಗುವನು; ನನ್ನನ್ನು
ಗದರಿಸುವವೆಲ್ಲ ನನ್ನ ಬೆನ್ನನ್ನು ನೋಡಿರುವವು,
ಆದರೆ ಅವು ಸೀಸರನ ಮುಖವನ್ನು ನೋಡಿದ
ಕೂಡಲೆ ಅದೃಶ್ಯವಾಗುವುವು.

ಕ್ಯಾಲ್ಫೂರ್ನಿಯಾ – ಓಹೋ ಸೀಸರ್, ನಾನು ಜಾತಕಾರಿಕಳಲ್ಲ,
ಆದರೂ ಈಗ ಅವು ನನಗೆ ಭಯವನ್ನೀವೆ;
ನಾವು ಕೇಳಿದ ಮತ್ತು ನೋಡಿದ ವಿಷಯಗಳನ್ನು
ಮೀರಿ ಏನೋ ಇದೆಯೆಂಬುದನ್ನು, ಅನಿಷ್ಟ ದೃ
ಶ್ಯವಾದುವುಗಳನ್ನು ಕಾವಲಿನವನು ಒಂದೊಂದು
ಎಂಬಂತೆ ಹೇಳುತ್ತಿದ್ದಾನೆ. ಹೆಣ್ಣು ಸಿಂಹವು
ಒಂದು ಬೀದಿಗಳಲ್ಲಿ ಮರಿಹಾಕಿತು; ಸಮಾ
ಧಿಯಲ್ಲಿ ಹೂಳಲ್ಪಟ್ಟವರು ಬಾಯಿತೆರೆಯಲು ನ

ತ್ರವರೆ ಎದ್ದರು; ಅಗ್ನಿಸಮಾನರೆನಿಸಿದ ವೀ
ರ ಯೋಧರು ಮೇಘಲೋಕದಲಿ ಕಾದುತಿರುವರು;
ಸೇನಾಬಲ ಸೌಕಾದಳವು ಕೈಗೊಂಡ ನಿಯತ
ಮಾನಸನಾರದ ಸಮರ ಪರಿಣಾಮವಾಗಿ ರೋಮನ್
ರಾಜಧಾನಿಯಲಿ ರಕ್ತದ ಹನಿಮಳೆ ಸುರಿಯುತ್ತ;
ಯುದ್ಧಭೇರಿಯ ನಾದ ಗಾಳಿಗೆಡಹಲಾ ದನಿ
ಗೆ ಕುದುರೆಗಳು ಹೇಷಾರವ ಮೊಳಗಿದುವು; ಸಾಯು
ತಿಹ ಜನವು ಹೂಂಕಾರಗೈದಿರಲು; ಪ್ರೇತಗಳು
ಬೀದಿಗಳಲಿ ಚೀತ್ಕಾರವೆಬ್ಬಿಸಿದವು; ಹೋ, ಸೀ
ಸರ್, ಇಂಥ ಘಟನೆಗಳು ಯಾವಾಗಲೂ ಕಾಣ
ದಂತಹದಲ್ಲ; ನಾನು ಅವುಗಳಿಗೆ ಹೆದರುತ್ತಿದ್ದೇನೆ.

ಸೀಸರ್ — ಸರ್ವಶಕ್ತನಾದ ದೇವರು ಹೀಗೆ
ಆಗಬೇಕೆಂದು ವಿಧಿಸಿದ್ದರೆ ಅದನ್ನು ತಡೆ
ಯಲಾಗುವುದೆ? ಹೇಗೂ ಸೀಸರನು ಹೋಗಿಯೇ
ಹೋಗುವನು; ಈ ಭವಿಷ್ಯ ನುಡಿಗಳು ಇಡೀ ಲೋ
ಕಕ್ಕೆ ಹೇಗೆ ಸಾಮಾನ್ಯವೋ ಹಾಗೆಯೇ ಸೀಸರನಿಗೂ!

ಕ್ಯಾಲ್ಪೂರ್ನಿಯಾ — ಭಿಕ್ಷುಕರು ಸಾಯುವಾಗ
ಧೂಮಕೇತುಗಳು ಕಾಣಿಸವು; ರಾಜರು ಸಾಯು
ವಾಗ ವ್ಯೋಮಾಂಗಣವೆ ಪ್ರಜ್ವಲಿಸುತಿರುವುದು!

ಸೀಸರ್ — ಹೇಡಿಗಳು ತಾವು ಸಾಯುವುದಕಿಂತ ಮುಂಚೆಯೆ
ಹಲವು ಸಲ ಸಾಯುವರು; ಧೈರ್ಯಶಾಲಿಯು ಒಮ್ಮೆ
ಮಾತ್ರ ಸಾವನ್ನು ಅನುಭವಿಸುವನು; ಸಾವು ಖಂ
ಡಿತವಾಗಿ ಮತ್ತು ಅದು ಅವಶ್ಯಕವಾಗಿ ಬಂ
ದೇ ಬರುವುದು ಎಂದು ತಿಳಿದೂ ಸಹ ಜನ ಸಾವಿಗೆ
ಹೆದರುವುದು ಎಲ್ಲ ಆಶ್ಚರ್ಯಕರ ವಿಷಯಗಳ್ಲು
ಅಂಡಿಗೂ ಒಂದೆಂದು ನನಗೆ ಅನ್ನಿಸುತ್ತದೆ!

(ಸೇವಕನು ಪುನಃ ಬರುವನು)

ಭವಿಷ್ಯವಾದಿಗಳು ಏನೆಂದರು?

ಸೇವಕ — ನೀವು ಇಂದು ಹೊರಗೆಲ್ಲೂ ಹೋಗುವುದನ್ನು ಅವ
ರೊಪ್ಪುವುದೆ ಇಲ್ಲ; ಬಲಿಕೊಡಲಿದ್ದ ಪ್ರಾಣಿಯ ಕ
ರುಳನ್ನು ಹೊರತೆಗೆದಾಗ ಅದರ ಒಳಗೆ ಅವರು
ಎದೆಗುಂಡಿಗೆಯನ್ನೆ ಕಾಣಲಿಲ್ಲ.

ಸೀಸರ್ — ಹೇಡಿತನಕೆ ನಾಚಿಯೆ ದೇವತೆಗಳಿಂತೆಸಗು
ವರು; ಸೀಸರನು ಹೆದರಿ ಮನೆಯಲ್ಲಿ ಇಂದು ಕುಳಿ
ತರೆ ಸೀಸರನೂ ಎದೆಗುಂಡಿಗೆಯೆ ಇಲ್ಲದೊಂ
ದು ಪ್ರಾಣಿಯೆನಬೇಕು; ಇಲ್ಲ, ಸೀಸರ್ ಹೋಗ

ದೆಯತ್ತ ಇರುವನು; ಆಪಾಯಕ್ಕೆ ತನಗಿಂತ ಸೀಸರ
ನೇ ಹೆಚ್ಚು ಆಪಾಯಕಾರಕನೆಂದು ಗೊತ್ತಿದೆ; ಎ
ರಡು ಸಿಂಹಗಳು ನಾವು; ಒಂದೇ ದಿನ ಹುಟ್ಟಿದೆ
ವು; ಅವರಲ್ಲಿ ನಾನು ಹಿರಿಯವನು ಮತ್ತು ತುಂಬಾ
ಭಯಾನಕನು; ಸೀಸರನು ಹೋಗಿಯೇ ಹೋಗುವನು!

ಕ್ಯಾಲ್ಫೋರ್ನಿಯಾ — ಆಹಾ, ನನ್ನ ಪ್ರಿಯನೇ,
ನಿನ್ನ ಆತ್ಮವಿಶ್ವಾಸದ ಒಳಗೆ ನಿನ್ನ ಬು
ದ್ಧಿಯೂ ಮುಚ್ಚಿಹೋಗಿರುವುದು; ಈ ದಿನ ಹೊರಹೋಗು
ವುದು ಬೇಡ; ನನ್ನ ಭಯವೇ ನಿನ್ನನ್ನು ಮನೆಯ
ಲ್ಲಿರಿಸಿತಲ್ಲದೆ ನಿನ್ನದಲ್ಲವೆಂದು ಹೇಳಿಕೋ!
ನಾವು ಮಾರ್ಕ ಆಂಟೋನಿಯನನ್ನು ಶಾಸನ ಸಭಾಭವ
ನಕ್ಕೆ ಕಳುಹಿಸುವ; ನಿನಗಿಂದು ಮೈಗೆ ಸರಿಯಿ
ಲ್ಲವೆಂದು ಅವನು ಹೇಳಲಿ; ಇದನ್ನು ನೀನು ಯೋ
ಚಿಸು ಎಂದು ಮೊಣಕಾಲನೂರಿ ಕೇಳಿಕೊಳ್ಳುವೆ!

ಸೀಸರ್ — ಆಹಾ, ಮಾರ್ಕ ಆಂಟೋನಿಯೋ
ನನಗೆ ಸುಖವಿಲ್ಲವೆಂದು ಹೇಳುವನು; ನಾನಾ
ದರೂ ನಿನ್ನ ತೃಪ್ತಿಗೆ ಮನೆಯಲ್ಲಿಯೇ ಇರಬೇಕು!

(ಡೆಸಿಯಸನ ಪ್ರವೇಶ)

ಇಲ್ಲಿ ಡೆಸಿಯಸ್ ಬ್ರೂಟಸನು ಬರುವನು. ಅವನು ಅ
ವರಿಗೆ ಹಾಗೆನ್ನಲಿ.

ಡೆಸಿಯಸ್ — ಸೀಸರ್, ಜಯವಾಗಲಿ; ನಮಸ್ತೆ ಸೀಸರನೇ,
ನಾನು ಈಗ ನಿನ್ನನ್ನು ವಿಧಾನ ಭವನಕ್ಕೆ
ಕರೆದೊಯ್ಯಲು ಬಂದಿರುವೆನು.

ಸೀಸರ್ — ನೀನು ಈ ಸಂತೋಷದ ಸಮಯದಲ್ಲಿ ಶಾಸನ
ಸಭಾಜನರಿಗೆ ನನ್ನ ಶುಭಾಶಯವನ್ನು ಕೊಂಡೊ
ಯ್ಯಲು ಬಂದೆ; ನನಗೆ ಇಂದು ಬರಲಾಗುವುದಿಲ್ಲ
ವೆಂದು ಅವರಿಗೆ ಹೇಳು; ಬರಲಿಕ್ಕೆ ಸಾಧ್ಯವಿ
ಲ್ಲವೆಂಬುದು ಅದು ಸುಳ್ಳಾಗುತ್ತದೆ; ಹೇ, ನಾನು
ಸುಳ್ಳುಗಾರನೆಂದೆನಿಸಲಾರೆನು; ನಾನು ಈ
ದಿನ ಬರುವುದಿಲ್ಲ; ಅವರಿಗೆ ಹಾಗೆಯೇ ಹೇಳು,
ಡೆಸಿಯಸ್!

ಡೆಸಿಯಸ್ — ಆವನಿಗೆ ಸುಖವಿಲ್ಲ ಎಂದು ಹೇಳುತ್ತೆ?

ಸೀಸರ್ — ಆಹಾ, ಸೀಸರನು ಒಂದು ಸುಳ್ಳನ್ನು ಕಳುಹಿಸು
ವನೇ? ತಲೆನರೆತ ಹಳಬರಿಗೆ ನಿಜವನ್ನು ಹೇಳಲು
ಹೆದರಿ ನನ್ನ ತೋಳನ್ನು ಅಷ್ಟೊಂದು ದೂರಕ್ಕೆ
ಚಾಚಿ ನಾನು ದಿಗ್ವಿಜಯವನ್ನು ಕೈಕೊಂಡೆನೇ? ಹೋ,

ಡೆಸಿಯಸ್, ಇದೀಗ ಹೋಗಿ ಅವರಿಗೆ ಸೀಸರನು ಬರುವುದಿಲ್ಲವೆಂದು ಹೇಳು!

ಡೆಸಿಯಸ್ — ಬಹು ಪ್ರಬಲ ವೀರ ಸೀಸರನೆ, ನನಗೊಂದೆರಡು ಕಾರಣಗಳನ್ನು ತಿಳಿಸದಿದ್ದರೆ ನಾನು ನಗೆಗೀಡಾಗುವೆನಾದುದರಿಂದ ಏಕೆಂದೆನ್ನು!

ಸೀಸರ್ — ಕಾರಣವು ನನ್ನ ನಿರ್ಧಾರ! ನಾನು ಬರುವುದು ಇಲ್ಲ! ಶಾಸಕರನು ತೃಪ್ತಿಪಡಿಸಲು ಅದು ಸಾಕು; ಆದರೆ ನಿನಗೆ ಸ್ವಂತವಾಗಿ, ಏಕೆಂದರೆ ನಾನು ನಿನ್ನನ್ನು ಅಭಿಮಾನಿಸುವುದರಿಂದ, ಹೇಳುವೆನು. ನನ್ನೊಡನೆ ನನ್ನ ಮನೆಯಲ್ಲಿರುವ ನನ್ನ ಸತಿಯು, ಕ್ಯಾಲ್ಫೂರ್ನಿಯ, ಕಳೆದ ರಾತ್ರಿ ಸ್ವಪ್ನವನು ಕಂಡಳು; ನನ್ನ ಪ್ರತಿಮೆಯಿಂದ ಒಂದು ಕಾರಂಜಿಯಂತೆ ಒಂದ್ನೂರು ನಳಿಗೆಗಳು ಮೂಲಕ ಕೆನ್ನೆತ್ತರು ಧಾರೆಯು ಹರಿಯುವುದನು ಕಂಡಳು; ಹಲವು ಚಲುವ ರೋಮನ್ನರು ಅದರ ಬಳಿಗೆ ನಗುನಗುತ್ತಾ ಹೋಗಿ ತಮ್ಮ ಕೈಗಳನು ತೊಳೆದರು; ಅದು ಮುಂಬ ಆಘಾತವನು ತರುವ ಅಪಶಕುನ ಮತ್ತು ಮುಂದಾಗುವ ಅಪಾಯಕ್ಕೆ ಸೂಚಕವು ಎಂದೂ ಅದರಿಂದೀಗ ನಾನು ಮನೆಯಲ್ಲಿ ಇರಬೇಕೆಂದೂ ಅವಳು ಮೊಣಕಾಲೂರಿ ಬೇಡಿಕೊಂಡಳು.

ಡೆಸಿಯಸ್ — ಈ ಸ್ವಪ್ನವನ್ನು ಪೂರ್ತಿ ತಪ್ಪಾಗಿಯೇ ತಿಳಿದುಕೊಳ್ಳಲಾಗಿದೆ; ಅದು ನ್ಯಾಯವಾದ ಮತ್ತು ಶುಭಸೂಚಕವಾದ ಕಾಲ್ಪನಿಕ ನೋಟವಾಗಿದೆ; ನಿನ್ನ ಪ್ರತಿಮೆಯು ಹಲವು ನಳಿಗೆಗಳ ಮುಖಾಂತರ ರಕ್ತವನು ಉಕ್ಕಿಸಿರೆ ಅದು ರೋಮನರು ನಗುತ್ತಾ ತಮ್ಮ ಕೈಗಳನು ತೊಳೆಯುವುದೆಂದರೆ ಅದು ವೀರ ರೋಮನರು ನೆತ್ತರನು ಹೀರಿ ಬಲಶಾಲಿಗಳೆನಿಸುವರೆಂದೂ ಮಹಾಪುರುಷರು ಆ ರಕ್ತ ಕಲೆ ಅಥವಾ ಅವಶೇಷಗಳನ್ನು ತಾವು ಒಂದು ಸ್ಮಾರಕದಂತಿರಿಸುವರೆಂದೂ ಕ್ಯಾಲ್ಫೂರ್ನಿಯಾಳ ಸ್ವಪ್ನದಿಂದ ತಿಳಿಯುವುದು!

ಸೀಸರ್ — ಈ ರೀತಿಯಾಗಿ ನೀನು ಅದನು ಚೆನ್ನಾಗಿ ವ್ಯಕ್ತಗೊಳಿಸಿದೆ!

ಡೆಸಿಯಸ್ — ನಾನು ಅಂತೆಯೆ ಗೈದೆನು. ಆ ವಿಷಯ ನಾನೀಗ ಹೇಳಿದೆನೊ ನೀನದನು ಆಲಿಸಿದೆ; ಈಗ ಒಂ

ದು ವಿಷಯವು ತಿಳಿ; ಪ್ರಬಲ ವೀರ ಸೀಸ್ಸರನಿಗಿಂ
ದು ಕಿರೀಟಧಾರಣೆ ಮಾಡಿಸಲು ಶಾಸನ ಸಭಾ
ಸದಸ್ಯರು ನಿಶ್ಚಯಿಸಿರುವರು; ಹಾಗಿರುವಾಗ
ನೀನು ಬರಲಾರೆಯೆಂದರೆ ಅವರು ತಪ್ಪು ತಿಳಿ
ದುಕೊಳ್ಳಬಹುದು. ಅಷ್ಟೇ ಇಲ್ಲ, ಯಾರಾದರೊ
ಬ್ಬನು ನಿಮ್ಮ ಶಾಸನ ಸಭೆಯು ಸೀಸ್ಸರನ ಹೆಂಡ
ತಿಯು ನಿಮ್ಮ ಒಳ್ಳೆಯ ಕನಸನ್ನು ಕಾಣುವ
ಲ್ಲಿಯ ವರೆಗೆ ಬರಖಾಸ್ತು ಮಾಡಲಾಗಿದೆಯೆಂದು
ಹಾಸ್ಯರೂಪದಲಿ ಹೇಳಲವಕಾಶವನಿತ್ತ
ಹಾಗೆ ಆಗುವುದು. ಸೀಸ್ಸರನು ಅವಿತುಕೊಂಡರೆ
ಅವರು "ಎಲೊ, ಸೀಸ್ಸರನು ಹೆದರಿಕೊಂಡಿದ್ದಾನೆ",
ಎಂದು ಪಿಸುಮಾತು ಆಡದಿರುವರೆ? ಸೀಸ್ಸರನೆ,
ಕ್ಷಮಿಸು, ನನಗೆ ನಿನ್ನ ಮೇಲಿರುವ ಪ್ರೀತಿ ಅಭಿ
ಮಾನಗಳೆ ನನ್ನನ್ನು ಇಷ್ಟು ಹೇಳಿಸಲು ಕಾ
ರಣವಾಯಿತು.

ಸೀಸ್ಸರ್— ಕ್ಯಾಲ್ಫೂರ್ನಿಯಾ, ನಿನ್ನ ಕಳವಳವು ಅದೆಷ್ಟು
ಬುದ್ಧಿಹೀನವಾದುದು! ನಾನು ಅದನ್ನು ನಂಬಿ
ದೆನಲ್ಲಾ ಎಂದು ನನಗೀಗ ನಾಚಿಕೆಯಾಗಿ
ದೆ; ನನ್ನ ನಿಲುವಂಗಿಯನ್ನು ಕೊಡು, ನಾನ್ ಹೋಗುವೆನು!

(ಪಬ್ಲಿಯಸ್, ಬ್ರೂಟಸ್, ಲಿಗಾರಿಯಸ್,
ಮೆಟೆಲ್ಲಸ್, ಕ್ಯಾಸ್ಕಾ, ಟ್ರೆಬೋನಿಯಸ್ ಮತ್ತು
ಸಿನ್ನಾ — ಇವರ ಪ್ರವೇಶ.)

ನೋಡು, ನನ್ನನ್ನು ಕರೆದೊಯ್ಯಲು ಪಬ್ಲಿಯಸನು
ಬಂದಿರುವನು.

ಪಬ್ಲಿಯಸ್— ಸುಪ್ರಭಾತಂ, ಸೀಸ್ಸರ್,

ಸೀಸ್ಸರ್— ಪಬ್ಲಿಯಸ್, ನಿನಗೆ ಸುಸ್ವಾಗತ!
ಬ್ರೂಟಸನೆ, ಏನು? ನೀನು ಸಹ ಬೆಳಿಗ್ಗೆನೇ
ಎಚ್ಚತ್ತಿರುವೆ, ಸುಪ್ರಭಾತವಿರಲಿ! ಕ್ಯಾಸ್ಕಾ,
ನಿನಗೆ, ಹೋ! ಕೈಯಸ್ ಲಿಗಾರಿಯಸನೆ, ನಿನ್ನದೇ
ಹವನು ಈಷ್ಟು ತೆಳ್ಳನೆ ಆಗುವಂತೆ ಮಾಡಿದ
ಆ ಚಳಿಜ್ವರದಷ್ಟು ದೊಡ್ಡ ವೈರಿಯಂತೆ
ನಾ ಇದ್ದುದಿಲ್ಲ ಕೇ ಸೀಸ್ಸರ್; ಇದೀಗ ಸಮಯ
ಎಷ್ಟಾಯಿತು?

ಬ್ರೂಟಸ್— ಸೀಸ್ಸರನೆ, ಈಗ ತಾನೆ ಎಂಟು ಬಾರಿಸಿತು.

ಸೀಸ್ಸರ್— ನಿಮ್ಮ ಪ್ರಯಾಸ ಮತ್ತು ಆದರಕ್ಕೆ ನಾನು ಋ
ಣಿಯಾಗಿದ್ದೇನೆ!

(ಆಂತೋನಿಯ ಪ್ರವೇಶ)

ಹಾ, ನೋಡಿರಿ, ಆಂತೋನಿ, ಆದಾಗಿದ್ದರೂ ರಾತ್ರಿಯೆಲ್ಲಾ ಆನಂದಭರಿತನೆ; ಸುಪ್ರಭಾತ ನಿನಗೆ, ಆಂತೋನಿ!

ಆಂತೋನಿ — ಸನ್ಮಾನ್ಯ ಸೀಸರನಿಗೂ ಅಂತೆಯೆ ಆಗಲಿ.

ಸೀಸರ್ — ತಮ್ಮೊಳಗೆಲ್ಲ ಸಿದ್ಧರಾಗುವಂತೆ ಅವರಿಗೆ ಹೇಳು; ಹೀಗೆ ಕಾಯುವಂತಾಗಿಸಿದಕ್ಕೆ ನನ್ನನ್ನೆ ಆಕ್ಷೇಪಿಸಬೇಕಿದೆ; ಸಿನ್ನಾ, ಹೋ, ಮೆಟೆಲ್ಲಸ್, ಏನು? ಟ್ರೆಬೊನ್ಯಸನೆ, ಸುಖವೇ? ನಿನ್ನೊಡನೆ ಒಂದು ತಾಸಿನವರೆಗೂ ಮಾತಾಡುವ ಹೆಚ್ಚಿನ ವಿಷಯ ನನ್ನಲ್ಲಿದೆ; ಇಂದು ನನ್ನನ್ನು ಕಾಣಲು ನೆನಪಿಡು. ನನಗೂ ನಿನ್ನ ನೆನಪಾಗುವಂತೆ ನೀನೆನ್ನ ಬಳಿಯಲ್ಲೇ ಇರು!

ಟ್ರೆಬೊನ್ಯಸ್ — ಹೌದು ಸೀಸರನೆ, ಅಂತೆಯೆ ಮಾಡುವೆನು; ನಿನ್ನ ಸಮೀಪವೆ ಇರುವೆನು. (ಸ್ವಗತ)
ನಾನು ದೂರವಿದ್ದರೆ ಹಿತವೆಂದು ನಿನ್ನ ಆಪ್ತಮಿತ್ರರು ಆಶಿಸುತ್ತಿರಬಹುದು.

ಸೀಸರ್ — ಮಿತ್ರರೆ, ಒಳಹೋಗಿರಿ, ನನ್ನೊಡನೆ ಒಂದಿಷ್ಟು ದ್ರಾಕ್ಷಾರಸವನು ಸೇವಿಸಿರಿ; ಆ ಮೇಲೆ ನಾವೆಲ್ಲ ಸಂಗಾತಿಗಳ ರೀತಿಯಲಿ ಇಲ್ಲಿಂದ ಒಡಗೂಡಿ ನೆಟ್ಟನೆ ಹೋಗುವ!

ಬ್ರೂಟಸ್ — ಸೀಸರನೆ, ಪ್ರತಿಯೊಂದು ಸದೃಶವೆನಿಸಿಯು ಹಾಗೆಯೆ ಒಂದೇ ರೀತಿಯಲ್ಲ; ಬ್ರೂಟಸನ ಎದೆಯೆಂತು ಇದನ್ನು ಯೋಚಿಸಲು ಕಾತರಿಸುತ್ತಲಿದೆ.
(ಹೋಗುವರು)

ದೃಶ್ಯ 3. — ರೋಮ್. ವಿಧಾನಸಭಾ ಭವನದ ಬಳಿ ಒಂದು ಬೀದಿ.
(ಆರ್ಟೆಮಿಡೋರಸನು ಪತ್ರಿಕೆಯನ್ನು ಓದುತ್ತಾ ಪ್ರವೇಶಿಸುವನು.)

ಆರ್ಟೆಮಿಡೋರಸ್ — "ಹೇ ಸೀಸರ್, ಬ್ರೂಟಸನ ಬಗ್ಗೆ ಎಚ್ಚರಿಕೆ; ಕ್ಯಾಸ್ಯಸನ ಕಡೆ ಗಮನಕೊಡು; ಕ್ಯಾಸ್ಕನ ಬಳಿ ಬರಬೇಡ; ಸಿನ್ನನಲ್ಲಿ ನಿನ್ನ ದೃಷ್ಟಿಯಿರಲಿ; ಟ್ರೆಬೊನ್ಯಸನನು ನಂಬದಿರು; ಮೆಟೆಲಸ್ ಸಿಂಬರನನು ಚೆನ್ನಾಗಿ ಗುರುತಿಸಿಕೊ; ಡೆಸ್ಯಸ್ ಬ್ರೂಟಸನಿಗೆ ನಿನ್ನಲ್ಲೇನೂ ಪ್ರೀತಿಯಿಲ್ಲ; ಕೈಯಸ್ ಲಿಗಾರ್ಯಸ

ನಿಗೆ ನೀನು ಅನ್ಯಾಯವನ್ನೆಸಗಿರುವೆ. ಇವರು ಎಲ್ಲರೂ ಒಂದೇ ಮನಸ್ಸಿನಿಂದ ಕೂಡಿ ರುವರು; ಅದು ಸೀಸರನಿಗೆ ಬದ್ಧ ವಿರೋಧವಾಗಿದೆ. ನೀನು ಚಿರಂಜೀವಿ ಅಲ್ಲ, ಸರಿ; ಆದರೆ ನಿನ್ನ ರಕ್ಷಕ ವರ್ಗ ಪಿತೂರಿಗಾರರ ತಂಡವಾಗಿ ಮಾರ್ಪಡುತ್ತಿರುವುದು; ದೇವಾನು ದೇವತೆಗಳು ನಿನ್ನನ್ನು ರಕ್ಷಿಸಲಿ; — ನಿನ್ನ ಹಿತೈಷಿ —
— ಆರ್ಟಿಮಿಡೋರಸ್."

ಸೀಸರನು ಈ ದಾರಿಗಾಗಿ ಬರುವಾಗ ನಾನು ಇಲ್ಲಿಯೇ ನಿಂತಿರುವೆನು; ಒಬ್ಬ ಅರ್ಜಿದಾರನ ಹಾಗೆ ನಾನು ಇದನ್ನವನಿಗೆ ಕೊಡುವೆನು. ಸ್ಪರ್ಧಾ ಪ್ರತಿಸ್ಪರ್ಧೆಯ ಹಲ್ಲುಗಳಿಗೆ ಸಿಗದಂತೆ ಸಭ್ಯತೆಯು ಇರಲಾರದು; ಸರಿ, ನನ್ನ ಹೃದಯವು ತಳಮಳಕ್ಕೆ ಈಡಾಗಿರುವುದು; ಎಲೈ ಸೀಸರನೆ, ನೀನಿದನ್ನು ಓದಿದರೆ ಜೀವಿಸುವೆ; ಹಾಗಲ್ಲದಿದ್ದರೆ ವಿಧಿಯು ದ್ರೋಹಿಗಳೊಡನೆಯೇ ಸೇರಿ ತನ್ನ ಸಂಚುವಾಟವನ್ನಾಡುತ್ತದೆ!

(ಹೋಗುವನು)

೪ನೇ ದೃಶ್ಯ — ರೋಮ್.

(ಅದೇ ಬೀದಿಯ ಇನ್ನೊಂದೆಡೆ — ಬ್ರೂಟಸ್‌ನ ಮನೆಯ ಬಳಿ)

ಪೋರ್ಷ್ಯ ಮತ್ತು ಲೂಸಿಯಸ್ — ಪ್ರವೇಶ.

ಪೋರ್ಷ್ಯ — ಎಲೋ ಹುಡುಗಾ, ವಿಧಾನಸಭಾ ಭವನಕ್ಕೆ ಓಡು. ನನಗೆ ಮರುತ್ತರಿಸುತ್ತ ನಿಲ್ಲಬೇಡ; ಬೇಗನೆ ಹೋಗು, ಏಕೆ ನಿಂತಿರುವೆ?

ಲೂಸಿಯಸ್ — ಅಮ್ಮಾ, ತಮ್ಮ ನಿರೂಪವೇನೆಂದು ತಿಳಿಯಲು!

ಪೋರ್ಷ್ಯ — ನೀನು ಅಲ್ಲಿ ಏನೆಸಗಬೇಕೆಂದು ನಾನಿನ್ನುವುದಕ್ಕಿಂತ ಮುಂಚಿತವೇ ನಾನು ನಿನ್ನನ್ನಲ್ಲಿ ಕಳಿಸಿ: ಇಲ್ಲಿಯೇ ಹಿಂತಿರುಗಿ ಓಡಿಸುತಿದ್ದೆನು. ಆಹಾ, ದೃಢ ಮನಸ್ಸೇ, ನನ್ನಲ್ಲಿ ಭದ್ರವಾಗಿ ಇರು; ನನ್ನ ನಾಲಗೆ ಮತ್ತು ಹೃದಯದ ಮಧ್ಯೆ ಬಹುದೊಡ್ಡ ಬೆಟ್ಟವನ್ನು ಇರಿಸು; ನನಗೆ ಗಂಡಿನ ಮನವಿದೆ, ಶಕ್ತಿ ಮಾತ್ರ ಹೆಣ್ಣಿನದು; ಹೆಂಗಸರಿಗೆ ರಹಸ್ಯವನಿಟ್ಟುಕೊಳ್ಳಲು ಅದೆಷ್ಟು ಪ್ರಯಾಸವಿದೆ? ಆಹಾ, ನೀನು ಇನ್ನೂ ಇಲ್ಲಿಯೇ ಇದ್ದೀಯೇನೋ!

ಲೂಸಿಯಸ್ — ಅಮ್ಮಾ, ಅದೇನನ್ನು ನಾನು ಮಾಡಬೇಕು? ಶಾಸನ ಸಭಾಭವನದತ್ತ ಓಡುವುದು ಮಾತ್ರವಲ್ಲದೆ ಬೇರೇನು? ಅನಂತರ ಇಲ್ಲಿಗೆ ಹಿಂತಿರುಗುವುದಲ್ಲದೆ, ಇನ್ನೇನು?

ಪೋರ್ಷಿಯಾ — ಹೌದು, ನಿನ್ನ ಒಡೆಯ ಮನೋ ವ್ಯಾಕುಲತೆಗೆ ಒಳಗಾಗಿ ಅತ್ತ ಹೋದನು. ಎಲೈ ಹುಡುಗಾ, ನೀನು ಹೋಗಿ ಅವನು ಎಂತಿರುವನು, ಸೀಸರನು ಏನು ಮಾಡುತ್ತಿರುವನು, ಜನರು ಅವನಿಗೇನೇನು ಮನವಿಯನ್ನು ಒಪ್ಪಿಸುವರೆಂಬುದನೆಲ್ಲ ಚೆನ್ನಾಗಿ ಗಮನಿಸಿರು; ಆಹಾ, ನೋಡು ಏನದು ಅಲ್ಲಿ ಗದ್ದಲ? ಏನು? ಓಡು!

ಲೂಸಿಯಸ್ — ಅಮ್ಮಾ, ನನಗೇನೂ ಕೇಳಿಸದು.

ಪೋರ್ಷಿಯಾ — ಚೆನ್ನಾಗಿ ಆಲಿಸು, ನಾನು ಕೇಳಿಸಿಕೊಳ್ಳುತ್ತಿದ್ದೇನೆ; ಅದೇನೋ ಒಂದು ಕಾದಾಟದಂತೆ ವಿಧಾನಸಭಾ ಭವನದಿಂದ, ಬೀಸುವ ಗಾಳಿಯು ಶಬ್ದಗಳ ವಾರ್ತೆಯನ್ನು ಇತ್ತ ತಂದುದನಾಲಿಸಿದೆನು.

(ಆರ್ಟೆಮಿಡೋರಸನ ಪ್ರವೇಶ)

ಲೂಸಿಯಸ್ — ಖಚಿತವಾಗಿ, ಅಮ್ಮಾ, ನನಗೇನೂ ಕೇಳಿಸದು.

ಪೋರ್ಷಿಯಾ — (ಆರ್ಟೆಮಿಡೋರಸನಿಗೆ)
ಎಲೈ ಇತ್ತ ಬಾ, ನೀನು ಯಾವ ಕಡೆ ಹೋಗಿದ್ದೆ?

ಆರ್ಟೆಮಿಡೋರಸ್ — ತಾಯಿ, ನನ್ನದೇ ಮನೆ ಕಡೆ;

ಪೋರ್ಷಿಯಾ — ಈಗ ಎಷ್ಟು ಗಂಟೆ?

ಆರ್ಟೆಮಿಡೋರಸ್ — ಸುಮಾರು ಒಂಬತ್ತು ಗಂಟೆ ಸಮಯ, ಅಮ್ಮಾ.

ಪೋರ್ಷಿಯಾ — ಸೀಸರನು ವಿಧಾನಸಭಾ ಭವನದತ್ತ ಹೋದನೆ?

ಆರ್ಟೆಮಿಡೋರಸ್ — ಇನ್ನೂ ಇಲ್ಲ, ತಾಯಿ, ನಾನು ಅವನು ರಾಜಭವನಕ್ಕೆ ಹೋಗುವಾಗ ಅವನನ್ನು ನೋಡಲು ಅಲ್ಲಿಯೇ ಹಿಂದೆ ನಿಂತಿರುವೆ.

ಪೋರ್ಷಿಯಾ — ಸೀಸರನಿಗೆ ಒಪ್ಪಿಸಲು ನಿನ್ನಲ್ಲಿ ಅರ್ಜಿಯು ಇದೆ, ಅಲ್ಲವೆ?

ಆರ್ಟೆಮಿಡೋರಸ್ — ಇದೆ ತಾಯಿ, ಅದು ಅವನಿಗೆ ಸಂತೋಷವನ್ನುಂಟು ಮಾಡುವುದು; ನಾನು ಅನ್ನುವುದನ್ನು ಸೀಸರನು ಕೇಳುವಂತೆ ಅವನಿಗೆ ಹೇಳುತ್ತ, ಅವನು ಅವನ ಗೆಳೆತನವನ್ನೆ ಮಾಡಿಕೊಳ್ಳಲು ಅವನನ್ನು ವಿನಂತಿಸಿಕೊಳ್ಳುವೆನು.

ಪೋರ್ಷಿಯಾ — ಏಕೆ? ಅವನಿಗೆ ಅಪಾಯವೇನಾದರೂ ನಿಂ

ಭವಿಸಬಹುದೆಂದು ನೀನು ತಿಳಿದಿರುವೆಯೆ ?

ಆರ್ಟೆಮಿಡೋರಸ್— ಅವನಿಗೇನಾದರೂ — ಆದೀತು ಎಂಬ ಭಯವಷ್ಟೆ ಅಲ್ಲದೆ ನನಗೆ ತಿಳಿದಂತೆ ಹಾಗೇನೂ ಇಲ್ಲ; ನಿನಗೆ ಶುಭವಾಗಲಿ! ಇಲ್ಲಿ ಬೀದಿ ಇಕ್ಕಟ್ಟಾಗಿದೆ; ಸೀಸ್ಸರನ ಹಿಮ್ಮಡಿಯೆ ಅವನನ್ನು ಹಿಂಬಾಲಿಸುವ ಶಾಸನ ಸಭಾ ಸದಸ್ಯರು ಸೇನಾಪತಿಗಳು ಸಾಮಾನ್ಯ ಅರ್ಜಿದಾರರು ಇರಲವರೆಡೆಯಲಿ ದುರ್ಬಲನಾದ ನಾನು ಹುದುಗಿ ಅಳ್ಳಿಯೆ ಸಾಯಬಹುದು; ಬರಿದಾದ ಜಾಗದಲೊಂದೆಡೆಯೆ ನಿಂತಿರುವೆನು; ವಿಖ್ಯಾತ ಸೀಸ್ಸರನು ಅಂತೆಯೆ ದಾಟುವಾಗ ಅವನೊಡನೆ ಮಾತಾಡುವೆನು! — (ಹೋಗುವನು.)

ಪೋರ್ಷ್ಯ— ನಾನಿನ್ನು ಒಳಗೆ ಹೋಗಬೇಕು! ಅಹಾ, ಹೆಂಗಸಿನ ಹೃದಯವದೆಷ್ಟು ದುರ್ಬಲ; ಓ ಬ್ರೂಟಸನೆ, ನಿನ್ನ ಮಹತ್ಕಾರ್ಯದಲ್ಲಿ ದೇವರು ನಿನಗೆ ಸಹಕರಿಸಲಿ; ಈ ಹುಡುಗನಾನಂದುದನು ನಿಜಕ್ಕೂ ಕೇಳಿದನು. ಸೀಸ್ಸರನು ಒಪ್ಪದಿರುವ ಒಂದು ಮನವಿಯು ಬ್ರೂಟಸನಲ್ಲಿದೆ; ಅಹಾ ನನ್ನ ತಲೆ ತಿರುಗುವುದು; ಲೂಸ್ಯಸನೆ, ಓಡು, ನನ್ನ ಪತಿಗೆ ನಾನು ಸಂತೋಷದಿಂದಿರುವೆನೆಂದೆನ್ನು! ಅದರನಂತರವೆ ನನ್ನ ಬಳಿಗೆ ಪುನಃ ಬಂದು ಅವನು ನಿನಗೇನು ಹೇಳುವನೊ ಅದನ್ನು ನನಗೆ ಹೇಳು!

(ತುಂಬಾ ದಣಿದವಳಂತೆ ಹೋಗುವಳು)

ಅಂಕ ೩

೧ನೇ ದೃಶ್ಯ - ರೋಮ್. ವಿಧಾನಭವನ.
ಸಭಾ ಸದಸ್ಯರು ಇರುತ್ತಿರುವರು

[ಜನಸಂದಣಿಯೊಳು ವಿಧಾನ ಸಭಾ ಭವನದತ್ತ ಹೋಗುತ್ತಿರುವುದು. ಅವರಿಗೆ ಅರ್ಟಿಮಿಡೋರಸನೂ ಭವಿಷ್ಯವಾದಿಯೂ ಇದ್ದಾರೆ; ಎತ್ತಿಲ್ಲ ಗಲಗಲ ನಾದ; ಸೀಸರ್, ಬ್ರೂಟಸ್, ಕ್ಯಾಸಿಯಸ್, ಕ್ಯಾಸ್ಕಾ, ಡೆಸಿಯಸ್, ಮೆಟೆಲ್ಲಸ್, ಟ್ರೆಬೋನಿಯಸ್, ಸಿನ್ನಾ, ಆಂಟೊನಿ, ಲೆಪಿಡಸ್, ಪೊಪಿಲ್ಯಸ್, ಪಬ್ಲಿಯಸ್, ಮತ್ತಿತರರು ಬರುತ್ತಾರೆ.]

ಸೀಸರ್ - ಮಾರ್ಚ್ ತಿಂಗಳ ಹದಿನೈದನೇ ದಿನ ಬಂದಿದೆ.

ಭವಿಷ್ಯವಾದಿ - ಆಹಾ ಸೀಸರ್, ಆದರೆ ಅದು ಇನ್ನೂ ಹೋಗಿಲ್ಲ.

ಅರ್ಟಿಮಿಡೋರಸ್ - ಜೈ ಸೀಸರ್, ಈ ನನ್ನ ಅರ್ಜಿಯನ್ನು ಓದು;

ಡೆಸಿಯಸ್ - ಟ್ರೆಬೋನಿಯಸನು ವಿನಂತಿಸಿಕೊಳ್ಳುತ್ತಿರುವ ಅವನ ಮನವಿಯನ್ನು ನಿನಗೆ ಎಡೆಯಿದ್ದಾಗ ಓದುವಿಯೆಂದು ಆವನು ದೈನ್ಯದಿಂದ ನಿರೀಕ್ಷಿಸುತ್ತಿರುವನು,

ಅರ್ಟಿಮಿಡೋರಸ್ - ಹೋ ಸೀಸರನೆ, ನನ್ನದನ್ನು ಮುಂದೆ ಓದು. ನನ್ನದು ಒಂದು ಮನವಿ. ಅದು ಹೆಚ್ಚಾಗಿ ಸೀಸರನಿಗೆನೆ ಸಂಬಂಧಿಸಿದ್ದು; ಎತ್ತು ಸೀಸರನೆ, ಇದನ್ನು ಓದು!

ಸೀಸರ್ - ನಮಗೆ ಸಂಬಂಧಿಸಿದ್ದೇನಿದೆಯೋ ಅವುಗಳನ್ನು ಕಡೆಗೆ ನೋಡಲಾಗುವುದು,

ಅರ್ಟಿಮಿಡೋರಸ್ - ವಿಳಂಬಿಸಬೇಡ, ಸೀಸರ್, ಕೂಡಲೆ ಇದನ್ನೋದು!

ಸೀಸರ್ - ಏನಿದು? ಈ ವ್ಯಕ್ತಿಗೇನು ಹುಚ್ಚೆ?

ಪಬ್ಲಿಯಸ್ - ಹೇ ಜನವೆ, ದಾರಿ ಬಿಡಿ, ದಾರಿ!

ಕ್ಯಾಸಿಯಸ್ - ಏನು? ಬೀದಿಯಲ್ಲಿ ನೀವು ಅರ್ಜಿಗಳನ್ನು ಸಲ್ಲಿಸುತ್ತಿರುವುದೇ? ವಿಧಾನ ಸಭಾ ಭವನಕ್ಕೆ ಬನ್ನಿರಿ!

(ಸೀಸರನು ಸಭಾಭವನಕ್ಕೆ ಪ್ರವೇಶಿಸುವನು. ಅವನೊಡನಿದ್ದ ಜನವು ಅವನನ್ನು ಹಿಂಬಾಲಿಸುವರು; ಸಭಾಸದಸ್ಯರೆಲ್ಲರೂ ಎದ್ದು ನಿಲ್ಲುವರು.)

ಪೊಪಿಲ್ಯಸ್ - ನಿಮ್ಮ ಸಾಹಸದ ಕಾರ್ಯವು ಏನಿದೆಯೋ ಅದು ಜಯಪ್ರದವಾಗಲಿ.

ಕ್ಯಾಸಿಯಸ್ - ಏನು ಸಾಹಸಕಾರ್ಯ, ಪೊಪಿಲ್ಯಸ್?

ಪೊಪಿಲ್ಯಸ್ - ನಿನಗೆ ಜಯವಾಗಲಿ. (ಸೀಸರನತ್ತ ಹೋಗುವನು.)

ಬ್ರೂಟಸ್ — ಪೊಪಿಲ್ಯಸ್ ಲೀನಾ ಏನು ಹೇಳಿದ?

ಕ್ಯಾಸ್ಯಸ್ — ನಮ್ಮ ಸಾಹಸಕಾರ್ಯಕ್ಕೆ ಜಯಪ್ರದವಾಗಲೆಂದು ಅವನೆಂದನು; ನಮ್ಮ ಉದ್ದೇಶವೇನೆಂದು ತಿಳಿದುಹೋಯಿತೋ ಎಂಬುದಾಗಿ ಹೆದರುತ್ತಿರುವೆನು.

ಬ್ರೂಟಸ್ — ನೋಡು, ಅವನು ಸೀಸರನನ್ನು ಹೇಗೆ ಸಮೀಪಿಸುತ್ತಿದ್ದಾನೆ. ಅವನನ್ನು ಗಮನಿಸಿರಿ.

ಕ್ಯಾಸ್ಯಸ್ — ಕ್ಯಾಸ್ಕ, ದಕ್ಷನಾಗಿ ಮುಂದೆ ಹಾಯು; ಏಕೆಂದರೆ ಅಂತಾಗದಂತೆ ತಡೆಯುವರೋ ಎಂದು ನಾವು ಹೆದರುವೆವು; ಬ್ರೂಟಸನೇ, ಏನು ಮಾಡುವ? ಇದೇನಾದರೂ ತಿಳಿದುಹೋದರೆ ಕ್ಯಾಸಿಯಸನೆ ಇರಲಿ, ಸೀಸರನೆ ಇರಲಿ, ಹಿಂದಕ್ಕೆ ಹೋಗುವಂತೆಯೇ ಇಲ್ಲ; ಏಕೆಂದರೆ ಆನಾತ್ಮಹತ್ಯೆ ಮಾಡಿಕೊಳ್ಳುವೆನು.

ಬ್ರೂಟಸ್ — ಧೈರ್ಯದಿಂದಿರು; ಕ್ಯಾಸ್ಯಸ್; ಪೊಪಿಲ್ಯಸ್ ಲೀನ ನಮ್ಮ ಕಾರ್ಯೋದ್ದೇಶವನ್ನು ಕುರಿತು ಮಾತಾಡುತ್ತಿಲ್ಲ, ನೋಡು, ಅವನು ಮುಗುಳ್ನಗುವನು, ಆದರೆ ಸೀಸರನು ತಟಸ್ಥ ಇದ್ದಾನೆ.

ಕ್ಯಾಸ್ಯಸ್ — ಟ್ರಿಬೋನ್ಯಸನಿಗಾಗಿ ಏನೆಸಗಬೇಕೆಂದು ಗೊತ್ತಿದೆ; ನೋಡಲ್ಲಿ, ಬ್ರೂಟಸ್, ಅವನು ಮಾರ್ಕ ಆಂತೋನಿಯನ್ನು ದಾರಿಯಿಂದ ಒಂದು ಬದಿಯಿಂದಾಚೆ ಎಳೆಯುತ್ತಿರುವನು.

(ಆಂತೋನಿ ಮತ್ತು ಟ್ರಿಬೋನ್ಯಸ್ ಹೋಗುವರು. ಸೀಸರನೂ ಸಭಾಸದಸ್ಯರೂ ಪೀಠವನಲಂಕರಿಸುವರು)

ಡೆಸಿಯಸ್ — ಮೆಟೆಲ್ಲಸ್ ಸಿಂಬರನು ಎಲ್ಲಿ? ಅವನು ಮುಂದಕ್ಕೆ ಹೋಗಿ ತನ್ನ ಅರ್ಜಿಯನ್ನು ಕೊಡಲಿ.

ಬ್ರೂಟಸ್ — ಅವನ ಹೆಸರನ್ನು ಹೇಳಿದರು. ಅವನ ಬಳಿ ನಿಂದು ಅವನ ಪರವಾಗಿ ಮಾತಾಡು.

ಸಿನ್ನ — ಕ್ಯಾಸ್ಕ, ಮೊದಲು ನೀನು ನಿನ್ನ ಕೈಯನ್ನೆತ್ತುವವನು.

ಕ್ಯಾಸ್ಕ — ನಾವೆಲ್ಲ ಸಿದ್ಧರಾಗಿದ್ದೇವೆಯೇ?

ಸೀಸರ್ — ಸೀಸರನು ಮತ್ತು ಅವನ ಶಾಸಕರು ಬಗೆಹರಿಸಬೇಕಾದುದರಲ್ಲಿ ಏನು ಚಿಂತಿಸುವುದಿದೆಯೇನು?

ಮೆಟೆಲ್ಲಸ್ — ಸರ್ವೋನ್ನತನು, ಘನವೆತ್ತವನು, ಪ್ರಬಲವೀರನು ಎಂದೆನಿಸಿದ ಸೀಸರನೆ, ಮೆಟೆಲ್ಲಸ ಸಿಂಬರನು ಆ ನಿನ್ನ ಆಸನದೆದುರು ತನ್ನ ದೈನ್ಯಪೂರ್ವಕ ಹೃದಯವನ್ನಿಡುತ್ತಿದ್ದಾನೆ.

(ಮೊಣಕಾಲೂರುವನು)

ಸೀಸ್ಸರ್ — ನಾನು ಇದನೆಲ್ಲ ತಡೆಯಬೇಕಾಗಿದೆ, ಸಿಂಬರನೆ,
ಹೀಗೆ ಮೊಣಕಾಲೂರುವುದೂ ಈ ನಮ್ರತೆಯ
ಬೇಡಿಕೆಗಳೂ ನಮ್ಮ ಸಾಮಾನ್ಯ ಜನವರನ್ನು
ಸಂತೃಪ್ತಿಪಡಿಸಬಹುದಲ್ಲದೆಯೆ ನಾವು ಜಾ
ರಿಗೆ ತಂದ ಕಾನೂನುಗಳನ್ನು ಮಕ್ಕಳಾಟದಂ
ತಾಗಿಸುವುವು; ಸೀಸ್ಸರನು ಅಂಥ ದ್ರೋಹಾತ್ಮಕವ
ಹ ರಕ್ತವನ್ನು ಹೊತ್ತಿರುವನೆಂದೆಣಿಸಿ ಸಂತೋ
ಷಿಸ ಬೇಡ; ನೈಜವಿಷಯವನ್ನು ಮರೆಸಿ ಸವಿಯಾ
ದ ಮಾತುಗಳು, ದೈನ್ಯತೆಯ ವೇಷಗಳು, ನಾಯಿಗ
ಳಂತೆ ಬಾಲ ಆಡಿಸುತ್ತ ತೋರಿಸುವ ಕೊಂಕೃ
ತಿಗಳು ಬುದ್ಧಿಹೀನರನ್ನು ಓಲಿಸಬಹುದು, ರಕ್ಷೆ!
ನಿನ್ನ ಸೋದರನು ಕಾನೂನು ಬದ್ಧವಾಗಿ ಗ
ಡೀಪಾರು ಮಾಡಲ್ಪಟ್ಟಿರುವನು. ಇದೀಗ ನೀ
ನವನಿಗಾಗಿ ಬಗ್ಗುತ್ತ ಬೇಡುತ್ತ ಮೊರೆಯುತಲಿ
ದ್ದರೆ ನಾನು ನಿನ್ನನ್ನು ಒಂದು ನಾಯಿಯೆಂದೆಣಿ
ಸುತ್ತ ತನ್ನ ದಾರಿಯಿಂದತ್ತ ತಳ್ಳುವೆನು. ಸೀ
ಸ್ಸರನು ಅನ್ಯಾಯವನೆಸಗುವವನು ಅಲ್ಲವೆಂ
ದು ತಿಳಿ! ತಕ್ಕ ಕಾರ್ಯಗಳು ಇಲ್ಲದೆ ಅವನೇ
ನೂ ಸಾಲಬದಲು ಒಪ್ಪಲಾರನು.

ಮೆಟೆಲ್ಲಸ್ — ಗಡೀಪಾರು ಮಾಡಲ್ಪಟ್ಟ ನನ್ನ ಸೋದರ
ನನ್ನು ಕುರಿತಾಗಿ ಇರುವ ಕಾನೂನನ್ನು ಹಿಂ
ದೆಗೆಯಬೇಕೆಂದು ಚೆನ್ನಾಗಿ ಇಂಪಾಗಿ ಘನ
ಹೊಂದಿದ ಸೀಸ್ಸರನ ಕಿವಿಗೆ ಹೇಳಿಸಲು ಒ
ಪ್ಪಿಸಲು ನನಗಿಂತ ಸಮರ್ಥರಾದವರು ಯಾರೂ
ಇಲ್ಲವೆ?

ಬ್ರೂಟಸ್ — ಸೀಸ್ಸರನೆ, ನಿನ್ನ ಕೈಗೆ ಮುತ್ತಿಡುವೆನು; ಆದ
ರೆ ನಿನ್ನನ್ನು ಮೆಚ್ಚಿಸಲಿಕ್ಕಲ್ಲ; ಅದರ ಬದ
ಲಾಗಿ ಪಬ್ಲಿಯಸ್ ಸಿಂಬರನ ಮೇಲೆ ಹೇರಿದ
ಕಾನೂನುಗಳನ್ನು ಕೂಡಲೆ ಹಿಂದೆಗೆದುಕೊಳ್ಳ
ಬೇಕೆಂದು ಕೇಳಲಿಚ್ಛಿಸುವೆ.

ಸೀಸ್ಸರ್ — ಬ್ರೂಟಸನೆ, ಏನಂದೆ ?

ಕ್ಯಾಸ್ಸಿಯಸ್ — ಸೀಸ್ಸರ್, ಕ್ಷಮಿಸು; ಮಾನ್ಯ ಸೀಸ್ಸರ್, ಕ್ಷಮಿಸು; ಪ
ಬ್ಲಿಯಸ್ ಸಿಂಬರನನ್ನು ಸ್ವತಂತ್ರ ನಾಗರಿಕನಾ
ಗಿ ಮಾಡಲು ನಿನ್ನನ್ನು ಕ್ಯಾಸಿಯಸನು ನಿನ್ನ ಪಾ
ದಕ್ಕೆ ಬಿದ್ದು ಬೇಡುತ್ತಾನೆ.

ಸೀಸ್ಸರ್ — ನಾನು ನಿನ್ನಂತೆ ಆಗಿದ್ದರೆ ಇನ್ನೊರ್ವನನ್ನು

ಒಪ್ಪಿಸಲು ನಾನು ಪ್ರಾರ್ಥಿಸಬಲ್ಲೆನಾದರೆ ಆ ಪ್ರಾರ್ಥ
ನೆಯು ನನ್ನ ನಿರ್ಧಾರವನ್ನು ಬದಲಿಸುವುದಾಗಿ
ಇದ್ದಿದ್ದರೆ ಆಗ ನಾನು ನೀನಂದುದಕ್ಕೆ ಒ
ಪ್ಪುತ್ತಿದ್ದೆನು; ಆದರೆ ವ್ಯೋಮಾಂಗಣದಲ್ಲಿ ನೆ
ಲ್ಲೆನೆ ಒಂದು ಕಡೆ ಸ್ಥಿರವಾಗಿರುವ ಮತ್ತು ಅದ
ರಂತೆ ಬೇರಾವುದಿಲ್ಲದ ಉತ್ತರ ದಿಕ್ಕಿನ
ಲ್ಲಿ ಬಹು ಮೇಲೆ ಇರುವಾ ನಕ್ಷತ್ರದಂತೆ ನಾ
ನು ಅಚಂಚಲನು; ಅಂತರಿಕ್ಷವೆಲ್ಲಾ ಅಸಂ
ಖ್ಯಾತ ಚುಕ್ಕಿಗಳಿಂದ ಅಲಂಕೃತವಿರೆ ಅವೆ
ಲ್ಲ ಬೆಂಕಿಯ ಕಿಡಿಗಳು; ಪ್ರತಿಯೊಂದು ಮಿನುಗುವುದು;
ಆದರೆ ಅವರಲ್ಲೊಂದು ತನ್ನದೇ ಆದ ಸ್ಥಾ
ನದಲ್ಲಿ ಸ್ಥಿರವಾಗಿಯೆ ನಿಂತಿದೆ; ಅದೇ ರೀತಿ
ಲೋಕದಲ್ಲಿ ಜನ ತುಂಬಿ ಇರುವರು, ಅವರಾದರೊ
ರಕ್ತಮಾಂಸದಿಂದ ಕೂಡಿ ಅಂತೆಯೆ ಭಯಭೀತ
ರು. ಹಾಗಿದ್ದರೂ ಅವರೆಡೆಯಲ್ಲಿ ನಿಜಕ್ಕೂ ನ
ನಗೆ ಗೊತ್ತಿದೆ; ಒಬ್ಬನು ಯಾವೊಂದು ಬಲಾತ್ಕಾ
ರಕ್ಕೆ ಬಗ್ಗದೆ ಯಾರ ಪ್ರೇರಣೆಗು ಒಳಗಾಗ
ದೆ ತನ್ನ ಸ್ಥಾನದಲ್ಲಿ ದೃಢತನದಿಂದ ಇರ
ತಕ್ಕವನು; ಅವನೇ ನಾನು! ಆ ನನ್ನ ಶಕ್ತಿಯನ್ನು
ಇದರಲ್ಲಿ ಒಂದಿಷ್ಟು ತೋರ್ಪಡಿಸುವೆನು; ಸಿಂಬ
ರನನ್ನು ಗಡೀಪಾರು ಮಾಡಲು ದೃಢವಾಗಿಯೇ
ನಿರ್ಧರಿಸಿದೆನು. ಅವನನ್ನು ಅಂತೆಯೆ ಇರಿಸುವ ನಿ
ರ್ಧಾರವದು ಈಗಲೂ ಇದೆ!

ಸಿನ್ನಾ — ಓ ಸೀಸರ್,

ಸೀಸರ್ — ಹಾಗಿರಲು ನೀವು ಒಲಿಂಪಸ್ ಬೆಟ್ಟವನ್ನು ಮೇಲೆತ್ತುವಿರೆ?

ಡೆಸಿಯಸ್ — ಹಾ, ವೀರ ಸೀಸರನೆ,

ಸೀಸರ್ — ಬ್ರೂಟಸನು ವ್ಯರ್ಥವಾಗಿ ಮೊಣಕಾಲೂರಿ ಕೇಳಿಕೊಳ್ಳಲಿಲ್ಲವೆ?

ಕ್ಯಾಸ್ಕಾ — ಹಸ್ತಗಳೆ, ನನ್ನೊಡನೆ ಇದೊ ಮಾತಾಡಿ.

(ಕ್ಯಾಸ್ಕನು ಸೀಸರನ ಕೊರಳನ್ನು ಚೂರಿಯಿಂದ ತಿವಿಯುವನು; ಸೀಸರನು ಅವನ ತೋಳನ್ನು ಹಿಡಿಯುವನು; ಆಗ ಇತರ ಪಿತೂರಿಗಾರರು ಸೀಸರನನ್ನು ತಿವಿಯುತ್ತಾರೆ. ಕಡೆಗೆ ಮಾರ್ಕಸ್ ಬ್ರೂಟಸನೂ ಇರಿಯುವನು.)

ಸೀಸರ್ — ನೀನೀನಾ --ಅಹಹ-- ಬ್ರೂಟ್---? (ಅನ್ನುತ್ತ ಬೀಳುವನು)

(ಸೀಸರ್ ಸಾಯುವನು. ಶಾಸನ ಸಭಾ
ಸದಸ್ಯರು, ಜನರು ಅತ್ಯಾಶ್ಚರ್ಯದಿಂದ ಕಕ್ಕಾಬಿಕ್ಕಿ
ಯಾಗಿ ಅತ್ತಿತ್ತ ಓಡುವರು; ಎಲ್ಲೆಲ್ಲೂ ಗಲಿಬಿಲಿ.)

ಸಿನ್ನ — ಸ್ವಾತಂತ್ರ್ಯ; ಇದೇ ಬಿಡುಗಡೆ; ಸತ್ತಿತು ದಬ್ಬಾ
ಳಿಕೆ; ಎಲ್ಲ ಓಡಿರಿ, ಜನಕ್ಕೆ ಹೇಳಿರಿ, ಬೀದಿ
ಗಳಲ್ಲೆಲ್ಲ ಕೂಗಿ ಸಾರಿರಿ.

ಕ್ಯಾಸಿಯಸ್ — ಕೆಲವರು ಜನ ಸಾರ್ವಜನಿಕ ವೇದಿಕೆಗಳಿಗೇರಿ
ಸಾರಿರಿ; ಸ್ವಾತಂತ್ರ್ಯ, ಬಿಡುಗಡೆ, ಅದರೊಡನೆಯೇ
ಹಕ್ಕುದಾರಿಕೆ ಎಂದೆನ್ನಿರಿ.

ಬ್ರೂಟಸ್ — ಮಹಾಜನರೇ, ಶಾಸನ ಸಭೆಗಳ ಸದಸ್ಯರೇ, ಹೆ
ದರಬೇಡಿರಿ. ಓಡದಿರಿ, ನಿಂತಲ್ಲಿಯೇ ನಿಲ್ಲಿ;
ಅತ್ಯಾಶೆಯು ಋಣವನ್ನು ತೀರಿಸಿದೆ.

ಕ್ಯಾಸ್ಕಾ — ಗದ್ದುಗೆಯ ಮೇಲೇರು, ಬ್ರೂಟಸ್.

ಡೆಸಿಯಸ್ — ಕ್ಯಾಸಿಯಸನೂ ಸಹ.

ಬ್ರೂಟಸ್ — ಪಬ್ಲಿಯಸನು ಎಲ್ಲಿದ್ದಾನೆ?

ಸಿನ್ನ — ಇಲ್ಲಿರುವನು; ಈ ದಂಗೆಯನ್ನು ನೋಡಿ ತುಂಬಾ
ಬೆಚ್ಚಿದ್ದಾನೆ.

ಮೆಟೆಲ್ಲಸ್ — ಸೀಸರನ ಮಿತ್ರರಾರಾದರೂ ಬರುತ್ತಾರೆ: ಇ
ರಬಹುದು. ಎಲ್ಲರೂ ಒಟ್ಟಿಗೆ ನಿಲ್ಲಿ.

ಬ್ರೂಟಸ್ — ನಿಲ್ಲುವುದರ ಪ್ರಸ್ತಾಪ ಬೇಡ. ಎಲೈ ಪಬ್ಲಿ
ಯಸನೆ, ಒಳ್ಳೆದಾಗಲಿ; ನಿನಗಾಗಲಿ ಬೇರಾವ
ರೋಮನನ್ನಾಗಲಿ ವ್ಯಕ್ತಿಗತವಾಗಿ ಹಾ
ನಿಯೆಸಗುವ ಉದ್ದೇಶವಿಲ್ಲ; ಹಾಗೆಂದು ಅ
ವರಿಗೆ ಪಬ್ಲಿಯಸ್!

ಕ್ಯಾಸಿಯಸ್ — ನಮ್ಮನ್ನು ಬಿಟ್ಟು ಹೋಗು, ಪಬ್ಲಿಯಸ್, ಇತ್ತ ಮು
ನ್ನುಗ್ಗುವ ಜನಗಳು ಪ್ರಾಯವೇರಿದ ನಿನಗೇ
ನಾದರೂ ಕೇಡನ್ನು ಬಗೆದಾರು.

ಬ್ರೂಟಸ್ — ಹಾಗೆ ಮಾಡು. ಬೇರಾವನೂ ಈ ಕಾರ್ಯದಲ್ಲಿ
ಭಾಗಿಯಾಗದೆಯೆ ಇರಲಿ. ಇದನ್ನು ಕೈಕೊಂಡ
ವರು ನಾವು ಮಾತ್ರ!

(ಟ್ರೆಬೋನಿಯಸ್ ಪುನಃ ಬರುವನು.)

ಕ್ಯಾಸಿಯಸ್ — ಆಂತೋನಿ ಎಲ್ಲಿದ್ದಾನೆ?

ಟ್ರೆಬೋನಿಯಸ್ — ತುಂಬಾ ಬೆರಗುಗೊಂಡು ತನ್ನ ಮನೆಗೆ ಪಲಾಯ
ನಗೈದ. ಇದೇನು ಪ್ರಪಂಚದ ಕಲ್ಪಾಂತ
ದಿನವೋ ಎಂಬಂತೆ ಗಂಡಸರು ಹೆಂಗಸರು ಮ
ಕ್ಕಳೂ ಆಶ್ಚರ್ಯದಿಂದ ಒಬ್ಬರನ್ನೊಬ್ಬರು ನೋ

ಓಡುತ್ತಿದ್ದಾರೆ.

ಬ್ರೂಟಸ್ — ವಿಧಿಯೇ, ನಮಗೆ ನಿನ್ನ ಸುಖಸಂತೋಷಗಳು ಏನೆಂದು ತಿಳಿಯುವುದು. ನಾವು ಸಾಯುವೆವು ಎಂದು ನಮಗೆ ಗೊತ್ತಿದೆ; ಆದರೆ ತಾವು ಉಗಲಲಿಹ ಆ ನಿಶ್ಚಿತ ದಿನ ಮತ್ತು ತಮಗೆ ಜೀವಿಸಬೇಕೆನ್ನುವ ಕಾತರತೆಯಲ್ಲಿ ಜನರು ಬದುಕು ನಡೆಸಿದರೆ.

ಕ್ಯಾಸ್ಸಿಯಸ್ — ಏಕೆ? ಬಾಳಿನಲ್ಲಿ ಇಪ್ಪತ್ತು ವರ್ಷಗಳನ್ನು ಕಳೆದುಕೊಳ್ಳುವವನು ಸಾವಿಗೆ ಹೆದರುತ್ತಲೇ ಅಷ್ಟೇ ವರ್ಷಗಳನ್ನು ಕಳೆದುಕೊಳ್ಳುವನು.

ಬ್ರೂಟಸ್ — ಹಾಗೆಂದರೆ ಸಾವು ಹಿತಕರವೆನಿಸಿ; ಆದರಿಂದ ಸೀಸರನ ಗೆಳೆಯರೆನಿಸಿದ ನಾವು ಸಾವಿಗೆ ಹೆದರುವ ಅವನ ವರ್ಷಾವಧಿಯನ್ನು ಕಡಿಮೆ ಮಾಡಿದೆವು. ಕೆಳಬಗ್ಗಿರಿ, ಎಲೆ ರೋಮನ್ನರೇ, ಬಗ್ಗಿರಿ, ಸೀಸರನ ರಕ್ತದಲ್ಲಿ ನಮ್ಮ ಕೈಗಳನ್ನು ತೋಳುಗಳವರೆಗೂ ತೊಳೆಯುವ. ಅನಂತರ ನಮ್ಮ ಕತ್ತಿಗಳನ್ನು ರಕ್ತದಲ್ಲಿ ಮುಕ್ಕಿ ಆಯುಧಗಳನ್ನು ತಲೆಮೇಲೆ ಎತ್ತಿ ಬೀಸುತ್ತ "ಶಾಂತಿ, ಸ್ವಾತಂತ್ರ್ಯ, ಮತ್ತು ಬಿಡುಗಡೆ" ಎಂದು ಸಂತೆಯ ಮಾಳದವರೆಗೂ ಘೋಷವನ್ನು ಮೊಳಗಿಸುತ್ತ ಮುಂದಕ್ಕೆ ನಡೆಯುವ.

ಕ್ಯಾಸ್ಸಿಯಸ್ — ಆದ್ದರಿಂದ ಬಗ್ಗಿರಿ; ರಕ್ತದಿಂದ ತೊಳೆಯಿರಿ! ಎಷ್ಟು ಯುಗಮಾನದವರೆಗೂ ಈ ಗಂಭೀರ ದೃಶ್ಯವನ್ನು ಇನ್ನೂ ಉದಿಸದೇ ಇರುವ ದೇಶಗಳಲ್ಲಿ ಇನ್ನೂ ತಿಳಿಯದೆಯೇ ಇರುವ ಭಾಷೆಗಳಲ್ಲಿ ನಟಿಸಲಿರುವರೋ!

ಬ್ರೂಟಸ್ — ಈಗ ಧೂಳಿಗೂ ಕಡೆಗೆಟ್ಟು, ಪಾಂಪೇ ಸ್ಮಾರಕದ ಬಳಿಯೆ ಬಿದ್ದಿರುವ ಸೀಸರನು ನಾಟಕೀಯವೆಂಬಂತೆ ಇನ್ನೆಷ್ಟು ಸಲ ಹೀಗೆ ರಕ್ತವನ್ನು ಸುರಿಯಲಿರುವನೋ!

ಕ್ಯಾಸ್ಸಿಯಸ್ — ಅದು ಎಷ್ಟು ಬಾರಿ ಉಂಟಾಗಲಿರುವುದೋ ಅಷ್ಟೇ ರೀತಿ ಇನ್ನೆಷ್ಟು ಬಾರಿ ಈ ನಮ್ಮ ತಂಡವನ್ನು ತಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನಿತ್ತವರೆಂದು ಹೇಳಲಿರುವರೋ!

ಡೆಸಿಯಸ್ — ಏನು? ಇನ್ನು ಹೋಗೋಣವೆ?

ಕ್ಯಾಸ್ಸಿಯಸ್ — ಹಾ ಪ್ರತಿಯೊಬ್ಬನೂ ಎಡೆಮಾಡಿ; ಬ್ರೂಟಸನು ಮುಂದೆ ಇರಲಿ. ರೋಮ್‌ನ ಬಹು ದಿಟ್ಟತನದ, ಶ

ಖ್ಯಾತಿಯ ಈ ವೀರ ಬ್ರೂಟಸನ ಹಿಂದೆಯೇ ನಾವು ಹೋಗುವ.

ಬ್ರೂಟಸ್ — ಏನು; ಯಾರಲ್ಲಿ ಬರುವವನು ?

(ಸೇವಕನ ಪ್ರವೇಶ.)

ಅಂತೋನಿಯು ಒಬ್ಬ ಮಿತ್ರ.

ಸೇವಕ — ಹೀಗೆ, ಬ್ರೂಟಸ್, ನನ್ನ ಧನಿಯು ಮೊಣಕಾಲೂರುವಂತೆ ನನಗೆ ಆಜ್ಞಾಪಿಸಿರುವನು; ಮಾರ್ಕ್ ಅಂತೋನಿಯು ನನಗೆ ಈ ರೀತಿ ಸಾಷ್ಟಾಂಗ ನಮಸ್ಕಾರ ಮಾಡಲು ಹೇಳಿರುವನು; ಬ್ರೂಟಸನು ಮಾನ್ಯನು; ಬುದ್ಧಿವಂತನು, ವೀರನು, ಅಂತೆಯೇ ಸತ್ಯವಂತನು; ಸೀಸರನು ಪ್ರಬಲ ವೀರ, ಧೈರ್ಯಶಾಲಿ, ಘನ ಗಂಭೀರ, ಸ್ನೇಹಪರ; ಬ್ರೂಟಸನನ್ನು ನಾನು ಪ್ರೀತಿಸುತ್ತಿದ್ದೇನೆಂದು ಹೇಳು. ಅವನನ್ನು ಅಭಿಮಾನಿಸುವೆನು, ಆದರೆ ಸೀಸರನಿಗೆ ನಾನು ಹೆದರುತ್ತಿದ್ದೆ; ಅವನನ್ನು ಗೌರವಿಸುತ್ತಿದ್ದೆ, ಪ್ರೀತಿಸುತ್ತಿದ್ದೇನೆಂದು ಹೇಳು. ಅಂತೋನಿಯು ಬ್ರೂಟಸನ ಬಳಿಗೆ ಸುರಕ್ಷಿತನಾಗಿ ಬರಬಹುದೆಂದೂ ಸೀಸರನು ಹೇಗೆ ಸಾಯಲು ಯೋಗ್ಯನಾದನೆಂಬುದನ್ನು ಹೇಳುವೆನೆಂದೂ ಭರವಸೆಯನ್ನು ಕೊಟ್ಟಲ್ಲಿ ಮಾರ್ಕ್ ಅಂತೋನಿಯು ಜೀವಿಸುತ್ತಿರುವ ಬ್ರೂಟಸನನ್ನು ಪ್ರೀತಿಸುವುದಕ್ಕಿಂತಲೂ ಹೆಚ್ಚಾಗಿ ಸತ್ತ ಸೀಸರನನ್ನು ಪ್ರೀತಿಸನು; ಅವನು ಹಾಗಿದ್ದರೂ ಮಾನ್ಯ ಬ್ರೂಟಸನ ಮುಂದಿನ ಕಾರ್ಯಭಾರಗಳನ್ನು ಅವು ಎಷ್ಟು ಅಪಾಯಕರವೇ ಆಗಿರಲಿ ಬಹು ಶ್ರದ್ಧೆಯಿಂದ ಅನುಸರಿಸುವನು, ಎಂದು ನನ್ನ ಪ್ರಭು ಅಂತೋನಿಯು ಹೇಳುವನು!

ಬ್ರೂಟಸ್ — ನಿನ್ನ ಪ್ರಭು ಬುದ್ಧಿವಂತನು ಮತ್ತು ವೀರ ರೋಮನ್ ನಾಗರಿಕನು. ಅವನನ್ನು ಕನಿಷ್ಠನಾಗಿ ಭಾವಿಸಲೇ ಇಲ್ಲ. ಅವನಿಗೆ ಇಲ್ಲಿಗೆ ದಯಮಾಡಿ ಬರುವಂತೆ ಹೇಳು; ಅವನನ್ನು ಸಮಾಧಾನ ಪಡಿಸಲಾಗುವುದು; ಅದರನಂತರ ಯಾವೊಂದು ಭಂಗಕೊಳಗಾಗದೆಯೇ ಹಿಂದಿರುಗಬಹುದೆಂದು ನನ್ನಾಣೆಗೂ ಹೇಳುತ್ತೇನೆ.

ಸೇವಕ — ನಾನು ಅವನನ್ನು ಈಗಲೇ ಕರೆತರುವೆನು.

(ಹೋಗುವನು.)

ಬ್ರೂಟಸ್ — ಅವನನ್ನು ನಾವು ಶಿವರ್ ಮಿತ್ರನಂತೆ ಗಣಿಸುವು
ದರಿಂದ ನನಗೆ ಗೊತ್ತಿದೆ.

ಕ್ಯಾಶಿಯಸ್ — ಅದೇ ರೀತಿ ನಾನೂ ಆಶಿಸುವೆನು; ಆದರೆ
ನನಗೀಗಲೂ ಅವನ ಬಗ್ಗೆ ತುಂಬಾ ಭಯಾಶಂಕೆ ಇದೆ
ಯಿದೆಯೆಂದು ಅನ್ನಿಸುವುದು. ನನ್ನ ಸಂದೇಹ
ವು ಆಚಿತವೆನಿಸಿದರೂ ನಾಕಷ್ಟು ನಿಜವಿಚಾ
ರವನ್ನೇ ನಿಮರ್ಶಿಸುತ್ತವೆ.

ಬ್ರೂಟಸ್ — ಆದರೆ ಆಂತೋನಿ ಅಕೋ ಇಲ್ಲಿ ಬರುವನು.

(ಆಂತೋನಿ ಪುನಃ ಪ್ರವೇಶಿಸುವನು)

ಮಾರ್ಕ್ ಆಂತೋನಿ, ನಿನಗೆ ಸುಸ್ವಾಗತ.

ಆಂತೋನಿ — ಹೋ! ಪ್ರಬಲನಾದ ಸೀಸರ್!
ನೀನು ಇಷ್ಟು ಕೆಳಗೆ ಬೀಳಬೇಕೆ? ಇದೀಗ ನಿ
ನ್ನ ಎಲ್ಲಾ ದಂಡಯಾತ್ರೆಗಳೂ ರಾಜ್ಯಗಳು ಕೀ
ರ್ತಿ ಗೆಲುವುಗಳು ಆಕ್ರಮಣಗಳೂ ಇಷ್ಟು ಅಲ್ಪ ಪ್ರ
ಮಾಣಕ್ಕಿಳಿದುವೆ? ನಿನಗೆ ಶಾಂತಿಯಾಗಲಿ. ಮಾನ್ಯರೆ,
ನೀವೇನು ಯೋಚಿಸುವಿರೋ ನಾನು ತಿಳಿಯೆ. ನೆ
ತ್ತರನು ಇನ್ನಾರು ಹರಿಯಬೇಕು? ಗಣ್ಯ ವ್ಯ
ಕ್ತಿಗಳಿನ್ನು ಯಾರು? ಬಹುಶಃ ನಾನೇ ಆಗಿದ್ದ
ರೆ ಸೀಸರ್ ಸತ್ತ ಈ ಗಳಿಗೆ ಅವನೊಡನೆ ಸಾಯಲು
ತಕ್ಕುದೆನಿಸಿದ ಕಾಲ! ಅಲ್ಲದೆ ಜಗತ್ತಿನ ಅ
ತಿ ಸಮೃದ್ಧ ನೆತ್ತರನು ಹರಿಯಿಸಿ ವಿಖ್ಯಾತ
ವಾದ ಈ ಖಡ್ಗಗಳ ಮೂಲಕವೆ ನನ್ನ ರ
ಕ್ತವನ್ನೂ ಹರಿಯಿಸುವುದಲ್ಲದೆ ಆಯುಧಗಳ ಅ
ದರ ಪಾಲಿಗಾದರೂ ಉತ್ತಮವೆನಿಸಿದ ಬೇ
ರೆಯೊಂದು ಇಲ್ಲ. ನನ್ನನ್ನು ನಿಮ್ಮ ದ್ವೇಷವೃ
ತ್ತಿಯೊಂದೆನಿಸಿರೆಯೆಂದು ವಿನಂತಿಸುವೆ. ರಕ್ತದ
ಆ ಕೊಯ್ಲು ಕೈಗಳುಳಿದ ಹಸಿ ಹೊತ್ತು ಹೊಗೆ ಆಂ
ತೆಯೇ ಇದ್ದಾಗಲೇ ನಿಮ್ಮ ಇಚ್ಛೆಯನು ಈ
ಡೇರಿಸಿರಿ; ಒಂದು ಸಾವಿರ ವರ್ಷ ಕಾಲ ಬದು
ಕಿರಿ; ನಾನು ಈ ಯುಗಪುರುಷ ಸೀಸರನು ಬಿದ್ದ
ಹೋಗಿತುವೆನಿಸಿದ ಸ್ಥಳದಲಿ ಮತ್ತು ನಿಮ್ಮಿಂ
ದಲೆ ಸಾಯಲು ಇದು ತಕ್ಕುದಾದ ಸ್ಥಳವು ಮತ್ತು
ಸನ್ನಿವೇಶವು ಅಲ್ಲದೆ ಬೇರೆ ಇಲ್ಲ!

ಬ್ರೂಟಸ್ — ಹಾ ಆಂತೋನಿ!
ನಮ್ಮಿಂದ ನೀನು ಸಾವನ್ನು ಬೇಡದಿರು. ನಾ
ವೀಗಿದ್ದ ಕೆಲಸದಿಂದ ನೀನು ನಮ್ಮನ್ನು ರು

ಕ್ತಲಾಲಸಿಗಳು ಕ್ರೂರಿಗಳುಯೆಂದು ಭಾವಿಸಿದ
ರೂ ನಮ್ಮ ಕೈಗಳಂತೆಸಗಿದುವುವಲ್ಲದೆಯೆ
ನಮ್ಮ ಹೃದಯಗಳನು ನೀನು ಕಾಣೆ; ಅವು ನಿಜ
ವಾಗಿಯೂ ಇಡೀ ರೋಮ್‌ಗಾಗಿ ಸಂತಾಪಿಸು
ತ್ತಿವೆ; ಬೆಂಕಿಯು ಬೆಂಕಿಯನ್ನು ಹೇಗೆ ಆರಿಸುವುದೋ
ಅದೇ ರೀತಿ ಸಂತಾಪ ಸಂತಾಪವನ್ನು ನಿ
ವಾರಿಸುವುದು. ಅಂತೆಯೆ ಸೀಸರನ ವಿಷಯದ
ಲ್ಲಿ ಸಹ! ಮಾರ್ಕ್ ಆಂತೋನಿ, ನಿನಗೆ ನಮ್ಮ ಖಡ್ಗಗಳು
ಬರೀ ಉಕ್ಕಿನ ಮೊನೆಗಳಿಂದಿನಿಸಬಹುದಾದರೂ
ನಮ್ಮ ಅಸ್ತ್ರಗಳಲ್ಲಿ ದ್ವೇಷದ ಚಿಹ್ನೆಯೇನೂ
ಇಲ್ಲ. ನಮ್ಮ ಸಹೃದಯತೆ ಸೋದರ ಭಾವವು
ನೋಬಲವು ನಿನ್ನನ್ನು ಸರ್ವ ವಿಧದ ಪ್ರೀತಿ ಸ
ದ್ಭಾವನೆ ಮತ್ತು ಮಾನ್ಯತೆಯಿಂದ ನಮ್ಮೆಡೆಗೆ
ಸ್ವಾಗತಿಸುವುದು.

ಕ್ಯಾಸಿಯಸ್ — ನಮ್ಮ ಮುಂದಿನ ರಾಜಕೀಯದ ಹೊಸ ವ್ಯವ
ಸ್ಥೆಯಲ್ಲಿ ಇತರ ಜನರದಕ್ಕೆ ಎಷ್ಟಿರುವುದೋ
ಅಷ್ಟೆ ಮಾನ್ಯತೆಯು ನಿನ್ನ ಅಭಿಪ್ರಾಯಕ್ಕೆ ಇ
ದ್ದೇ ಇರುವುದು!

ಬ್ರೂಟಸ್ — ಈಗ ಭಯಭೀತರಾದ ಜನವನ್ನೆಲ್ಲ ನಾ
ವೇಕೆ ಹೀಗೆ ಮಾಡಿದ್ದೇವೆಯೆಂದು ವಿವರಿ
ಸಿ ಸಮಾಧಾನ ಪಡಿಸುವವರೆಗೆ ನೀನು ಸಹನೆಯ
ನು ತಾಳು; ಅದರನಂತರ ನಮ್ಮ ಅಭಿಪ್ರಾಯವು
ಏನಿತ್ತು ಎಂದು ಹೇಳುತ್ತೇವೆ. ಸೀಸರನ
ನು ಪ್ರೀತಿ ಅಭಿಮಾನದಿಂದ ಕಂಡಿದ್ದ ನಾನು ಅ
ದೇಕೆ ತಾಗಿದೆಯೆಂಬುದಾಗಿ ಹೇಳುತ್ತೇನೆ!

ಆಂತೋನಿ — ನಿನ್ನ ಗುಣಶೀಲದ ವಿ
ಷಯವಾಗಿ ನಾನು ಸಂದೇಹ ಪಡುತ್ತಿಲ್ಲ! ಪ್ರತಿ
ಯೊಬ್ಬನು ನನಗೆ ರಕ್ತದಿಂದ ತೊಯ್ದಿರುವ ತಮ್ಮ
ಕೈಯನ್ನು ಕೊಡಲಿ! ಮೊದಲು ಮಾರ್ಕಸ್ ಬ್ರೂಟಸನೆ,
ನಿನಗೆ ನಾನು ಕೈಯನ್ನು ಕೊಡಬಹುದೆ? ಅನಂತ
ರ ಕೈಯಸ್ ಕ್ಯಾಸಿಯಸನೆ, ನಿನ್ನ ಕೈಯನ್ನು ನಾ
ನು ಹಿಡಿಯಲೆ? ಡೆಸಿಯಸ್ ಬ್ರೂಟಸನೆ ಈಗ ನಿನ್ನದು;
ಮೆಟೆಲ್ಲಸ್, ಈಗ ನಿನ್ನದು; ಈಗ ಸಿನ್ನಾ, ಇ
ದೋ ಕೈ; ಆಹಾ ಕೆಚ್ಚೆದೆಯ ನಿನ್ನ ಕ್ಯಾಸ್ಕ, ಇ
ಲ್ಲಿರುವೆ; ಅನಂತರ ಕಡೆಗಾದರೂ ಪ್ರೀತಿ
ಯಲ್ಲಿ ಕಡೆಯದಲ್ಲದ ಪ್ರಿಯ ಟ್ರೆಬೋನಿಯಸನೆ, ನಿನ್ನ

ಕ್ಕೆ ಕೊಡುವೆ. ಅಹಾ, ನೀವೆಲ್ಲರೂ ಸಜ್ಜನರು; ಇ
ದೀಗ ನಾನು ಏನೆನ್ನಲಿ? ಸೀಸರನ ಮಿತ್ರ
ನಾದ ನನ್ನ ಪರಿಸ್ಥಿತಿಯು ಜಾರು ನೆಲದಲ್ಲಿ
ನಿಂತಿದೆ; ಇದೀಗ ಹೇಡಿಯೆಂದೋ ಹೊಗಳುಭ
ಟ್ಟನೆಂದೋ ಹೇಳುತ್ತೀರಿ. ಆ ಎರಡು ಅಸಂಸ್ಕೃತ
ಗುಣಗಳನ್ನು ನನ್ನಲ್ಲಿ ಹೇರಿಸಿ ನನ್ನನ್ನು
ಪರೀಕ್ಷಿಸುವಿರಿ. ಆದರೂ, ಸೀಸರನೆ, ನಿನ್ನನ್ನು
ಅಭಿಮಾನದಿಂದ ನಾನು ಕಂಡಿದ್ದೆನದು ನಿಜವೆ!
ಈಗ ನಿನ್ನ ಆತ್ಮವು ನಮ್ಮೆಡೆಗೆ ನೋಡುತ್ತಿರು
ವುದಾದರೆ ನಿನ್ನ ಮರಣಕ್ಕೆ ನಿನ್ನ ಆತ್ಮವು
ದುಃಖಿಸುವುದಕ್ಕಿಂತಲೂ ಹೆಚ್ಚಾಗಿ ನಿನ್ನ ಮೃತ
ದೇಹದ ಎದುರು ನಿನ್ನ ವೈರಿಗಳ ಕೈ ಕುಲುಕು
ಈ ಅಂತೋನಿಯು ಸಖ್ಯವನ್ನು ಬೆಳೆಸುವಂತೆ ಮಾ
ಡುವುದು ನೋಡಿ ದುಃಖಿಸದೆ? ಈ ನಿನ್ನ ದೇ
ಹದಲ್ಲಿ ಗಾಯಗಳು ಎಷ್ಟಿವೆಯೋ ಅಷ್ಟೇ ಕಣ್ಣು
ಗಳು ನನಗೆ ಇದ್ದಿದ್ದರೆ ಈ ನಿನ್ನ ಮೈಯಿಂ
ದ ಹರಿಯುತ್ತಿರುವ ರಕ್ತಕ್ಕೆ ವೇಗದಲ್ಲಿ ನನ್ನ ಕ
ಣ್ಣೀರು ಉಕ್ಕುತ್ತಿದ್ದಿದ್ದರೆ ನಿನ್ನ ಹಗೆಗಳೊಡ
ನೆ ಸ್ನೇಹ ಸಾಧಿಸುವುದಕ್ಕಿಂತ ನನಗೆ ಅದೇ
ಎಷ್ಟೋ ಒಳ್ಳೆಯದಿತ್ತು! ಜೂಲಿಯಸ್, ನನ್ನನ್ನು
ಕ್ಷಮಿಸು. ಓಹೋ ಧೈರ್ಯಶಾಲಿ ಮಿಗವೇ, ಇಲ್ಲಿ
ನೀನು ಬಿದ್ದೆ, ಮತ್ತಿಲ್ಲಿಯೇ ನಿನ್ನ ಬೇಟೆಗಾ
ರರು ನಿಂತಿರುವರು. ನೀನು ಅರ್ಜಿಸಿದಕ್ಕೆ ಸಹ
ಹಾಕುವವರು ನಿನ್ನ ಕೆನ್ನೆತ್ತರಲಿ ಮೆರೆಯು
ವರು. ಓಹಾ ಲೋಕವೇ, ನೀನು ಈ ಮಿಗಕ್ಕೆ ಅ
ರಣ್ಯವಾದೆ; ಈಗ ಇದೋ ನಿನ್ನ ಹೃದಯವು!
ಒಂದು ಮಿಗದಂತೆಯೇ ಹಲವು ರಾಜಕುಮಾರರ ಶ
ರಹತಿಗೆ ಬಲಿಯಾದಂತೆ ನೀನಿಲ್ಲಿ ಬಿದ್ದಿರುವೆ!

ಕ್ಯಾಸ್ಸಿಯಸ್— ಮಾರ್ಕ್ ಅಂತೋನಿ—

ಅಂತೋನಿ— ಕೈಯಸ್ ಕ್ಯಾಸ್ಸಿಯಸ್, ಕ್ಷಮಿಸು.
ಸೀಸರನ ಶತ್ರುಗಳು ಅದೇ ಹೇಳುವರು; ಆ
ದರೆ ಒಬ್ಬ ಮಿತ್ರನಲ್ಲಿ ಅದು ಔಪಚಾರಿಕ!

ಕ್ಯಾಸ್ಸಿಯಸ್— ಸೀಸರನನ್ನು ನೀನು ಹೊಗಳುವುದರ ಬಗ್ಗೆ ನಾ
ನು ತಪ್ಪೆಣಿಸೆನು. ಆದರೆ ನಮ್ಮೊಡನೆ ನೀನಿರ
ಲು ನಿನಗಿರುವ ನಿಮಿತ್ತದ ಕಾರಣವೇನು? ನೀ
ನು ಮಿತ್ರರಲ್ಲಿ ಒಬ್ಬನಾಗಿ ನಮ್ಮೊಡನಿರುವೆಯೋ ಅ

ಹೇಗೆ ನಿನ್ನನ್ನು ನಾವು ಅವಲಂಬಿಸಬಹುದೆ ಅಂ
ತಲ್ಲದೆ ನಾವು ಮುಂದುವರಿಯೋಣವೆ?

ಅಂತೋನಿ — ಅದಕ್ಕಾಗಿಯೇ ನಾನು ನಿಮ್ಮ ಕೈಕುಲುಕಿದೆನಾ
ದರೂ ಕೆಳಗೆ ಸೀಸರನನ್ನು ನೋಡಿ ನನ್ನ ಮ
ನಸ್ಸು ಕಲಕಿತು. ಮಿತ್ರರೇ, ನನಗೆ ನಿಮ್ಮಲ್ಲಿ
ಅಭಿಮಾನವಿದೆ; ಸೀಸರನು ಹೇಗೆ ಅಪಾಯಕಾ
ರನಾಗಿದ್ದನೆಂಬುದಕ್ಕೆ ಕಾರಣಗಳನ್ನು ನೀ
ವು ಕೊಡುವಿರೆಂಬ ಭರವಸೆಯಿಂದ ನಾನು ನಿ
ಮ್ಮೊಡನೆಯೇ ಇದ್ದೇನೆ.

ಬ್ರೂಟಸ್ — ಇದೊಂದು ಕ್ರೂರ ದೃಶ್ಯವಾದರೆ ಅದಕ್ಕಿಂತ
ವ ನಮ್ಮ ಕಾರಣಗಳಾದರೋ ತುಂಬಾ ಸ
ದುದ್ದೇಶದಿಂದ ಕೂಡಿವೆ. ಅಂತೋನಿಯೇ, ನೀನು
ಸೀಸರನ ಮಗನೇ ಆದರೂ ನೀನದನ್ನರಿ
ತಲ್ಲಿ ತೃಪ್ತನಾಗುವೆ.

ಅಂತೋನಿ — ಅದಷ್ಟೇ ನಾನು ಕೇಳುವುದು. ಮತ್ತೀಗ ನಾ
ನು ಪ್ರತಿಪಕ್ಷದವನೂ ಆಗಿರಬಹುದು. ಆದು
ದರಿಂದೀ ಮೃತದೇಹವನ್ನು ನಾನು ಸಂತೆಯ
ಲಿ ಮತ್ತೆ ಗದ್ದುಗೆಗೆ ತೆಗೆದುಕೊಂಡು ಹೋಗುವೆ
ನು. ಈ ಶವಸಂಸ್ಕಾರದ ಬಗ್ಗೆ ಒಬ್ಬ ಮಿತ್ರನು
ಮಾಡಬೇಕಾದ್ದನ್ನು ಜನಕ್ಕೆ ಹೇಳಬೇಕಿದೆ.

ಬ್ರೂಟಸ್ — ಅಂತೋನಿ, ನೀನು ಹಾಗೇ ಮಾಡು.

ಕ್ಯಾಸ್ಯಸ್ — (ಬ್ರೂಟಸನಿಗೆ ಪಿಸುಮಾತಿನಲ್ಲಿ)
ಬ್ರೂಟಸನೆ, ನಿನ್ನೊಡನೆ ಒಂದು ಮಾತು! ನೀನೇ
ನು ಮಾಡುವೆಯೆಂದು ನೀನು ತಿಳಿಯೆ; ಅದಕ್ಕೊಪ್ಪದಿ
ರು; ಅಂತೋನಿಯು ಶವಸಂಸ್ಕಾರದ ಸಮಯದಲ್ಲಿ
ಮಾತಾಡಿದರೆ ಅವನ ಹೇಳಿಕೆಗೆ ಜನ ಎಷ್ಟು
ಪರವಶರಾಗುವರೆಂದು ನಿನಗೆ ಗೊತ್ತಿದೆಯೆ?

ಬ್ರೂಟಸ್ — ನೀನು ಕ್ಷಮಿಸುವುದಾದರೆ,
ನಾನೆ ಮೊದಲು ಗದ್ದುಗೆಯನ್ನೇರಿ ನಮ್ಮ ಸೀ
ಸರನ ಸಾವಿಗೆ ಕಾರಣವೇನೆಂದು ಹೇಳುವೆ
ನು; ಅಂತೋನಿ ಏನನ್ನುವನೋ ಅದನ್ನು ನಾನು ನಿ
ವೇದಿಸುವೆ! ಅವನು ನಮ್ಮ ಅನುಮತಿಯಿಂದ ಮಾ
ತಾಡುವುದು; ಸೀಸರನಿಗೆ ವಿಧಿಯುಕ್ತ ಹಾಗೂ
ನಿಯಮಾನುಸಾರವಾದ ಅಂತ್ಯಕ್ರಿಯೆಯು ನಡೆಸ
ಲಾಗುವುದು; ಅದರಿಂದ ನಮಗೆ ಕೇಡಾಗುವುದ
ರ ಬದಲಾಗಿ ಒಳ್ಳೆಯದೇ ಆಗುವುದು!

ಕ್ಯಾಸ್ಯಸ್ — ಏನು ಸಂಭವಿಸಲಿರುವುದೋ ನಾನರಿಯೆ; ನಾನು
ಅದನಿಚ್ಛಿಸೆನು.

ಬ್ರೂಟಸ್ — ಮಾರ್ಕ್ ಆಂತೋನಿ, ಸೀಸರನ ಮೃತದೇಹವನ್ನು
ಇದೋ ತೆಗೆದುಕೋ; ನೀನು ಶವಸಂಸ್ಕಾರದ ವೇಳೆ
ಗೆ ಮಾತಾಡುತ್ತಿರುವಾಗ ನಮ್ಮನ್ನು ಆಪಾ
ದಿಸಕೂಡದು. ಸೀಸರನನ್ನು ಕುರಿತಾಗಿ ಒ
ಳ್ಳೆಯದೇನು ಹೇಳಲಿಚ್ಛೆಯೋ ಅದನ್ನೆಲ್ಲ ಹೇ
ಳು. ನಮ್ಮ ಅನುಮತಿಯನ್ನು ಪಡೆದೇ ನೀನು ಮಾ
ತಾಡುತ್ತಿರುವುದೆಂದು ಜನಕ್ಕೆ ತಿಳಿಸು. ಅಂತಿ
ಲ್ಲದಿದ್ದರೆ ನಿನಗೆ ಈ ಅಂತ್ಯಕ್ರಿಯೆಯಲ್ಲಿ ಯಾ
ವ ಪಾತ್ರವೂ ಇಲ್ಲ. ಅಲ್ಲದೆ ಕೇಳು, ನಾನು ಮಾ
ತಾಡುವ ಅದೇ ವೇದಿಕೆಯಲ್ಲಿ ನೀನು ನನ್ನದು
ಮಾತಾಡಿ ಮುಗಿದನಂತರ ನೀನು ಭಾಷಣವ
ನ್ನು ಕೊಡುವುದು.

ಆಂತೋನಿ — ಹಾಗೇ ಆಗಲಿ, ನಾನು ಹೆಚ್ಚೇನೂ ಅಪೇಕ್ಷಿಸೆನು.

ಬ್ರೂಟಸ್ — ಹಾಗಾದರೆ ಈ ಮೃತದೇಹವನ್ನು ಕೊಂಡೊ
ಯ್ಯಲು ಸಿದ್ಧಪಡಿಸು, ಮತ್ತು ನಮ್ಮನ್ನು ನೀನೀ
ಗ ಹಿಂಬಾಲಿಸು.

(ಆಂತೋನಿಯುಳಿದೆ ಎಲ್ಲರೂ ಹೋಗುವರು)

ಆಂತೋನಿ — ಹಾ, ರಕ್ತದಿಂದ ತೋಯ್ದ ಬರೀ ಒಂದು ಹಿಡಿ ಮ
ಣ್ಣಿನ ಕಟ್ಟೆಯೇ, ನನ್ನನ್ನು ಕ್ಷಮಿಸು! ನಾನು ಈ
ಕಟುಕರೆಡೆಯಲ್ಲಿ ವಿನಮ್ರತೆಯಿಂದಲೂ ಮಾನ್ಯತೆ
ಯಿಂದಲೂ ಇರುವೆನು. ಕಾಲವಾಹಿನಿಯಲ್ಲಿ ಹರಿ
ದ ಅತಿ ಸನ್ಮಾನ್ಯನೆನಿಸಿದ ವ್ಯಕ್ತಿಯೊಬ್ಬನ ಮೃ
ಣ್ಮಯ ನಾಶ ನೀನಾಗಿರುವೆ; ಇದಕ್ಕೆ ಅಮೂಲ್ಯವ
ದ ರಕ್ತವನ್ನು ಉಕ್ಕಿಸಲು ಕಾರಣರಾದವರಿ
ಗೆ ಧಿಕ್ಕಾರವಿರಲಿ! ನಸುಗೆಂಪಿನ ಮಾಣಿಕ್ಯ
ವರ್ಣದ ತುಟಿಗಳು ಮೌನತೆಯ ಬಾಯನ್ನು ತೆರೆ
ಯುತ್ತವಂತೆ ನಿನ್ನ ಮೈಯ ಗಾಯಗಳು ತೆರೆದಿರ
ಲು ಭವಿಷ್ಯವನ್ನು ಹೇಳುವ ನನ್ನ ನಾಲಗೆಯು
ತಪ್ಪಿದರೆ ಕ್ಷಮಿಸೆಂದು ಬೇಡುವೆನು. ಜನತೆಯ
ಅಂಗಾಂಗಗಳಲ್ಲಿ ಇಂತೆಸಗಿದವರಿಗೆ ಇಟ್ಟ
ಶಾಪವಾ ಸ್ಫೋಟಿಸುವುದು. ಜನರ ಕೋಪ ಸಂವಾದ
ಗಳು ಹೋರಾಡೊಳಗೆ ಕಾದಾಟಕ್ಕಿಳಿಗೊಂಡು, ಈ

ಗೊಂದಲ ಇಟಲಿಯ ಎಲ್ಲ ಕಡೆ ಹುಟ್ಟುವುದು; ಕೊಲೆ ಮ
ತ್ತು ನಾಶವು ಎಲ್ಲೆಲ್ಲಿ ಹೆಚ್ಚುವುದು; ಭಯಾನಕ
ಘಟನೆಗಳು ಸಂಭವಿಸುವುವು; ಯುದ್ಧದ ಭರದ
ಲ್ಲಿ ಜನಗಳು ಚಿಕ್ಕ ಕೂಸುಗಳನ್ನು ಸೀಳಿ ತುಂಡ
ರಿಸುವ ಕ್ರೂರತನವನು ಕಂಡು ತಾಯಂದಿರು ನ
ಗುತ್ತ ನಗುವುದನು ಬಿಟ್ಟು ಆಂಟಿ ಆದಂತಿ ನಾ
ಪಡೆಗಳು ಅನಿವಾರ್ಯ ದುರ್ಯೋಗಗಳಿಂದ ಸುತ್ತುವರ
ಗುವರು; ಕ್ಷೋಭೆ ಅನಾಯಕತೆಗಳು ಗ್ರೀಸ್ ದೇವ
ತೆ ಎಟನೆಸ ಕುಲ ಗುರ್ತಿಸುವ ಸೀಜರನ ಆತ್ಮ
ವನ್ನು ಉದ್ರೇಕಿಸಿ ಆ ಕೋಲಾಹಲದಲ್ಲಿ ತ
ನ್ನ ಸೇಡನ್ನು ತೀರಿಸಲು ಕಾತರಿಸುವುದು; ಯು
ದ್ಧದ ಕಾವಿನಿಂದಾಗಿ ಭೂಮಿಯಲ್ಲಿ ಜನರ ಶವ
ಗಳು ದುರ್ವಾಸನೆಯನ್ನು ಹರಡಲವನು ಆರಂಭಿಸಲು
ಸತ್ತು ಮಣ್ಣಾಗದ ಮಾಂಸವನು ಭಕ್ಷಿಸುವ ಜನರ
ಮೇಲಕ್ಕೆ ಆವೇಶವನು ಹೂಡಿಸಲು ಜನವು ವು
ನ್ನುಗ್ಗುತ್ತಿದ್ದಾರೆ!

(ಸೇವಕನ ಪ್ರವೇಶ)

ಓಕ್ಟೇವಿಯಸ್ ಸೀಜರನಿಗೆ ನೀನು ಸೇವಿಸುವಿ, ಅಲ್ಲವೆ?

ಸೇವಕ — ಹೌದು, ಮಾರ್ಕ್ ಆಂಟೊನಿ;

ಆಂಟೊನಿ — ರೋಮಿಗೆ ಬರಬೇಕೆಂದು ಸೀಜರನು ಅವನಿಗೆ ಬ
ರೆದಿದ್ದನು.

ಸೇವಕ — ಅವನಿಗೆ ಪತ್ರವು ದೊರೆತಿದೆ, ಅವನು ಬರುವನು;
ಈ ವಿಚಾರವನ್ನು ನಿನಗೆ ಖುದ್ದು ಹೇಳುವಂ
ತೆ ಅವನು ನನಗಂದನು.

(ಸೀಜರನ ಶವವನ್ನು ನೋಡಿ) ಓ ಸೀಜರ್!

ಆಂಟೊನಿ — ನಿನ್ನ ಹೃದಯವು ಉದಾತ್ತವಾಗಿದೆ; ಈಗ ಒಂ
ದೆಡೆ ಇದ್ದು ಅಳು! ಇದೀಗ ಉದ್ರೇಕವೆಂಬುದು
ಹತ್ತುವಂತೆ ನನಗನ್ನಿಸುವುದು; ದುಃಖದಿಂದಿರ
ನಿನ್ನ ಕಣ್ಣುಗಳಲ್ಲಿ ಕಣ್ಣೀರನು ನೋಡಲದೀ ನನ್ನ
ಕಂಬನಿಯೂ ಉಕ್ಕಲನುವಾಗಿದೆ.
ನಿನ್ನ ಪ್ರಭುವು ಬರುವನೇ?

ಸೇವಕ — ರೋಮಿನಿಂದ ಅವನು ಇಪ್ಪತ್ತು ಮೈಲುಗಳ
ದೂರದಲ್ಲಿ ಒಂದೆಡೆ ಈ ರಾತ್ರಿ ತಂಗುವನು.

ಆಂಟೊನಿ — ನೀನು ಬೇಗನೆ ಹಿಂದಿರುಗು. ನಡೆದುದನು, ಆವ

ನಿಗೆ ಹೇಳು. ಇಲ್ಲಿ ದು:ಖಕ್ಕೊಳಗಾದ ಅಪಾಯ
ಕ್ಕೊಳಗಾದ ರೋಮ್ ಇದೆ. ಓಕ್ಟೇವ್ಯಸನ ರಕ್ಷ
ಣೆಗೆ ಒಪ್ಪುವಂತ ರೋಮ್ ಇದಿನ್ನೂ ಇಲ್ಲ. ಬೇ
ಗನೆ ಹೋಗಿ ಹೀಗೆಂದು ಅವನಿಗನ್ನು! ಹೀಗೂ
ನಾನು ಈ ಮೃತದೇಹವನ್ನು ಬೀದಿ ಚೌಕಕ್ಕೆ
ತೆಗೆದುಕೊಂಡು ಹೋಗುವವರೆಗೆ ನೀನು ಇಲ್ಲಿಯೇ
ಸ್ವಲ್ಪ ಸಮಯ ಇರು; ಆ ಕಟುಕರದೀ ಕ್ರೂರ ಕೃ
ತ್ಯವನ್ನು ಹೇಗೆ ಕೈಕೊಂಡರೆಂದು ಜನರ್ಕ್ಕೆ ನಾ
ನು ಭಾಷಣವನ್ನು ಕೊಡುವೆನು; ಅದನ್ನನುಸರಿಸು
ತಲೆ ನೀನು ಎಲ್ಲ ವಿಷಯಗಳನ್ನು ಯುವಕ ಓ
ಕ್ಟೇವ್ಯಸನಿಗೆ ತಿಳಿಸು. ಇದೋ ನಿನ್ನ ಕೈಗಳನು
ಸ್ವಲ್ಪ ಇತ್ತ ಕೊಡು!

(ಸೀಸರನ ಶವದೊಡಗೂಡಿ ಹೋಗುವರು.)

ದೃಶ್ಯ ೨. ರೋಮ್.

(ಸಾರ್ವಜನಿಕ ಕೇಂದ್ರ; ಬ್ರೂಟಸ್, ಕ್ಯಾಸ್ಯಸ್ ಮತ್ತು ಪೌರಜನ ಗುಂಪು — ಪ್ರವೇಶ.)

ಜನರು — ನಾವು ತೃಪ್ತಿಹೊಂದುವೆವು; ನಮಗೆ ನಡೆದುದೆಲ್ಲ
ವನ್ನೂ ಒಪ್ಪಿಸಿರಿ!

ಬ್ರೂಟಸ್ — ಹಾಗಾದರೆ ನನ್ನೊಡನೆ ಬನ್ನಿರಿ; ಮಿತ್ರರೇ,
ನನನನ್ನು ಮಾತನ್ನಾಲಿಸಿ; ಕ್ಯಾಸಸನೆ, ನೀನು
ಆಚೆ ಇನ್ನೊಂದು ಬೀದಿಗೆ ಹೋಗು. ಜನವನ್ನು
ಎರಡು ಗುಂಪಾಗಿ ಬೇರ್ಪಡಿಸು. ನಾನು ಹೇಳುವು
ದನ್ನಾಲಿಸುವವರೆಲ್ಲ ಇಲ್ಲಿ ಇರಲಿ; ಕ್ಯಾಸ್ಯ
ಸನನು ಹಿಂಬಾಲಿಸುವವರು ಅವನೊಡನೆ ಹೋಗಿ!
ಸೀಸರನ ಮರಣಕ್ಕೆ ಕಾರಣಗಳನ್ನು ಬಹಿ
ರಂಗಪಡಿಸಲಾಗುವುದು!

೧ನೇ ನಾಗರಿಕ — ನಾನು ಬ್ರೂಟಸನು ಹೇಳುವುದನ್ನು ಕೇಳುವೆನು.

೨ನೇ ನಾಗರಿಕ — ನಾನು ಕ್ಯಾಸ್ಯಸನನ್ನು ಆಲಿಸಿ ಅವರಿಬ್ಬರ
ಹೇಳಿಕೆಗಳನು ತುಲನೆ ಮಾಡಿ ನೋಡುವೆನು. ಅವ
ರೇನನ್ನುವರೋ ಅದನು ಏಕನಿಷ್ಠೆಯಿಂದಾಲಿಸುವೆ —

(ಕ್ಯಾಸ್ಯಸನು ಕೆಲವು ಜನರೊಡನೆ ಹೋಗುವನು.)

(ಬ್ರೂಟಸನು ವೇದಿಕೆಯನ್ನೇರುವನು.)

3ನೇ ನಾಗರಿಕ — ಮಾನ್ಯ ಬ್ರೂಟಸನು ವೇದಿಕೆಯನ್ನೇರಿದ್ದಾನೆ; ಎಲ್ಲರೂ ಮೌನವಾಗಿರಿ!

ಬ್ರೂಟಸ್ — ಕಡೆವರೆಗೂ ತಾಳ್ಮೆಯಿಂದಿರಿ; ರೋಮನ್ನರೆ, ದೇಶೀಯರೆ ಮತ್ತು ಪ್ರಿಯ ಮಿತ್ರರೆ, ಆಲಿಸಿರಿ. ನಾನು ನನ್ನ ಕಾರ್ಯಕಾರಣವನ್ನು ಹೇಳುತ್ತೇನೆ; ಮೌನದಿಂದಿರಿ; ನನ್ನ ಮಾನ್ಯತೆಗಾಗಿ ನನ್ನಲ್ಲಿ ವಿಶ್ವಾಸವಿಡಿ; ಅಂತೆಯೇ ಗೌರವಿಸಿ; ನಿಮ್ಮ ಬುದ್ಧಿವಂತಿಕೆಯನ್ನು ಬಳಸಿ ನಿಮಗೆ ಒಪ್ಪಿದಂತೆ ನನ್ನನ್ನು ಆಕ್ಷೇಪಿಸಿ; ನಿಮ್ಮ ನ್ಯಾಯದರ್ಶನಕ್ಕಾಗಿ ನಿಮ್ಮ ಹಿತ ದೃಷ್ಟಿಯಿಂದ ಇದನ್ನು ಗಮನಿಸಿ; ಈ ಸಭಾಜನದಲ್ಲಿ ಸೀಸರನ ಪ್ರಿಯ ಮಿತ್ರನು ಯಾರಾದರೂ ಇದ್ದರೆ ನನಗೆ ಸೀಸರನಲ್ಲಿರುವ ಪ್ರೀತಿಯು ಅವನದಕ್ಕಿಂತ ಕಡಿಮೆಯೇನೂ ಇಲ್ಲವೆಂದು ನಾನನ್ನುತ್ತೇನೆ. ಹಾಗಾದರೆ ಬ್ರೂಟಸನು ಸೀಸರನ ಮೇಲೆ ಏಕೆ ಏರಿಹೋದನೆಂದು ಕೇಳಿದರೆ ಅದಕ್ಕೆ ನನ್ನ ಉತ್ತರ ಇದು: ನಾನು ಸೀಸರನನ್ನು ಕಡಿಮೆ ಪ್ರೀತಿಸಿದೆನೆಂದಲ್ಲ; ಮತ್ತೇಕೆ ಎಂದು ಕೇಳಿದರೆ ನಾನು ರೋಮನ್ನು ಹೆಚ್ಚಾಗಿ ಪ್ರೀತಿಸಿದೆನು. ನಿಮಗೆ ಸೀಸರನು ಬದುಕಿ ನೀವು ಗುಲಾಮರಂತೆ ಸಾಯುವುದು ಮೇಲೋ ಅಥವಾ ಸೀಸರನು ಸತ್ತು ನೀವೆಲ್ಲ ಸ್ವತಂತ್ರರಾಗಿ ಬದುಕುವುದು ಮೇಲೋ? ಸೀಸರನು ನನ್ನನ್ನು ಪ್ರೀತಿಸಿದುದರಿಂದ ಅವನಿಗಾಗಿಯೇ ನಾನು ಅಳುವೆನು; ಅವನು ಅದೃಷ್ಟವಂತನಾಗಿದ್ದುದರಿಂದ ನಾನು ಸಂತೋಷಿಸುವೆನು; ಅವನು ಪರಾಕ್ರಮಿಯೆನಿಸಿದ್ದುದರಿಂದ ನಾನು ಅವನನ್ನು ಗೌರವಿಸುವೆನು; ಆದರೆ ಅವನು ಅತ್ಯಾಶೆಗೆ ಒಳಗಾಗಿದ್ದ ಕಾರಣದಿಂದ ನಾನು ಅವನನ್ನು ಕೊಂದೆನು. ಅವನ ಪ್ರೀತಿಗಾಗಿ ಕಂಬನಿಯು ಇದೆ; ಅವನ ಅದೃಷ್ಟಕ್ಕೆ ಸಂತೃಪ್ತಿಯಿದೆ; ಅವನ ವೀರತನಕ್ಕೆ ಗೌರವವಿದೆ; ಮತ್ತು ಅವನ ಅತ್ಯಾಶೆಗಾಗಿ ಸಾವು ಇದೆ! ಸ್ವತಂತ್ರನಾಗಿಲ್ಲದೆಯೆ ಜೀವಿಸಲಿಚ್ಛಿಸುವ ಗುಲಾಮನು

ಇಲ್ಲಿ ಯಾರಿರುವನೆಂದು ಅನ್ನಿರಿ; ಅವನನ್ನು
ನಾನು ತಪ್ಪಾಗಿ ನಡೆಸಿದೆನೆ? ಒಬ್ಬ ರೋಮನನ್ನನ್ನೆಂ
ದು ಬಾಳಲು ಇಚ್ಛಿಸದ ಪಾಮರನು ಇಲ್ಲಿ ಯಾ
ರಿರುವನು? ಅವನಿಗಾಗಿ ಮಾತಾಡುವವರು ಯಾ
ರಾದರಿದ್ದರೆ ಈಗ ಮಾತಾಡಿ! ನಾನು ಅವ
ನಲ್ಲಿ ತಪ್ಪೆಸಗಿದೆನೆ? ತನ್ನ ದೇಶವನ್ನು ಪ್ರೀ
ತಿಸದ ಅಧಮನಾರು? ಅವನಲ್ಲಿ ಇದ್ದೀಗ ತ
ಪ್ಪೆಸಗಿದೆನೆ? ಹೇಳಿರಿ. ನಿಮಗೆ ಹೇಳಲಿಕ್ಕೆಂದೇ ನಿ
ದಿರು ಆ ಪ್ರತ್ಯುತ್ತರಕ್ಕೆ ಕಾಯುವೆನು!

ಜನರು — ಇಲ್ಲ, ಬ್ರೂಟಸ್, ಹೇಳಲಿಕ್ಕೆ ಏನೂ ಇಲ್ಲ.

ಬ್ರೂಟಸ್ — ಹಾಗಾದರೆ ನಾನು ಯಾರನ್ನೂ ದುಃಖಕ್ಕೊಳ
ಪಡಿಸಲಿಲ್ಲ. ಬ್ರೂಟಸ್‌ಗೆ ಬದ್ಧರು: ನೀವು ಏ
ನೆಸಗುವಿರೋ ಅದಕ್ಕಿಂತ ಹೆಚ್ಚಾಗಿ ನಾನು ಸೀ
ಜರನಿಗೇನೂ ಮಾಡಿಲ್ಲ. ರಾಜಧಾನಿಯ
ಲ್ಲಿ ಅವನ ಮೃತ್ಯುವಿನ ದಾಖಲೆ ಕ್ರಮವಾಗಿ ನಮೂದಿ
ಸಲ್ಪಟ್ಟಿದೆ. ಆದರಿಂದ ಅವನ ಖ್ಯಾತಿಗೇ
ನೂ ಕುಂದುಂಟಾಗಲಿಲ್ಲ; ಅವನು ತನ್ನ
ಯಾವ ತಪ್ಪಿಗಾಗಿ ಮಡಿದನೋ ಅದರಿಂದ ಅ
ವನ ಆ ಕೀರ್ತಿಗಳೂ ಹೆಚ್ಚಲಿಲ್ಲ. ಅವನ
ಮೃತದೇಹವಿಲ್ಲಿ ಮಾರ್ಕ್ ಅಂತೋನಿಯು ನಿಂತಾದ
ಜೊತೆಗೂಡಿ ಬರುತ್ತಿದೆ.

(ಅಂತೋನಿ ಮತ್ತಿತರರು ಸೀಜರ್‌ನ ಮೃತ
ದೇಹದೊಡನೆ ಪ್ರವೇಶಿಸುವರು.)

ಅವನು ಈ ಕೊಲೆಗೆ ಭಾಗಿಯಾಗದೆ ಇದ್ದರೂ
ಅದರ ಪರಿಣಾಮವಾಗಿ ದೊರಕುವ ಪ್ರಯೋ
ಜನವನ್ನು ಸರಕಾರದಲ್ಲಿ ತಮಗೆ ದೊರಕುವಂತೆ ಇರು
ವ ಒಂದು ಸ್ಥಾನವನ್ನು ಅವನಿಗೆ ದೊರಕುವುದು; ನಾನು
ರೋಮಿನ ಹಿತವನ್ನು ಗಣಿಸಿ ನನ್ನ ಪರಮಮಿತ್ರ
ನನ್ನು ಹೇಗೆ ಕೊಂದೆನೋ ಅದೇ ರೀತಿ ನನ್ನ ದೇ
ಶಕ್ಕಾಗಿ ನಾನು ಸಾಯುವುದು ಅತಿ ಅಗತ್ಯವು
ಎಂದು ನನಗೆ ತೋರಿದರೆ ನಾನು ಇದೇ ಖಡ್ಗ
ವನ್ನು ನನ್ನ ಮೇಲೆ ಉಪಯೋಗಿಸಿಕೊಳ್ಳುವೆನು—
ಎಂದು ಹೇಳಿ ನಾನೀಗ ಇಲ್ಲಿಂದ ಹೋಗುವೆನು.

ಜನರು — ಬಾಳಲಿ; ಬ್ರೂಟಸನೆ, ಬಾಳು!

829

1ನೇ ನಾಗರಿಕ – ವಿಜಯೋತ್ಸವದೊಡಗೂಡಿ ಅವನನ್ನು ಅವನ ಮನೆಯವರೆಗೂ ಕರೆದೊಯ್ಯುವ.

3ನೇ ನಾಗರಿಕ – ಅವನ ಪೂರ್ವಜರ ಪ್ರತಿಮೆಯೊಡನೆಯೇ ಅವನದೂ ಒಂದು ನಿಲ್ಲಿಸಲ್ಪಡಲಿ.

2ನೇ ನಾಗರಿಕ – ಅವನೇ ಸೀಸರನೆಂದೆನಿಸಲಿ!

4ನೇ ನಾಗರಿಕ – ಸೀಸರನ ಉತ್ತಮ ಗುಣಗಳೆಲ್ಲ ಬ್ರೂಟಸನಲ್ಲಿ ಇರಲಿ. ಅವನಿಗೆಯೇ ಕಿರೀಟವನ್ನು ಮುಡಿಸುವ.

1ನೇ ನಾಗರಿಕ – ಜಯಘೋಷದೊಡಗೂಡಿ ಅವನನ್ನು ಅವನ ಮನೆಯವರೆಗೂ ಬಿಡೋಣ.

ಬ್ರೂಟಸ್ – ನನ್ನ ದೇಶಬಾಂಧವರೇ,

3ನೇ ನಾಗರಿಕ – ಮೌನ, ಬ್ರೂಟಸನು ಮಾತಾಡುತ್ತಾನೆ,

1ನೇ ನಾಗರಿಕ – ಏಯ್, ಮೌನವಾಗಿರಿ.

ಬ್ರೂಟಸ್ – ಮಾನ್ಯ ದೇಶೀಯರೇ, ಇದೀಗ ನಾನೊಬ್ಬನೇ ಹೋಗುವೆನು. ನನಗಾಗಿ ನೀವು ಅಂತೋನಿಯೊಡನೆ ಇಲ್ಲಿಯೇ ಇರಿ; ಸೀಸರನ ಶವವನ್ನು ದಯೆಯಿಂದ ಕಾಣಿರಿ; ನಮ್ಮ ಅನುಮತಿಯಿಂದ, ಮತ್ತು ನಾವು ಅಂತೋನಿಯನ್ನು ಮಾತಾಡಲೊಪ್ಪಿದುದರಿಂದ ಅವನು ಸೀಸರನ ಪ್ರಖ್ಯಾತಿಯನ್ನು ಕುರಿತು ಹೇಳುವುದನ್ನು ಮೌನದಲಿ ಆಲಿಸಿರಿ. ಈಗ ನಾನೊಬ್ಬನೇ ಹೋಗುವೆನು. ಅಂತೋನಿಯು ಮಾತಾಡುವವರೆಗೆ ಬೇರೆ ಯಾರೂ ಹೋಗಬೇಡಿರೆಂದು ಕೇಳಿಕೊಳ್ಳುತ್ತೇನೆ.

(ಬ್ರೂಟಸನು ಹೋಗುವನು)

1ನೇ ನಾಗರಿಕ – ಓಹೋ ಇಲ್ಲೇ ಇರಿ. ಮಾರ್ಕ್ ಅಂತೋನಿಯು ಮಾತಾಡುವುದನ್ನು ಕೇಳುವ.

3ನೇ ನಾಗರಿಕ – ಅವನು ಆ ಸಾರ್ವಜನಿಕ ವೇದಿಕೆಯನ್ನು ಏರಲಿ. ಅವನೆನ್ನುವುದನ್ನು ನಾವು ಆಲಿಸುವ; ಮಾನ್ಯ ಅಂತೋನಿಯೇ, ಮೇಲೇರು.

ಅಂತೋನಿ – ಬ್ರೂಟಸನಿಗಾಗಿ ನಾನೀಗ ನಿಮ್ಮ ಹಂಗಿಗೊಳಗಾಗಿರುವೆನು.

(ಮೇಲೇರುವನು)

4ನೇ ನಾಗರಿಕ – ಬ್ರೂಟಸನ ವಿಷಯವಾಗಿ ಅವನು ಏನೆಂದನು?

3ನೇ ನಾಗರಿಕ – ಬ್ರೂಟಸನಿಗಾಗಿ ಅವನು ನಮ್ಮೆಲ್ಲರ ಹಂಗಿಗೊಳಗಾಗಿದ್ದೇನೆಂದು ಹೇಳುತ್ತಿದ್ದಾನೆ.

೪ನೇ ನಾಗರಿಕ — ಆವನು ಬ್ರೂಟಸನನ್ನು ಕುರಿತಾಗಿ ಅಪಕಾರದ ಮಾತುಗಳನ್ನು ಹೇಳದಿರುವುದೇ ಒಳ್ಳೆಯದು.

೧ನೇ ನಾಗರಿಕ — ಈ ಸೀಸರನೊಬ್ಬ ಕ್ರೂರಿಯಾಗಿದ್ದನು.

೨ನೇ ನಾಗರಿಕ — ನಿಜ, ಅದು ಸರಿ. ಆವನನ್ನು ಕಿತ್ತೊಗೆದುದರಿಂದ ರೋಮು ಉಳಿಯಿತು, ನಾವು ಬದುಕಿದೆವು.

೩ನೇ ನಾಗರಿಕ — ಮೌನವಾಗಿರಿ; ಆಂತೋನಿಯೇನನ್ನು ಹೇಳುವನೋ ಅದನ್ನು ನಾವು ಕೇಳುವ.

ಆಂತೋನಿ — ಸೌಜನ್ಯ ರೋಮನ್ನರೇ,

ಜನರು — ಓಹೋ, ಮೌನ. ಅವನೆನ್ನುವುದನ್ನು ಆಲಿಸುವ.

ಆಂತೋನಿ — ಸ್ನೇಹಿತರೇ, ರೋಮನರೇ, ದೇಶಬಾಂಧವರೇ, ತಮ್ಮ ಕಿವಿಗಳನ್ನು ನನ್ನೆಡೆಗೆ ಇಡಿ. ನಾನು ಸೀಸರನ ಶವದಂತ್ಯಸಂಸ್ಕಾರವನ್ನೆಸಗಲು ಬಂದಿನಲ್ಲದೆ ಆವನನ್ನು ಹೊಗಳಲಿಕ್ಕಲ್ಲ. ಜನರೆಸಗುತಿಹ ದುರಾಚಾರಗಳು ಆವರನಂತರವೂ ಇರುವವು; ಆದರೆ ಒಳ್ಳೆಯ ಗುಣಗಳು ಬಹುಮಟ್ಟಿಗೆ ಅವರ ಮೂಳೆಗಳೊಡನೆ ಹೂಗಿಯಲ್ಪಡುವವು. ಸೀಸರನನು ಕುರಿತೂ ಅಂತೆಯೇ ಆಗಲಿ. ಸೀಸರನು ಆತ್ಯಾಸೆಯಿಂದ ಕೂಡಿದ್ದನೆಂದು ಮಾನ್ಯ ಬ್ರೂಟಸನು ನಿಮಗಂದಿನನು. ಅಂತಾಗಿದ್ದರೆ ಅದು ಮಹಾಪರಾಧವೇ ಸರಿ; ಸೀಸರನು ಅದಕ್ಕೆ ತನ್ನ ರಕ್ತದಿಂದಲೇ ಉತ್ತರಿಸಿರುವನು. ಬ್ರೂಟಸನು ಸೌಜನ್ಯ ವ್ಯಕ್ತಿಯೇ ಹೌದು; ಅಂತೆಯೇ ಇತರರೂ ಸಹ! ಅವರೆಲ್ಲರೂ ಸೌಜನ್ಯರಿರೆ ಅವರ ಅನುಮತಿಯಂತೆ ನಾನು ಸೀಸರನ ಶವಸಂಸ್ಕಾರದ ವೇಳೆಗೆ ಮಾತಾಡಲು ಬಂದಿರುವೆನು. ಆದರೆ ಅವನಾಕಾಂಕ್ಷೆಯಿಂದ ಕೂಡಿದ್ದನೆಂದಾ ಬ್ರೂಟಸನು ಹೇಳುವನು; ಬ್ರೂಟಸನು ಸೌಜನ್ಯನಹ ವ್ಯಕ್ತಿಯೇ ಸರಿ; ಆವನು ತನ್ನ ದಿಗ್ವಿಜಯದ ಪರಿಣಾಮವೋ ಎಂಬಂತೆ ರೋಮಿಗೆ ಹಲವಾರು ಸೆರೆಯಾಳುಗಳನ್ನು ತಂದಾಗ ಅವರ ಬಿಡುಗಡೆಯ ಬಗ್ಗೆ ದೊರಕಿದ ಹಣವೆ ದೇಶದ ಬೊಕ್ಕಸವನ್ನು ತುಂಬಿಸಿತು; ಇದು ಸೀಸರನು ಅತ್ಯಾಸೆಯಿಂದ ಕೂಡಿದ್ದನೆಂದೆನಿಸುವುದೇ? ಬಡಜನವು ಹಸಿದು ಸೊರಗಿದುದನ್ನು ಕಂಡಾಗ

ಸೀಸ್ಸರನು ಅತ್ತನು; ಅದು ಅಂತಾದರೆ ಅತ್ಯಾ
ಶೆಯೆಂಬುದು ಬಹು ಗಟ್ಟಿ ವಸ್ತುವಿಂದ ಮಾಡಿದ್ದಿ
ರಬೇಕು! ಅದೇನಿದ್ದರೂ ಬ್ರೂಟಸನು ಸೀಸ್ಸ
ರನನು ಅತ್ಯಾಶೆಯಿಂದ ಕೊಂದಿದ್ದಾನೆಂದು
ಹೇಳುತ್ತಾನೆ. ಹಾಗಿದ್ದರೂ ಬ್ರೂಟಸನು ಮಾನ್ಯ
ನೇ ಹೌದು. ನೀವೆಲ್ಲರೂ ನೋಡಿದಿರಿ; ಅಂದು
ಲೂಪರ್ಕಲ್ ಹಬ್ಬದ ದಿನ ನಾನೇ ಮೂರು ಬಾ
ರಿ ಅವನಿಗೆ ಕಿರೀಟವನ್ನು ಒಪ್ಪಿಸಿದೆನು; ಮೂರು
ಬಾರಿಯೂ ಅವನದನ್ನು ತಿರಸ್ಕರಿಸಿದನು. ಇ
ದು ಅತ್ಯಾಶೆಯೇ? ಅಂತು ಅವನು ಅತ್ಯಾಶೆಯಿಂ
ದ ಕೊಂದಿದ್ದನೆಂದು ಬ್ರೂಟಸನು ಹೇಳುತ್ತಾನೆ.
ನಾನಿಲ್ಲಿ ನನಗೆ ತಿಳಿದಿರುವುದನ್ನು ಹೇಳಿದೆ
ನಲ್ಲದೆ ಬ್ರೂಟಸನು ಹೇಳಿದುದನ್ನು ಒಪ್ಪುವು
ದಿಲ್ಲವೆಂದು ಹೇಳುತ್ತಿಲ್ಲ. ಕಾರಣವಿಲ್ಲ
ದೆ ನೀವೆಲ್ಲರೂ ಅಂದು ಸೀಸ್ಸರನನ್ನು ಪ್ರೀ
ತಿಸುತ್ತಿಲ್ಲ. ಹಾಗಾದರೆ ಇಂದೀಗ ಅಂತಹ
ಗದಿರುತ್ತೀರಿ, ಸಂತಾಪವನ್ನು ಸೂಚಿಸದೆ
ಇರುತ್ತೀರಿ ಏನು ಕಾರಣ? ಎಲೈ ನ್ಯಾಯದೇ
ವತೆಯೇ, ನೀನು ಪಶುಪ್ರಾಯರಾದ ಜೀವಿಗಳ
ಹೃದಯದೊಳಗಿಂದ ತೊಲಗಿರುವೆ. ಜನರು ತಮ್ಮ
ಬುದ್ಧಿ ಬಲವನ್ನು ಕಳೆದುಕೊಂಡಿರುವರು; ಕ್ಷಮಿ
ಸಿ. ನನ್ನ ಹೃದಯವು ಸೀಸ್ಸರನೊಡನೆ ಈ ಶ
ವದ ಪೆಟ್ಟಿಗೆಯೊಳಗಿದೆ. ಅದು ನನ್ನ ಬಳಿ ಬರುವ
ವರೆಗೂ ನಾನು ಕಾಯಬೇಕಾಗಿದೆ.

೧ನೇ ನಾಗರಿಕ — ಅವನು ಹೇಳುವುದರಲ್ಲಿ ತುಂಬಾ ನ್ಯಾಯವಿದೆ
ಯೆಂದು ನನಗನ್ನಿಸುತ್ತದೆ.

೨ನೇ ನಾಗರಿಕ — ಆದರೂ ನೀನು ವಿಷಯವನ್ನು ಪರಾಮರ್ಶಿಸಿ
ನೋಡಿದರೆ ಸೀಸ್ಸರನಲ್ಲಿ ಸಾಕಷ್ಟು ತಪ್ಪು ಇತ್ತು!

೩ನೇ ನಾಗರಿಕ — ಅವನಿಗೆ, ಅಧಿಕಾರಿಗಳು, ಇದ್ದರೇ?
ಅವನ ಬದಲಾಗಿ ಪರಿಸ್ಥಿತಿಯು ಇನ್ನೂ ಕೆಡುವು
ದೆಂದು ನಾನು ಹೆದರುತ್ತಿದ್ದೇನೆ.

೪ನೇ ನಾಗರಿಕ — ಅವನಂದುದನ್ನು ಕೇಳಿದಿರೇ? ಸೀಸ್ಸರನು ಆ
ಕಿರೀಟವನ್ನು ಸ್ವೀಕರಿಸದೆಯೆ ಇದ್ದನು; ಆದು
ದರಿಂದ ಅವನು ಆಶೆಯಿಂದ ಕೂಡಿದವನು

ಇಲ್ಲವೆಂದು ಖಂಡಿತವಾಗಿ ಹೇಳಬಹುದು.

೧ನೇ ನಾಗರಿಕ – ಹಾಗೆ ಇದೆಯೆಂದಾದರೆ ಕೆಲವರು ತುಂಬ ತೊಂದರೆಗೊಳಗಾಗಬಹುದು.

೨ನೇ ನಾಗರಿಕ – ಪಾಪ, ಅವನ ಕಣ್ಣುಗಳು ಅತ್ತತ್ತು ಬೆಂಕಿಯಂತೆ ಕೆಂಪಾಗಿವೆ,

೩ನೇ ನಾಗರಿಕ – ಅಂತೋನಿಗೆ ಸಮನಾದ ಸನ್ಮಾನ್ಯ ವ್ಯಕ್ತಿ ರೋಮಿನಲ್ಲಿ ಇನ್ನೊಬ್ಬನಿಲ್ಲ.

೪ನೇ ನಾಗರಿಕ – ಈಗ ನೋಡಿರಿ, ಅವನು ಪುನಃ ಮಾತಾಡಲು ಪ್ರಾರಂಭಿಸುವನು.

ಅಂತೋನಿ – ಅಂತಾದರೂ ನಿನ್ನೆ ಸೀಸರನ ಮಾತು ಲೋಕವಿರೋಧವನ್ನಿದಿರಿಸಬಹುದಿತ್ತು; ಈಗ ಅವನು ಇಲ್ಲಿ ಬಿದ್ದಿರುವನು; ಅವನನ್ನು ಗೌರವದಿಂದ ಕಾಣುವ ಶಕ್ತಿ, ಬಡಜನವು ಸಹ ಯಾರೂ ಇಲ್ಲ; ಹಾ ಪ್ರಭುಗಳೇ, ನಾನೀಗ ನಿಮ್ಮನ್ನು ದಂಗೆಯನ್ನು ಎಬ್ಬಿಸುವುದೋ ಎಂಬಷ್ಟರ ಮಟ್ಟಿಗೆ ನಿಮ್ಮ ಹೃದಯವನ್ನು, ಮನಸ್ಸನ್ನು, ಕಲಕಿದರೆ ನೀವೆಲ್ಲ ಸನ್ಮಾನ್ಯರೆಂದು ತಿಳಿದಿರುವ ಆ ಬ್ರೂಟಸನಿಗೆ ಅಹಿತವನ್ನು ಬಗೆದಂತೆ, ಕ್ಯಾಸಿಯಸನಿಗೆ ತಪ್ಪೆಸಗಿದಂತೆ ಆಗುವುದು; ಸನ್ಮಾನ್ಯರೆನಿಸುವ ಅವರಲ್ಲಿ ನಾನು ತಪ್ಪೆಸಗಲಿಚ್ಛಿಸೆನು; ಬದಲಾಗಿ ಇದೋ ಈ ಸತ್ತವನು, ನಾನು, ಮತ್ತೂ ನೀವು, ತಪ್ಪುಗಾರರು ಎಂದು ಹೇಳಲಿಚ್ಛಿಸುವೆನು; ಸೀಸರನ ಮನೆಯ ಒಳಕೋಣೆಯಲ್ಲಿ ಮುದ್ರೆ ಹಾಕಿದ ಚರ್ಮದ ಓಲೆಯೊಂದು ದೊರೆಯಿತು; ಇದು ಅವನ ಮರಣಶಾಸನ! ಈ ಸ್ತುತಿ ಪತ್ರವೇನೆಂದು ಜನಸಾಮಾನ್ಯರು ತಿಳಿಯಲಿ. ನನ್ನನ್ನು ಕ್ಷಮಿಸಿರಿ. ನಾನು ಅದನ್ನು ಓದುವುದಕ್ಕೆ ಇಚ್ಛಿಸೆನು; ಜನವು ಶವವಾಗಿ ಬಿದ್ದ ಸೀಸರನ ಗಾಯಗಳನ್ನು ಚುಂಬಿಸಲಿ. ಅವರು ಕರವಸ್ತ್ರಗಳನ್ನು ಅವನ ಪವಿತ್ರ ರಕ್ತದಲ್ಲಿ ತೋಯಿಸುತ್ತಲಂತೆಯೆ ಅವನ ಸ್ಮರಣಾರ್ಥವಾಗಿ ಅವನ ಒಂದೊಂದು ಕೂದಲನು ತೆಗೆಯಲಿ; ಸಾಯುವಮುನ್ನ ಇದನ್ನೆಲ್ಲಾ ತಮ್ಮ ಮೃತ್ಯುಪತ್ರಗಳಲ್ಲಿ ಅವರ ಸಂತತಿಯ ಪೀಳಿಗೆಗಿತ್ತ ಕೊಡುಗೆಯೆಂದು ಹೇಳಲಿ!

೪ನೇ ನಾಗರಿಕ- ಮರಣಶಾಸನವನ್ನು ನಾವು ತಿಳಿಯಬಯಸು
ವೆವು, ಅದನ್ನೋದು ಮಾರ್ಕ ಆಂತೋನಿ!

ಜನರು — ಸ್ಮೃತಿಪತ್ರ, ಮರಣಪತ್ರ, ಸೀಸರನ ಪತ್ರವ
ನು ಓದು; ಕೇಳುವೆವು.

ಆಂತೋನಿ — ಸಭ್ಯ ಮಿತ್ರರೇ, ತಾಳ್ಮೆಯಿಂದಿರಿ. ಅದನ್ನು ನಾ
ನೋದಬಾರದು. ಸೀಸರನು ನಿಮ್ಮನ್ನೆಷ್ಟು
ಪ್ರೀತಿಸುತ್ತಿದ್ದನೆಂಬುದನು ನೀವು ತಿಳಿಯುವುದು ಯು
ಕ್ತವಲ್ಲ. ಇದೀಗ ನೀವು ಮರವಲ್ಲ, ಕಲ್ಲೂ
ಅಲ್ಲ. ಸೀಸರನ ಸ್ಮೃತಿಪತ್ರವನು ನೀವು ತಿಳಿ
ದಾಗ ಅದು ನಿಮ್ಮನ್ನು ರೇಗಿಸಬಹುದು; ನಿಮ್ಮ
ನ್ನೆಲ್ಲ ಹುಚ್ಚರಾಗಿಸಬಹುದು; ನೀವು ಅವನ ಉತ್ತ
ರಾಧಿಕಾರಿಗಳೆಂದು ನಿಮಗೆ ಗೊತ್ತಿಲ್ಲದಿರು
ವುದೇ ಒಳ್ಳೆಯದು! ಅದೇನೆಂದು ನಿಮಗೆ ಗೊತ್ತಾ
ದರೂ, ಹೋ, ಅದರಿಂದ ಆಗತಕ್ಕದ್ದು ಏನು!

೪ನೇ ನಾಗರಿಕ — ಆ ಮರಣಪತ್ರವನು ಓದು. ನಾವು ಕೇಳು
ತ್ತೇವೆ; ಹೋ ಆಂತೋನಿಯೇ, ನೀನು ಆ ಸ್ಮೃತಿಪ
ತ್ರವನು ಓದು; ಸೀಸರನ ಕಡೇ ಪತ್ರವನ್ನು!

ಆಂತೋನಿ — ನೀವು ತಾಳ್ಮೆಯಿಂದಿರುವಿರೇ? ಸ್ವಲ್ಪ ಸಮಯ ಇ
ಲ್ಲಿ ಇರುವಿರಾ? ಆ ವಿಷಯ ನಿಮಗನ್ನುಡಿದೆನಲ
ನಾನು ಆಲೋಚಿಸಿದಕ್ಕಿಂತ ಹೆಚ್ಚು ಮಾತಾ
ಡಿದೆನು. ಆದರೆ ಯಾರ ಖಡ್ಗಗಳು ಸೀಸರನ
ಮೈಯನ್ನು ತಿವಿದುವೋ ಆ ಮಾನ್ಯರಿಗೆ ನಾನು
ತಪ್ಪೆಸಗುವೆನೋ ಎಂದು ಹೆದರುತ್ತೇನೆ; ನಾ
ನು ಹೆದರುತ್ತೇನೆ!

೪ನೇ ನಾಗರಿಕ — ಅವರು ದ್ರೋಹಿಗಳು; ಮಾನ್ಯರಂತೆ, ಮಾನ್ಯರು!

ಜನರು — ಮರಣಶಾಸನ; ಸ್ಮೃತಿಪತ್ರ!

೨ನೇ ನಾಗರಿಕ — ಅವರು ಮೋಸಗಾರರು; ಕೊಲೆಗಾರರು; ಮರಣ
ಪತ್ರವನ್ನು ಓದು, ಸ್ಮೃತಿ ಪತ್ರ!

ಆಂತೋನಿ — ನೀವು ಒತ್ತಾಯಿಸುತ್ತೀರಿ. ಹಾಗಾದ
ರೆ ಈ ಮರಣಶಾಸನವನ್ನು ಓದುವುದೇ? ಸರಿ,
ಸೀಸರನ ಕಳೇಬರ ಸುತ್ತ ಚಕ್ರಾಕಾರ
ದಲ್ಲಿ ನಿಲ್ಲಿರಿ. ನಾನು ಈ ಮರಣಪತ್ರವನ್ನು
ಬರೆದ ಅವನನ್ನು ನಿಮಗೆ ತೋರಿಸುವೆನು. ನಾನು
ಕೆಳಗಿಳಿಯಲೇ? ನೀವು ನನಗೆ ಅನುಮತಿ ಕೊಡುವಿರೇ?

ಜನರು — ಕೆಳಗೆ ಇಳಿ;
೨ನೇ ನಾಗರಿಕ — ಕೆಳಗೆ ಬಾ. (ಅಂತೋನಿ ಕೆಳಗೆ ಬರುವನು)
೩ನೇ ನಾಗರಿಕ — ನಿನಗೆ ಸಮ್ಮತಿ ಸಿಕ್ಕಿದೆ.
೪ನೇ ನಾಗರಿಕ — ಒಂದು ಸುತ್ತು ಹಾಕಿ; ಸುತ್ತಲೂ ನಿಲ್ಲಿ.
೧ನೇ ನಾಗರಿಕ — ಶವದ ಪೆಟ್ಟಿಗೆಯಿಂದ ಆಚೆ ನಿಲ್ಲಿ; ಶವದಿಂದ ದೂರ ಸರಿಯಿರಿ.
೨ನೇ ನಾಗರಿಕ — ಅಂತೋನಿಗೆ ಜಾಗ ಕೊಡಿ; ಸನ್ಮಾನ್ಯ ಅಂತೋನಿಗೆ.
ಅಂತೋನಿ — ಮುಂದೊತ್ತಬೇಡಿ; ನನ್ನ ಬಳಿ ಬಾರದಿರಿ; ದೂರವಿರಿ, ದೂರ!
ಜನರು — ಹಿಂದಕ್ಕೆ ಹೋಗಿ; ಜಾಗ! ದಯಮಾಡಿ ಹಿಂದಕ್ಕೆ!
ಅಂತೋನಿ — ನಿಮ್ಮಲ್ಲಿ ಕಣ್ಣೀರು ಇದ್ದರೆ ಅದನ್ನು ಈಗ ಸುರಿಸಲು ಸಿದ್ಧರಾಗಿ. ಈ ಅಂಗವಸ್ತ್ರ, ಇದನ್ನು ಕಂಡಿರುವಿರಷ್ಟೆ! ಸೀಸರನು ಅದನ್ನು ಮೊದಲ ಸಲ ತೊಟ್ಟ ದಿನ ನನಗೆ ನೆನಪಿದೆ. ಅದೊಂದು ಬೇಸಗೆ ಸಂಜೆ ಸಮಯ; ತನ್ನ ಶಿಬಿರದಲ್ಲಿ ಅವನು ಹಿಂದೆ ನರ್ವಿಯಾಯಿ ಗಾಲ್ ಜನವನ್ನು ಸೋಲಿಸಿದ ದಿನವು ಅದು! ನೋಡಿರಿ; ಕ್ಯಾಸ್ಸಿಯಸನ ಕಠಾರಿಯು ಇಲ್ಲಿ ಈ ಭಾಗದಾಗಿ ಹರಿಯಿತು; ಆ ಮತ್ಸರಿ ಕ್ಯಾಸ್ಕನು ಅದೆಷ್ಟು ಆಳಕ್ಕೆ ಇಲ್ಲಿ ತಿವಿದುದರ ಬಿರುಕು ಎಷ್ಟು ದೊಡ್ಡದಿದೆ! ಈ ಭಾಗದಲ್ಲಿ ಜನಪ್ರಿಯ ಬ್ರೂಟಸನು ತಿವಿದನು. ತನ್ನ ಅದಮ್ಯ ಉಕ್ಕನ್ನು ಹಿಂದಕ್ಕೆ ಎಳೆದಾಗ ಸೀಸರನ ರಕ್ತ, ಅದನ್ನೇ ಗತಾನುಗತವಾಗಿ ಬಾಗಿಲಿನ ಹೊರಗೆ ಓಡುವ ರೀತಿಯಲ್ಲಿ, ಬುದುಬುದನೆ ಹರಿದಿದೆ, ಇದೋ ನೋಡಿರಿ. ಬ್ರೂಟಸನ ನಿರ್ದಯತೆಯಿಂದ ಅವನನ್ನು ಕೆಡವಿದನೋ ಅಥವಾ ಅಲ್ಲವೋ, ನೀವು ತಿಳಿದಂತೆ ಬ್ರೂಟಸನು ಸೀಸರನ ರಕ್ಷಕನ ರೀತಿಯಲ್ಲಿ ಇದ್ದನು. ಎಲೈ ದೇವತೆಗಳಿರಾ, ನಿರ್ಣಯಿಸಿರಿ; ಅದೆಷ್ಟು ಸ್ನೇಹದಿಂದ ಸೀಸರನು ಅವನನ್ನು ಕಂಡಿದ್ದನು! ನೋಡಿರಿ, ಇದು ಎಲ್ಲದಕ್ಕಿಂತ ಬಹು ಕಠೋರವಾದ ಇರಿತವಾಗಿದೆ. ದ್ರೋಹಿಗಳ ತೋಳುಗಳಿಗಿಂತ ಬಲವತ್ತಾದ ಕೃತಘ್ನತೆಯು ಜೋರಿನಿಂದ ತನ್ನನ್ನು ತಿವಿಯುತ್ತಿರುವುದನ್ನು ಕಂಡಾಗ ಆ ಮಹಾ ಸೀಸ

ರನನು ನಿರ್ವಿಣ್ಣಯತ್ವನನ್ನಾಗಿ ಮಾಡಿತು; ಅವನ
ಕೆಚ್ಚೆದೆಯನು ಒಡೆಯಿತು. ರಕ್ತ ಧಾರಾಕಾರ
ವಾಗಿ ಸುರಿಯಲು ತನ್ನ ಅಂಗವಸ್ತ್ರದಿಂದ ಮು
ಖವನು ಮುಚ್ಚುತಲಿ ಪಾಂಪೇ ವಿಗ್ರಹದ ಕಾಲ್ಗೆ
ನ್ನೇ ವೀರ ಸೀಸರನು ಬಿದ್ದನು. ಆಹಾ, ನನ್ನ
ದೇಶಬಾಂಧವರೆ, ಅದು ಎಂಥ ಬೀಳುವಿಕೆಯಿಂ
ದಾಗಿ ರಕ್ತಮಿಶ್ರಿತವೆನಿಸಿದ ದ್ರೋಹವೆ ನಮ್ಮೆ
ಡೆಗೆ ಹರಿಯಿತು ನಾನು ನೀವು ನಾವೆಲ್ಲರು ಬಿದ್ದೆ
ವು. ಓಹೋ, ಈಗ ಕಂಬನಿಯನು ಸುರಿಸಿರಿ. ನಿಮ್ಮ
ಅಂತಃಕರಣ ಪ್ರಭಾವವನು ನೋಡುವೆನು. ದಯಾ
ಶೀಲಗಳಿವು ಸಂತೃಪ್ತಿಕರವಾದ ಕಣ್ಣೀರ ಹನಿಗ
ಳು ಇವು! ನಮ್ಮ ಸೀಸರನ ಹೊದಿಕೆಯು ಹರಿದು ಗಾ
ಯಗೊಂಡುದನು ನೋಡಿದ ನೀವು ಅಳುವಿರೇನು? ಇ
ದೋ ಇಲ್ಲಿ ನೋಡಿರಿ. ನಿಮಗೆ ಕಾಣುವಂತೆ ಅವ
ನು ದ್ರೋಹಿಗಳಿಂದೆಯೇ ಕೆಟ್ಟು ಬಿದ್ದಿರುವನು!

೧ನೇ ನಾಗರಿಕ — ಹಾ, ಎಂಥ ಶೋಚನೀಯ ದೃಶ್ಯ!

೨ನೇ ನಾಗರಿಕ — ಹೋ, ಸನ್ಮಾನ್ಯ ಸೀಸರನೆ,

೩ನೇ ನಾಗರಿಕ — ಆಹಾ, ದುರ್ದಿನವೆ!

೪ನೇ ನಾಗರಿಕ — ಎಲೈ ದ್ರೋಹಿಗಳೆ, ಘಾತುಕರೆ,

೧ನೇ ನಾಗರಿಕ — ಹೋ, ಎಂಥಾ ರಕ್ತಮಯ ನೋಟ.

೨ನೇ ನಾಗರಿಕ — ನಮ್ಮ ಸೇಡು ತೀರಿಸಲ್ಪಡುವುದು.
ತಿರುಗಿರಿ, ಸುಡಿರಿ, ಕಿಚ್ಚು ಹಾಕಿರಿ, ಕೊಲ್ಲಿರಿ,
ಮಡಿಸಿರಿ, ಒಬ್ಬನೇ ಒಬ್ಬ ದ್ರೋಹಿಯೂ ಬದುಕದಿರಲಿ.

ಅಂತೋನಿ — ದೇಶೀಯರೆ, ತಾಳ್ಮೆಯಿಂದಿರಿ.

೧ನೇ ನಾಗರಿಕ — ಮೌನವಿರಿ, ಯಾರಲ್ಲಿ? ಮಾನ್ಯ ಅಂತೋನಿಯು ಹೇ
ಳುವುದನ್ನು ಕೇಳಿರಿ.

೨ನೇ ನಾಗರಿಕ — ನಾವು ಅವನನ್ನುಡಿದುದನು ಕೇಳುವೆವು; ಅವನನ್ನು
ಹಿಂಬಾಲಿಸುವೆವು; ನಾವು ಅವನೊಡನೆಯೆ ಸಾಯುವೆವು.

ಅಂತೋನಿ — ಪ್ರಿಯ ಮಿತ್ರರೆ, ಪರಮಾಪ್ತ ಮಿತ್ರರೆ, ನಾನು ನಿ
ಮ್ಮನ್ನು ಥಟ್ಟನೆ ಅಂಥ ಉದ್ವೇಗದ ಹೋರಾ
ಟಕ್ಕೆ ಕೆರಳಿಸೆನು. ಇಂಥ ಕೃತ್ಯವನು ಕೈಗೊಂ
ಡ ಈ ಜನವು ಮಾನ್ಯರು. ಇಂತೆಸಗಲು ಅವರಿಗೆ
ಅವನಲ್ಲಿ ವೈಯಕ್ತಿಕವಾಗಿ ಅದೇನು ದ್ವೇಷ
ವಿತ್ತೋ ಅರಿಯೆನು; ಅವರು ಬಲ್ಲವರು. ಸನ್ಮಾನ್ಯ

ರು; ಆದುದರಿಂದ ನಿಸ್ಸಂದೇಹವಾಗಿಯೂ ಅವರು ನಿಮಗೆ ಸಕಾರಣ ಸಹಿತ ವಿವರಿಸುವರು; ಮಿತ್ರರೇ, ನಾನು ನಿಮ್ಮ ಹೃದಯವನ್ನು ಸೂರೆಗೊಳ್ಳಲು ಬರಲಿಲ್ಲ; ಬ್ರೂಟಸನ ಹಾಗೆ ನಾನು ವಾಗ್ಮಿಯೂ ಅಲ್ಲ. ನಿಮಗೆ ಗೊತ್ತಿರುವಂತೆ ನಾನು ನನ್ನ ಗೆಳೆಯನನ್ನು ಅಭಿಮಾನಿಸುವ ಮತ್ತು ನಿಷ್ಕಪಟನು ನಿಷ್ಠುರತೆಯಿಂ ಹೇಳುವ ಒಬ್ಬ ವ್ಯಕ್ತಿ! ಸೀಸರನ ವಿಚಾರವಾಗಿ ನನಗೆ ಬಹಿರಂಗ ಮಾತಾಡಲು ಅವರು ಅನುಮತಿಯನಿತ್ತರೆಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ನಾನಾದರೋ ಮಾತುಗಾರಿಕೆ, ತಕ್ಕ ಪದವ್ಯುತ್ಪತ್ತಿ, ಅರ್ಹತೆ, ವಾಗ್ಝರಿ, ವಾಗ್ಬಲ, ವಾಕ್ಚಾತುರ್ಯಗಳಿಂದ ಜನರನು ಉದ್ರೇಕಗೊಳಿಸಲು ತಿಳಿಯೆನು. ನಾನೇನೊ ನಿಮಗೆಲ್ಲ ತಿಳಿದುದನು ನೇರನೆ ಹೇಳುವೆನು. ಪ್ರಿಯ ಸೀಸರನ ಗಾಯಗಳು ಮತ್ತು ಅವುಗಳ ಮೂಕವಾದ ಬಾಯಿಗಳನ್ನು ನಿಮಗೆ ತೋರಿಸುವೆನು; ನನ್ನ ಪರವಾಗಿ ಅವುಗಳಿಗೆ ಮಾತಾಡಲು ಹೇಳುವೆನು; ನಾನು ಬ್ರೂಟಸನೆ ಆಗಿದ್ದು ಬ್ರೂಟಸನು ಆಂತೋನಿಯೆ ಆಗಿದ್ದರೆ ಆ ಅಂತೋನಿಯು ನಿಮ್ಮನೆಲ್ಲ ಕೆರಳಿಸಿ ಉದ್ರೇಕಗೊಳಿಸಿ ಸೀಸರನ ಪ್ರತಿಯೊಂದು ಗಾಯಕ್ಕೂ ಒಂದೊಂದು ನಾಲಗೆಯನಿತ್ತು, ಆಗಲಾ ರೋಮನ ಎಲ್ಲ ಕಲ್ಲುಗಳು ಸಹ ಕ್ಷೋಭನಗೊಂಡು ಅವುಗಳು ದಂಗೆಯೆಬ್ಬಿಸುವಂತಾಗುತ್ತಿತ್ತು.

ಜನರು — ನಾವು ಮೇಲೆದ್ದು ಹೋರಾಡುವ.

೧ನೇ ನಾಗರಿಕ — ನಾವು ಬ್ರೂಟಸನ ಮನೆಯನ್ನು ಸುಟ್ಟುಹಾಕುವ.

೨ನೇ ನಾಗರಿಕ — ಹಾಗಾದರೆ ನಡೆಯಿರಿ, ಬನ್ನಿರಿ, ಪಿತೂರಿಗಾರರನ್ನು ಹುಡುಕಿರಿ.

ಆಂತೋನಿ — ದೇಶೀಯರೆ, ಆಲಿಸಿರಿ; ನಾನೇನು ಹೇಳುವೆನೋ ಕೇಳಿರಿ.

ಜನರು — ಹೋ, ಶಾಂತವಾಗಿರಿ; ಆಂತೋನಿಯು ಮಾತಾಡುತ್ತಾನೆ; ಸನ್ಮಾನ್ಯ ಆಂತೋನಿ.

ಆಂತೋನಿ — ಸ್ನೇಹಿತರೆ, ಏಕೆ? ನೀವೇನು ಮಾಡಬೇಕೆಂಬುದನರಿಯದೆಯೆ ನೀವು ಹೊರಡುವಿರಿ. ಸೀಸರ

ನು ಯಾವುದಕ್ಕಾಗಿ ನಿಮ್ಮ ಪ್ರೀತಿಗೆ ಪಾತ್ರನಾದನು? ಅಹಾ, ಅದು ನಿಮಗೆ ಗೊತ್ತಿಲ್ಲ; ಹಾಗಾದರೆ ನಾನೆ ನಿಮಗದನ್ನು ಹೇಳಬೇಕು; ಅವನ ಮರಣಪತ್ರವನ್ನು ಕುರಿತಾಗಿ ನಾನು ಹೇಳಿದುದು ಮರೆತುಹೋದಿರಿ.

ಜನರು — ಅದು ಪೂರ್ತಿ ನಿಜ. ಹೌದು, ಮೃತ್ಯುಪತ್ರ! ಸ್ವಲ್ಪ ತಾಳಿರಿ; ಮರಣಪತ್ರ ವಿಷಯವೇನೆಂದು ತಿಳಿಯುವ.

ಆಂತೋನಿ — ಇಲ್ಲಿ ಇದೆ. ಸೀಸರನ ಮುದ್ರೆಯಿಂದೊಡಗೂಡಿ ಈ ಪತ್ರದಲ್ಲಿ ಇದೆ. ರೋಮಿನ ಪ್ರತಿಯೊಬ್ಬ ನಾಗರಿಕನಿಗೆ, ಬಹುಜನಕ್ಕೆ ಅವನು ಎಪ್ಪತ್ತೈದು ಬೆಳ್ಳಿಯ ಗ್ರೀಕ್ ನಾಣ್ಯಗಳನು ಕೊಡುತ್ತಿದ್ದಾನೆ!

೨ನೇ ನಾಗರಿಕ — ಹೋ, ಉದಾತ್ತ ಸೀಸರನೆ; ಅವನ ಸಾವಿನ ಸೇಡು ನಾವು ತೀರಿಸುವೆವು.

೩ನೇ ನಾಗರಿಕ — ಓ ರಾಜಶ್ರೀಯುತ ಸೀಸರನೆ,

ಆಂತೋನಿ — ನಾನು ಹೇಳುವುದನ್ನು ತಾಳ್ಮೆಯಿಂದ ಕೇಳಿರಿ.

ಜನರು — ಓಹೋ ಮೌನವಾಗಿರಿ, ಮೌನ!

ಆಂತೋನಿ — ಅದಕ್ಕೇ ಅಲ್ಲದೆ ಅವನ ಬಾಗವೆಲ್ಲವನು ನಿಮಗೆ ಬಿಟ್ಟಿರುವನು. ಅವನ ಖಾಸಗಿ ಉದ್ಯಾನ, ಟೈಬರ್ ನದಿಯ ಈಚೆ ಹೊಸದಾಗಿ ನೆಟ್ಟಿರುವುದೆಲ್ಲವನು ಉಪವನಗಳು ವಿಹಾರಸ್ಥಳಗಳನು ನಿಮಗೆ ನಿಮ್ಮ ಅನಂತರದ ಜನಕೆ ಎಲ ಕಾಲಕ್ಕೆ ಎಂಬಂತೆ ಬಿಟ್ಟಿರುವನು. ಅವನೇ ಸೀಸರನು! ಅವನಂತೆ ಇನ್ನೊಬ್ಬನು ಯಾವಾಗ ಕಾಣಸಿಕ್ಕುವನು?

೧ನೇ ನಾಗರಿಕ — ಇಲ್ಲ, ಎಂದೂ ಇಲ್ಲ; ಬನ್ನಿ, ಬನ್ನಿರಿ; ನಾವು ಅವನ ನಶ್ವರ ದೇಹವನು ಪವಿತ್ರ ಸ್ಥಳದಲ್ಲಿ ಸುಡುವೆವು. ಅದೇ ಬೆಂಕಿಕೊಳ್ಳಿಗಳನು ತೆಗೆದುಕೊಂಡು ಆ ದ್ರೋಹಿಗಳ ಮನೆಗಳನ್ನು ಸುಡುವ. ಎತ್ತಿರಿ ಶವವನ್ನು!

೨ನೇ ನಾಗರಿಕ — ಹೋಗಿ, ಬೆಂಕಿಯನ್ನು ತನ್ನಿರಿ,

೩ನೇ ನಾಗರಿಕ — ಮರಮುಟ್ಟುಗಳನ್ನೆಲ್ಲ ಕಿತ್ತುಹಾಕಿರಿ,

೪ನೇ ನಾಗರಿಕ — ವಿಗ್ರಹಗಳು, ಕಿಟಕಿಗಳು, ಏನೇ ಆಗಲಿ.—

(ಶವದ ಸಮೇತ ಜನರು ಹೋಗುವರು.)

ಆಂತೋನಿ — ಈಗ ಅದು ಅಂತೆಯೇ ನಡೆಯಲಿ!

ಹಾನಿಕಾರಕ ಚೇಷ್ಟೆಯೇ, ನೀನು ಕಾಲ್ತೆಗೆದು
ಎತ್ತ ನಡೆಯುವಿಯೋ ಆ ದಾರಿಯನ್ನು ಹಿಡಿ.
(ಸೇವಕನೊಬ್ಬನ ಪ್ರವೇಶ.)
ಎಲಾ ಹುಡುಗ, ಏನು ಸಮಾಚಾರ?

ಸೇವಕ — ಒಕ್ಟೇವ್ಯಸನು ಆಗಲೇ ರೋಮಿಗೆ ಬಂದಿರುವನು.

ಆಂತೋನಿ — ಅವನೆಲ್ಲಿರುವನು?

ಸೇವಕ — ಅವನು ಮತ್ತು ಲಿಪಿಡಸ್ ಸೀಸರನ ಮನೆಯಲ್ಲಿ ಇದ್ದಾರೆ.

ಆಂತೋನಿ — ಅವನನ್ನು ಕಾಣಲೆಂದು ನೆಟ್ಟಗೆ ಅಲ್ಲಿಗೇ ಹೋಗುವೆನು. ಅವನಿಂದು ಅಪೇಕ್ಷೆಯಂತೆ ಬರುವನು; ಸುದೈವವು ಸಂತೃಪ್ತಿಯುಂಡಿದೆ; ಇಂಥ ಸ್ಥಿತಿಯಲ್ಲಿ ನಮ್ಮ ಕಾರ್ಯವೇನಿದ್ದರೂ ಕೈಗೂಡುವುದು.

ಸೇವಕ — ಬ್ರೂಟಸನು ಮತ್ತು ಕ್ಯಾಸಿಯಸನು ಕೇವಲ ಹುಚ್ಚರಂತೆ ರೋಮ್ ನಗರದ ಹೊರದ್ವಾರದತ್ತ ನಡೆದರು ಎಂದು ನಾನು ತಿಳಿದೆನು.

ಆಂತೋನಿ — ನಾನು ಜನವನ್ನು ಹೇಗೆ ಉದ್ರೇಕಗೊಳಿಸಿದೆನೆಂಬುದನ್ನು ಬಹುಶಃ ಅವರು ತಿಳಿದಿರಬಹುದು; ನನ್ನನ್ನು ಒಕ್ಟೇವ್ಯಸನ ಬಳಿಗೆ ಕರೆದುಕೊಂಡು ಹೋಗು. (ಹೋಗುವರು.)

೩ನೇ ದೃಶ್ಯ — ರೋಮ್. ಒಂದು ಬೀದಿ.
ಕವಿ ಸಿನ್ನನ ಪ್ರವೇಶ.

ಸಿನ್ನ — ಸೀಸರನೊಡನೆ ನಾನು ಸಂತೋಷದಿಂದ ಊಟಮಾಡಿದೆನೆಂಬ ಕನಸನ್ನು ಈ ರಾತ್ರಿ ಕಂಡೆನು; ನನ್ನ ಕಲ್ಪನೆಯು ಅದೇಕೋ ಅಶುಭವನೆ ಸೂಚಿಸುವುದು. ಮನೆಯ ಬಾಗಿಲನು ದಾಟಿ ಹೊರಗೆ ತಿರುಗಾಡಲು ಇಚ್ಛಿಸೆನು; ಆದರೂ ಅದೇಕೋ ನನ್ನನ್ನು ಇತ್ತ ಎಳೆತಂದಿದೆ!
(ಪುರಜನರು ಪ್ರವೇಶಿಸುವರು)

೧ನೇ ನಾಗರಿಕ — ನಿನ್ನ ಹೆಸರೇನು?

೨ನೇ ನಾಗರಿಕ — ನೀನು ಎಲ್ಲಿಗೆ ಹೋಗುತ್ತಿರುವೆ?

೩ನೇ ನಾಗರಿಕ — ನೀನು ಎಲ್ಲಿ ವಾಸಿಸುವೆ?

೪ನೇ ನಾಗರಿಕ — ನೀನು ವಿವಾಹಿತನೊ? ಅವಿವಾಹಿತನೊ?
೨ನೇ ನಾಗರಿಕ — ಪ್ರತಿಯೊಬ್ಬನಿಗೂ ನೇರವಾಗಿ ಉತ್ತರಿಸು.
೧ನೇ ನಾಗರಿಕ — ಎತ್ತೈ, ಸೂಕ್ಷ್ಮವಾಗಿ ಹೇಳು.
೪ನೇ ನಾಗರಿಕ — ಎಲಾ, ಆಲೋಚಿಸಿ ಹೇಳು.
೩ನೇ ನಾಗರಿಕ — ಹಾ, ನಿಜವನ್ನೆ ಹೇಳಿದರೆ ನಿನಗಿನ್ನು ಹಿತ!
ಸಿನ್ನಾ — ನನ್ನ ಹೆಸರೇನು? ನಾನು ಎಲ್ಲಿಗೆ ಹೋಗುತ್ತಿರುವುದು? ನಾನೆಲ್ಲಿ ವಾಸ? ನಾನು ವಿವಾಹಿತನೋ ಅವಿವಾಹಿತನೊ? ಪ್ರತಿಯೊರ್ವನಿಗೂ ನೇರವಾಗಿಯೂ ಸೂಕ್ಷ್ಮವಾಗಿ ಆಲೋಚಿಸಿ ನಿಜವನ್ನೆ ಹೇಳುವುದು; ನಾನು ಅವಿವಾಹಿತನು!
೨ನೇ ನಾಗರಿಕ — ಅದು ದಡ್ಡರು ಮಾತ್ರ ಮದುವೆಯಾಗುವುದು ಎಂದು ಹೇಳಿದಂತಾಯಿತು. ಅದಕ್ಕೆ ನಾನೊಂದು ಗುದ್ದು ಹಾಕಿದರೆ ನೀನು ಸಹಿಸುವಿಯೆಂದು ನಾನೆಣಿಸುವೆನು; ಸರಿ, ಮುಂದುವರಿಸು, ಇದ್ದುದನ್ನಿದ್ದಂತೆಯೇ ಹೇಳು.
ಸಿನ್ನಾ — ನೇರವಾಗಿಯೇ ನಾನು ಸೀಸರನ ಶವಸಂಸ್ಕಾರಕ್ಕೆ ಹೋಗುತ್ತಿದ್ದೇನೆ.
೧ನೇ ನಾಗರಿಕ — ಮಿತ್ರನಾಗಿ ಹೋಗುವಿಯೊ, ವೈರಿಯಾಗಿಯೊ?
ಸಿನ್ನಾ — ಮಿತ್ರನಾಗಿ.
೨ನೇ ನಾಗರಿಕ — ಆ ವಿಷಯ ನೇರವಾಗಿ ಉತ್ತರಿಸಿದ್ದಾನೆ.
೪ನೇ ನಾಗರಿಕ — ನಿನ್ನ ವಾಸವೆಲ್ಲಿ? ಸೂಕ್ಷ್ಮವಾಗಿ ಹೇಳು.
ಸಿನ್ನಾ — ಸೂಕ್ಷ್ಮದಲಿ ಹೇಳುವೆ; ರಾಜಭವನದ ಸಮೀಪದಲಿ ಇದ್ದೇನೆ.
೩ನೇ ನಾಗರಿಕ — ಅಯ್ಯಾ, ನಿನ್ನ ಹೆಸರೇನು? ನಿಜವಾಗಿ!
ಸಿನ್ನಾ — ನಿಜವಾಗಿಯೂ ನನ್ನ ಹೆಸರು ಸಿನ್ನಾ!
೧ನೇ ನಾಗರಿಕ — ಅವನನ್ನು ಚೂರುಚೂರಾಗಿ ತುಂಡರಿಸಿರಿ; ಅವನೊರ್ವ ಪಿತೂರಿಗಾರ!
ಸಿನ್ನಾ — ನಾನು ಕವಿ ಸಿನ್ನಾ; ಕವಿ ಸಿನ್ನಾ!
೪ನೇ ನಾಗರಿಕ — ಅವನ ಹಾಳು ಕವಿತೆಗಳಿಗಾಗಿ ಅವನನ್ನು ಕಡಿದು ತುಂಡರಿಸಿ; ಹಾಳು ಕವಿತೆಗಳಿಗಾಗಿ ಅವನನ್ನು ಕತ್ತರಿಸಿರಿ.
ಸಿನ್ನಾ — ನಾನು ಪಿತೂರಿಗಾರ ಸಿನ್ನಾನಲ್ಲ.
೪ನೇ ನಾಗರಿಕ — ಅದು ಪರವಾಯಿಲ್ಲ, ಅವನ ಹೆಸರು ಬರೀ ಸಿನ್ನಾ; ಆ ಹೆಸರನ್ನು ಮಾತ್ರ ಅವನ ಹೃದಯದಿಂದ ಕಿ

ತ್ರಿಶಿರದ ಅವನನ್ನು ಅತ್ತ ಕಳಿಸಿ !

೨ನೇ ನಾಗರಿಕ — ಅವನನ್ನು ತರಿಯಿರಿ, ತಿವಿಯಿರಿ; ಬನ್ನಿರಿ, ಎತ್ತಿ
ಬೆಂಕಿ ಹೊತ್ತಿಸುವವರಿ, ಆ ಬ್ರೂಟಸನನು ಕ್ಯಾ
ಸ್ಯಸನನು ಸುಡಿರಿ. ಎಲ್ಲರನು ಸುಡಿರಿ; ಕೆಲವರು ಡೆ
ಕ್ಯೊಶಿಸ್ಯಸನ ಮನೆಗೆ, ಕೆಲವರು ಕ್ಯಾಸ್ಕನಲ್ಲಿ
ಗೆ, ಕೆಲವರು ಲಿಗಾರ್ಯಸನಲ್ಲಿಗೆ ನಡೆಯಿರಿ, ಹೂಂ,
ತೊಲಗಿರಿ !!

(ಹೋಗುತಿವರು)

— x —

ಅಂಕ ೪

ದೃಶ್ಯ ೧ — ರೋಮ್; ಅಂತೋನಿಯ ಮನೆಯ ಒಂದು ಕೋಣೆಯಲ್ಲಿ.

(ಅಂತೋನಿ, ಒಕ್ಟೇವ್ಯಸ್ ಮತ್ತು ಲಿಪಿಡಸ್ ಮೇಜಿನ ಸುತ್ತ ಕುಳಿತಿರುವರು)

ಅಂತೋನಿ — ಈ ಹಲವು ಜನ, ಅನಂತರ, ಸಾಯುವರು; ಅವರ ಹೆಸರುಗಳನ್ನಿಲ್ಲಿ ಗುರುತಿಸಿ ಚುಚ್ಚಲಾಗಿದೆ.

ಒಕ್ಟೇವ್ಯಸ್ — ನಿನ್ನ ಆ ಸಹೋದರನೂ ಸಾಯಬೇಕು. ಲಿಪಿಡಸನೆ, ಅದಕ್ಕೊಪ್ಪುವಿಯೇ?

ಲಿಪಿಡಸ್ — ನಾನು ಒಪ್ಪುತ್ತೇನೆ.

ಒಕ್ಟೇವ್ಯಸ್ — ಅಂತೋನಿ, ಅವನ ಹೆಸರನ್ನು ಗುರುತಿಸು.

ಲಿಪಿಡಸ್ — ಪಬ್ಲಿಯಸನೂ ಜೀವದಿಂದ ಇರಬಾರದೆಂಬ ಷರತ್ತಿನಮೇಲೆ; ಇರಲಿ, ಮಾರ್ಕ್ ಅಂತೋನಿ, ನಿನ್ನ ಸಹೋದರಿಯ ಮಗನಾತ?

ಅಂತೋನಿ — ಅವನು ಜೀವಿಸಲೇ ಬಾರದು. ನೋಡು; ಈ ಒಂದು ಗುರುತಿನಿಂದ ಅವನನ್ನು ನಾನೀಗ ತಿರಸ್ಕರಿಸುವೆನು. ಲಿಪಿಡಸನೆ, ನೀನು ಸೀಸರನ ಮನೆಗೆ ಹೋಗಿ ಅವನ ಮರಣಪತ್ರವನ್ನು ತಾ. ಅದರಲ್ಲಿ ಹೇಳಿದ ಕೆಲವು ವಿಚಾರಗಳನ್ನು ಹೇಗೆ ತೆಗೆದು ಹಾಕುವುದೆಂಬುದರ ಬಗ್ಗೆ ನಿರ್ಣಯಿಸುವ!

ಲಿಪಿಡಸ್ — ಏನು? ನಾನು ನಿನ್ನನ್ನು ಇಲ್ಲಿಯೇ ಕಾಣಬಹುದೇ?

ಒಕ್ಟೇವ್ಯಸ್ — ಇಲ್ಲಿ, ಅಥವಾ ರಾಜಭವನದಲ್ಲಿ.

(ಲಿಪಿಡಸ್ ಹೋಗುವನು.)

ಅಂತೋನಿ — ಇವನೊಬ್ಬ ದುರ್ಬಲನು, ಅಯೋಗ್ಯನು, ದೂತನಾಗಿ ಮಾತ್ರ ಕಳುಹಿಸಲ್ಪಡಲು ಅರ್ಹನು; (ಸೀಸರನ ಪ್ರಪಂಚ)ವನ್ನು ಮೂರು ಪಾಲು ಮಾಡಿದಾಗ ಅದರಲ್ಲೊಂದು ಪಾಲನು ಇವನಿಗೀಯುವುದು ಯೋಗ್ಯವೇ?

ಒಕ್ಟೇವ್ಯಸ್ — ಅವನನ್ನು ಕುರಿತಾಗಿ ಹೀಗೆಯಾಗಿ ಯೋಚಿಸಿದೆ; ನಮ್ಮ ಕಗ್ಗೊಲೆಯ ಶಿಕ್ಷೆಗೆ ಅರ್ಹನಾಗಬೇಕಾದ ಅವನ ಹೇಳಿಕೆಯನ್ನು ನೀನು ಗಮನಿಸಿದೆ!

ಅಂತೋನಿ — ಎಲೈ ಒಕ್ಟೇವ್ಯಸನೆ, ನಾನು ನಿನಗಿಂತಲೂ ಹೆಚ್ಚು ದಿನಗಳನ್ನು ನೋಡಿರುವೆ. ನಾವು ...

ವಿಧ ಕಲಂಕಗಳ ಕಟ್ಟುಗಳನ್ನು ನಮ್ಮ ಹೆಗ
ಲುಗಳಿಂದಿಳಿಸಲು ಈ ವ್ಯಕ್ತಿಗೆ ಅದಕ್ಕೆ ತಗ
ಲುವವನ್ನು ಸಲ್ಲಿಸುತ್ತಿರುವೆವಾದರೂ ಅವನು
ಬಂಗಾರ ಕತ್ತೆ ಕೊಸರಿಯುತ್ತ ದಣಿಯುತ್ತ ಹೋಗುವ
ರೀತಿಯಂತೆ ನಾವು ಹೇಳಿದ ಕಡೆಗೆ ಹೋಗುವಂ
ತೆ ಅವನು ಓಡಿಸಲ್ಪಡುವಂತೆ ಅವನು ಅದ
ನ್ನೆಲ್ಲ ಹೊರಬೇಕು. ನಮ್ಮ ಬೊಕ್ಕಸವನು ಅವನು
ಹೊತ್ತು ತಂದಾಗ ಆ ಹೊರೆಯನ್ನು ನಾವು ಇಳಿ
ಸಲು ಅವನು ಹೊರೆಯ ಭಾರವಿಳಿದ ಕತ್ತೆ ಕಿವಿ
ನಿಗುರಿಸುತ ಹೇಗೆ ಓಡುವುದೋ ಅಂತೆಯೆ ಇವನ
ಕಿವಿ ಹಿಂಡಿ ಮೇಯಲಟ್ಟಿಬಿಡಬಹುದು.

ಒಕ್ಟೇವ್ಯಸ್ — ನಿನಗೆ ಕಂಡಂತೆ ನೀನು ಮಾಡಬಹುದು. ಆದ
ರೆ ಅವನೊಬ್ಬ ಹೋರಾಟಗಾರನೆನಿಸಿದ ವೀ
ರ ಯೋಧನು!

ಆಂತೋನಿ — ನನ್ನ ಕುದುರೆಯೂ ಅದೆ ರೀತಿ, ಒಕ್ಟೇವ್ಯಸ್, ಅ
ದಕ್ಕಾಗಿಯೆ ನಾನು ಅದಕ್ಕೆ ಮೇವನ್ನು ಸಂ
ಗ್ರಹಿಸಿಟ್ಟುಕೊಳ್ಳುವುದು; ಕಾದಾಡಲಿಕ್ಕೆ, ನಡೆಯ
ಲಿಕ್ಕೆ, ನೆಟ್ಟಗೆ ಓಡಲಿಕ್ಕೆ ಆ ಪ್ರಾಣಿಗೆ ನಾನು
ಕಲಿಸುತ್ತಿರುವೆನು; ಅದರ ಶಾರೀರಕ ಚಲನವ
ಲನವು ನನ್ನ ಶಕ್ತಿ ಚಮತ್ಕಾರಗಳನ್ನು ಆ
ಧರಿಸಿದೆ. ಕೆಲವು ವಿಷಯದಲ್ಲಿ ಲೆಪಿಡಸನು ಅ
ದೇ ರೀತಿ. ಅವನಿಗೂ ಬೋಧಿಸುತ್ತಿರಬೇಕು; ತ
ರಬೇತುಗೊಳಿಸಬೇಕು; 'ಹೀಗೆ ಮಾಡು' ಎಂದೆ
ನ್ನುತ್ತಿರಬೇಕು. ಅವನೊಬ್ಬ ಹೆಡ್ಡನು; ಯಾರೂ ಉ
ಪಯೋಗಿಸದ ಆಹಾರ ಮತ್ತು ಇತರರು ಹೇ
ಳುವ ಮಾತು ಕೃತಿಯು ಅನುಸರಿಸುತ್ತೆ. ಅಲ್ಲದೆ
ಅವನೊಬ್ಬ ವ್ಯಕ್ತಿಯೇನೂ ಅಲ್ಲ; ಅವನೊಂದು
ವಸ್ತುವೆಂದು ಪರಿಗಣಿಸಿ ಅವನ ವಿಷಯವಾಗಿ
ಮಾತಾಡು. ಈಗ ಒಕ್ಟೇವ್ಯಸನೆ, ಮಹತ್ವ
ದ ವಿಚಾರಗಳ ಬಗ್ಗೆ ಕೇಳು. ನಾವು ನಮ್ಮ ಬ
ಲವನ್ನು ಮುಂದೊತ್ತಬೇಕು. ಬ್ರೂಟಸ್ ಮತ್ತು ಕ್ಯಾ
ಸ್ಯಸ್ ಇವರು ಸೈನ್ಯವನ್ನು ಜಮಾಯಿಸುತ್ತಿರುವರು. ನ
ಮ್ಮ ಮಿತ್ರರನ್ನು ಒಟ್ಟುಗೂಡಿಸುವ. ಈಗಲೇ ನಾವು
[illegible]

ಹಾರಗಳನ್ನೆಲ್ಲ ಹೇಗೆ ಬಿಚ್ಚಿಡಬಹುದು, ಬಹಿ
ರಂಗವಾದ ಅಪಾಯವನ್ನು ಪರಿಹರಿಸುವ ಬ
ಗೆಯನ್ನೆಲ್ಲ ಕುರಿತು ಸಮಾಲೋಚಿಸಿ ಖಚಿತ
ಗೊಳಿಸುವ!

ಒಕ್ಟೇವ್ಯಸ್ — ನಾವು ಅಂತೆಯೇ ಮಾಡುವ. ನಮ್ಮದು ಸಂದಿಗ್ಧ
ಪರಿಸ್ಥಿತಿ. ಹಲವು ಶತ್ರುಗಳು ನಮ್ಮ ಸುತ್ತಮುತ್ತ
ನಿಂತಿರುವರು, ಮುಗುಳ್ನಗುವ ಕೆಲವರ ಹೃದಯದ
ಆ ಮಿಲ್ಲಿಯನುಗಟ್ಲೆ ಕೇಡುಗಳು ಇವೆಯೆಂಬುದರ
ಬಗ್ಗೆ ನನಗೆ ಕಳವಳವಿದೆ!

(ಹೋಗುವರು.)

ದೃಶ್ಯ — ೨; ಸಾರ್ಡಿಸ್‌ನ ಬಳಿ ಪಾಳ್ಯ;
(ಬ್ರೂಟಸನ ಶಿಬಿರದಲ್ಲಿ.)
(ವಾದ್ಯಮೇಳ; ಬ್ರೂಟಸ್, ಲೂಸಿಲ್ಯಸ್, ಲೂಸ್ಯಸ್
ಮತ್ತು ಸೈನಿಕರ ಪ್ರವೇಶ; ಟಿಟಿನ್ಯಸ್
ಮತ್ತು ಪಿಂಡಾರಸ್ ಅವರನ್ನು ಎದುರುಗೊಳ್ಳುವರು.)

ಬ್ರೂಟಸ್ — ಓಹೋ ನಿಲ್ಲಿರಿ;

ಲೂಸಿಲ್ಯಸ್ — ಎಚ್ಚೆ ಮಾತು ಕೊಡಿರಿ, ಆಹಾ ನಿಲ್ಲಿರಿ;

ಬ್ರೂಟಸ್ — ಲೂಸಿಲ್ಯಸ್, ಈಗ ಏನು? ಕ್ಯಾಸ್ಯಸನು ಸಮೀ
ಪದಲ್ಲಿ ಇರುವನೇ?

ಲೂಸಿಲ್ಯಸ್ — ಇರುವನು; ಅವನ ಸ್ವಾಮಿಯ ಅಭಿನಂದನೆಗಳನ್ನು
ಹೊತ್ತು ನಿನ್ನ ಬಳಿಗಾ ಪಿಂಡಾರಸನು ಬಂದಿ
ರುವನು.

(ಪಿಂಡಾರಸನು ಬ್ರೂಟಸ್‌ಗೆ ಪತ್ರವೀಯುವನು.)

ಬ್ರೂಟಸ್ — ಪಿಂಡಾರಸನೇ, ನಿನ್ನ ಪ್ರಭುವು ಅಭಿಮಾನದಿಂ
ದ ಬರೆದಿರುವನು. ಅವನು ಬೇರೆ ಆಲೋಚನೆಗ
ಳಿಂದ ಅಥವಾ ತನ್ನ ರಕ್ಷಕ ಸಿಬ್ಬಂದಿಗಳ
ಮಾತು ಕೇಳಿಕೊಂಡು ಅವನು ಮಾಡಿದುದು ಮಾಡ
ಬಾರದಿತ್ತೆಂದು ಊಹಿಸಲು ಎಡೆಯಿತ್ತನಾ
ದರೂ ಅವನು ಸಮೀಪದಲ್ಲಿದ್ದರೆ ಆದಷ್ಟರಿಂ
ದಲೇ ನಾನು ತೃಪ್ತನಾಗುವೆನು.

ಪಿಂಡಾರಸ್ — ನಿನ್ನಲ್ಲಿ ತುಂಬ ಪ್ರೀತಿ ಅಭಿಮಾನವನಿಟ್ಟಿ
ರುವ ನನ್ನ ಮಾನ್ಯ ಪ್ರಭು ಅಂತೆಸಗುವನೆಂಬು
ದರಲ್ಲಿ ನಾನು ಸಂಶಯಪಡಲಾರೆ!

ಬ್ರೂಟಸ್ — ಆವನಲ್ಲಿ ಸಂದೇಹವಿರುವುದಿಲ್ಲ, ಲೂಸಿಲ್ಯಸ್! ಒಂದು ಮಾತು; ನಿನ್ನನ್ನು ಆವನು ಹೇಗೆ ಸ್ವಾಗತಿಸಿದ? ನನಗೆ ಸ್ಪಷ್ಟವಾಗಿ ತಿಳಿಯಲಿ.

ಲೂಸಿಲ್ಯಸ್ — ಹಿಂದೆ ಇದ್ದಂತೆ ಬಹು ಪರಿಚಿತರೆಂಬ ಸಲುಗೆಯಿಂದ ಆದರ ಮಿತ್ರತ್ವದ ವಿಶ್ವಾಸಪೂರ್ಣ ಮಾತುಗಳಿಂದ ಅಲ್ಲವೆನ್ನಬಹುದು; ಆದರೂ ಆವನು ವಿನಯ ಸಮ್ಮಾನವನ್ನು ಸಾಕಷ್ಟು ತೋರಿಸಿದನು.

ಬ್ರೂಟಸ್ — ಆವೇಶಭರಿತನಾಗಿ ಬೆಚ್ಚನೆ ಇರುವ ಮಿತ್ರನ ಬಗ್ಗೆ ನೀನು ತಣ್ಣನೆ ವಿವರಿಸಿದೆ. ಲೂಸಿಲ್ಯಸನೆ, ಯಾವಾಗಲೂ ತಿಳಿದುಕೋ; ಪ್ರೀತಿ ವಿಶ್ವಾಸಗಳು ಹಳಸಿ ಕೊಳೆತಾಗ ಬಲಾತ್ಕಾರದ ವಿನಯ ಉಪಚಾರಗಳು ತೋರುವುವು; ಸರಳ ತೆರೆದ ಸಹೃದಯತೆಗೆ ಕಪಟತನವಿಲ್ಲ; ಆದರೆ ನಿಸ್ಸಾರ ಕೆರಳಿದ ಕುದುರೆಗಳಂತೆ ಪೊಳ್ಳು ಜನ ತಾವು ಧೀರರು ಎಂದು ತೋರಿಸಲು ನಾಟಕವಾಡುವರು. ಯಾವಾಗ ಹಿಮ್ಮಡಿ ಮುಳ್ಳಿನಾ ನೋವನ್ನು ಆವರು ಸಹಿಸಬೇಕೋ ಆಗ ಕುದುರೆ ಜುಟ್ಟಿನೊಡಗೂಡಿಯೇ ಬೀಳುವರು; ಮತ್ತು ಬಹು ಮೋಸದ ಕುದುರೆಗಳಂತೆ ತಮ್ಮ ಪ್ರಯತ್ನದಲಿ ಜಯಪ್ರದರಾಗದೆ ಕುಸಿದು ಬೀಳುವರು. ಆವನ ಸೈನ್ಯವು ಬರುತ್ತಾ ಇದೆಯೇ?

ಲೂಸಿಲ್ಯಸ್ — ಇಂದು ರಾತ್ರಿ ಸಾರ್ಡಿಸ್‌ದಲ್ಲಿ ತಂಗಲು ಆವರು ಆಲೋಚಿಸಿರುವರು; ಕುದುರೆ ದಳವು ಬಹುಮಟ್ಟಿಗೆ ಕ್ಯಾಸ್ಯಸನೊಡನೆ ಬಂದಿದೆ.

(ಸಪ್ಪಳದ ಧ್ವನಿ ಕೇಳಿಸುವುದು.)

ಬ್ರೂಟಸ್ — ಹಾ, ಆವನು ಬಂದು ತಲುಪಿದನು. ಆವನನ್ನು ಎದುರುಗೊಳ್ಳಲು ಮೆಲ್ಲನೆ ಹೋಗು.

(ಕ್ಯಾಸ್ಯಸ್ ಮತ್ತು ಸಿಪಾಯಿಗಳು ಪ್ರವೇಶ.)

ಕ್ಯಾಸ್ಯಸ್ — ಹೋ! ನಿಲ್ಲಿರಿ.

ಬ್ರೂಟಸ್ — ಹೋ! ನಿಲ್ಲಿರಿ; ಆ ಪದವನ್ನು ಹೇಳುತ್ತಾ ಇರಿರೋ.

ತೆರೆಯಲಿ — ನಿಲ್ಲಿರೋ!

ಪುನಃ ಹಿಂದಿನಿಂದ — ನಿಲ್ಲಿರೋ.

ಕ್ಯಾಸ್ಯಸ್ — ಸನ್ಮಾನ್ಯ ಸೋದರನೆ ನೀನು ನನಗೆ ಅನ್ಯಾ

ಅಹಿತವನ್ನೆಸಗಿರುವೆ.

ಬ್ರೂಟಸ್ — ದೇವತೆಗಳಿರಾ, ನನ್ನನ್ನು ನೀವೇ ಪರೀ
ಕ್ಷಿಸಿ ನೋಡಿ. ನಾನು ವೈರಿಗಳನ್ನೂ ತಪ್ಪೆಸಗು
ವುದೇ? ಹಾಗೆ ಇಲ್ಲದಿದ್ದರೆ ನನ್ನ ಸೋದರನಿ
ಗೆ ಹೇಗೆ ಅಹಿತವೆಸಗಲಿ?

ಕ್ಯಾಸ್ಯಸ್ — ಬ್ರೂಟಸನೆ, ಈ ನಿನ್ನ ಸೌಮ್ಯಭಾವವು ನಿನ್ನ
ತಪ್ಪುಗಳನ್ನು ಅಡಗಿಸುವುದು, ಮತ್ತು ನೀನು ಅವು
ಗಳನ್ನೆಸಗುವಾಗ —

ಬ್ರೂಟಸ್ — ಕ್ಯಾಸ್ಯಸನೆ, ಸಮಾಧಾನ ತಂದುಕೊ. ನಿನ್ನ ದುಗು
ಡವೇನಿದೆಯೋ ಅದನ್ನು ತಾಳ್ಮೆಯಿಂದ ಹೇಳು. ನ
ನಗೆ ನಿನ್ನನ್ನು ಚೆನ್ನಾಗಿ ಗೊತ್ತಿದೆ. ನಾವಿಬ್ಬ
ರ ಕಣ್ಣೆದುರಿಗೆ ಇರುವ ನಮ್ಮ ಈ ಸೈನ್ಯಗಳು
ನಮ್ಮಿಂದ ವಿಶ್ವಾಸವನ್ನೇ ನಿರೀಕ್ಷಿಸುವುದ
ಲ್ಲದೆ ಬೇರೇನನ್ನೂ ಅಲ್ಲ; ಆದುದರಿಂದ ನಾ
ವು ವಾದಾಡುವುದು ಬೇಡ. ಅವರನ್ನು ಆಚೆ
ಹೋಗುವಂತೆ ಹೇಳು. ಅನಂತರ, ಕ್ಯಾಸ್ಯಸನೆ,
ನನ್ನ ಶಿಬಿರದಲ್ಲಿ ನೀನು ನಿನ್ನ ಮನೋತಾಪ
ವೆಲ್ಲವನ್ನು ಹೊರಹಾಕು; ನಾನು ಆಲಿಸುವೆನು!

ಕ್ಯಾಸ್ಯಸ್ — ಪಿಂಡಾರಸನೆ, ನಮ್ಮ ಸೇನಾನಿಗಳಿಗೆ ತ
ಮ್ಮ ದಳಗಳನ್ನು ಇಲ್ಲಿಂದತ್ತಲ ಸರಿ ನಿಲ್ಲಿ
ಸುವಂತೆ ಹೇಳು.

ಬ್ರೂಟಸ್ — ನೀನೂ ಅಂತೆಯೇ ಮಾಡು, ಲೂಸಿಲ್ಯಸ್. ನಮ್ಮ ಮಾ
ತುಕತೆ ಮುಗಿಯುವ ಮುನ್ನವೆ ಯಾರೊಬ್ಬನೂ ನ
ಮ್ಮ ಶಿಬಿರವನ್ನು ಹೊಗದಂತೆ ಇರಲಿ; ಬಾಗಿಲನ್ನು ಲೂ
ಸಿಯಸ್ ಮತ್ತು ಟಿಟಿನ್ಯಸ್ ಕಾಯುತಿರಲಿ!
(ಹೋಗುವರು)

ದೃಶ್ಯ ೨. — ಬ್ರೂಟಸನ ಶಿಬಿರದೊಳಗೆ.
(ಬ್ರೂಟಸ್ ಮತ್ತು ಕ್ಯಾಸ್ಯಸ್ ಪ್ರವೇಶ)

ಕ್ಯಾಸ್ಯಸ್ — ಅದೇನೆಂದರೆ ನೀನು ನನಗೆ ತಪ್ಪೆಸಗಿರುವೆ
ಯೆಂದು ಇದರಿಂದ ತಿಳಿಯುವುದು; ಇಲ್ಲಿ ಸಾರ್ಡಿಸ್
ಜನರಿಂದ ಲಂಚತೆಗೆದುಕೊಂಡನೆಂದು ನೀ
ನು ಲೂಸ್ಯಸ್ ಪೆಲ್ಲನನ್ನು ತೀವ್ರ ಖಂಡಿಸಿದೆ; ಆ

ಸರಿ ನನ್ನ ಪತ್ರಗಳಲ್ಲಿ ಅವನನ್ನು ತಿಳಿದಿ
ದ್ದ ನಾನು ಅವನಿಗಾಗಿ ಬೇಡಿಕೊಂಡಿದ್ದರೂ ನೀ
ನು ಅವನನ್ನು ಅವಮಾನಕ್ಕೊಳಪಡಿಸಿರುವಿಯೆಂದು
ಭಾವಿಸುತ್ತೇನೆ!

ಬ್ರೂಟಸ್ — ಅಂಥಾ ಸಮಸ್ಯೆಯನ್ನು ಕುರಿತಾಗಿ ನೀನೇ ಬ
ರೆದು ತಪ್ಪು ಮಾಡಿಕೊಂಡೆ!

ಕ್ಯಾಸ್ಸಿಯಸ್ — ಪರಿಸ್ಥಿತಿ ಇಂತಿರಲು ಎಲ್ಲ ಅಲ್ಪ ತಪ್ಪುಗಳಿ
ಗೆ ಅವನ ವಿವರಣೆ ಬೇಕಾಯಿತೆಂದರೆ ಅಸಮಂಜಸ
ವಾಗಿದೆ.

ಬ್ರೂಟಸ್ — ಕ್ಯಾಸ್ಸಿಯಸನೆ, ನಿನಗೆ ನಾನು ಹೇಳುವೆ! ಕೇವಲ ಅ
ಯೋಗ್ಯರಿಗೆ ನೀನು ನಿನ್ನ ಪದವಿಯಿಂದ ಕೈ
ಚಾಚಿ ನಿನ್ನ ಮಾನವನ್ನು ಬಿಂದಿಸ್ತು ಚಿನ್ನಕ್ಕೆ
ಕೆಂತಿಯಲ್ಲಿ ಮಾರಿ ನೀನು ತುಂಬಾ ನಿಂದನೆಗೆ
ಒಳಗಾದೆ.

ಕ್ಯಾಸ್ಸಿಯಸ್ — ನಾನು ಕೈ ಚಾಚುವಂಥ ತುರಿಕೆಯೇ? ಇದನ್ನು
ತಿಳಿದ ನೀನು ಬ್ರೂಟಸ್ ಎಂದು ನಿನಗೆ ಗೊತ್ತಿದೆ.
ಇಲ್ಲದಿದ್ದರೆ ನಿನ್ನ ಈ ಮಾತುಗಳು, ದೇವರಾ
ಣೆಗೂ ನಿನ್ನ ಕಡೇ ನುಡಿಗಳೇ?

ಬ್ರೂಟಸ್ — ಕ್ಯಾಸ್ಸಿಯಸನ ಹೆಸರು ಈ ಲಂಚಕೋರತನಕ್ಕೆ
ಗೌರವವನ್ನು ತಂದಿದೆ; ಆ ಕಾರಣದಿಂದಲೇ
ಎಂಬಂತೆ ಶಿಕ್ಷೆ ಅವನ ತಲೆಯನ್ನ ಮುಚ್ಚಿದೆ.

ಕ್ಯಾಸ್ಸಿಯಸ್ — ಶಿಕ್ಷೆ!

ಬ್ರೂಟಸ್ — ಮಾರ್ಚ್ ತಿಂಗಳನ್ನು ನೆನೆ! ಮಾರ್ಚ್ ಹದಿನೈದರ ವಿ
ಶೇಷ ದಿನ ನೆನೆಯುತ್ತೀಯಾ? ನ್ಯಾಯಕ್ಕಾಗಿ ಆ ಖ್ಯಾತ
ಸೀಸರನು ತನ್ನ ರಕ್ತವನ್ನು ಸುರಿಸಲಿಲ್ಲವೇ?
ನ್ಯಾಯಕ್ಕೆ ಅವನ ದೇಹವನ್ನು ತಿವಿಯದ ಪ್ರೇ
ಯಕ ಯಾರಿದ್ದವನು? ಚೋರರಿಗೆ ಸಹಾಯಕನಾದ
ನೆಂಬ ಆಪಾದನೆ ಜಗತ್ತಿನ ಅದ್ವಿತೀಯ
ವ್ಯಕ್ತಿಯನ್ನು ತಿವಿದು ಕೊಂದ ನಮ್ಮಲ್ಲಿ ಒಬ್ಬನು
ಈಗ ಹೀನಾಯ ಲಂಚಕ್ಕೆ ನಾವು ಗಳಿಸಿದ ಅ
ಪಾರ ಮಾನ ಗೌರವಗಳನ್ನು ಮಾರಿ ಎಷ್ಟು ಕ
ಸವನ್ನು ಗೋಚಬಹುದೋ ಅಷ್ಟನ್ನು ಪಡೆದು
ನಮ್ಮ ಕೈಬೆರಳುಗಳನ್ನು ಹೊಲಸಾಗಿಸಿಕೊಳ್ಳ
ಬೇಕೇ? ಅಂಥ ರೋಮನ್ ನಾಗರಿಕನಾಗಿ ಇರು

ಇದಕಿಂತ ನಾನೊರ್ವ ನಾಯಿಯಂತಿದ್ದು ಚಂದ್ರನ ಕಡೆಗೆ ನೋಡುತ್ತ ಬೊಗಳುತ್ತಿದ್ದೆನು.

ಕ್ಯಾಸ್ಯಸ್— ಬ್ರೂಟಸನೆ, ನನ್ನತ್ತ ಬೊಗಳದಿರು; ನಾನು ಅದನ್ನು ಸಹಿಸಲಾರೆನು. ನನ್ನ ಮೇಲೆ ತಪ್ಪು ಹೊರಿಸುವ ನೀನು ನಿನ್ನನ್ನೇ ಮರೆತಿರುವೆ; ನಾನೊರ್ವ ಯೋಧನು; ಅನುಭವದಲ್ಲಿ ನಾನು ಹಿರಿಯವನು. ಏನು ಎಂತೆಂದು ನಿರ್ಣಯಿಸುವುದರಲ್ಲಿ ನಿನಗಿಂತಲೂ ಚತುರನು!

ಬ್ರೂಟಸ್— ಎಲಾ ಹೋಗು, ನೀನಲ್ಲ, ಕ್ಯಾಸ್ಯಸ್.

ಕ್ಯಾಸ್ಯಸ್— ನಾನು ಹೌದು.

ಬ್ರೂಟಸ್— ನೀನಲ್ಲವೆಂದು ನಾನು ಹೇಳುತ್ತಿದ್ದೇನೆ.

ಕ್ಯಾಸ್ಯಸ್— ನನ್ನನ್ನು ಹೆಚ್ಚು ರೇಗಿಸಬೇಡ! ನಾನು ನನ್ನನ್ನೇ ಮರೆತು ಹೋಗುವೆನು. ನಿನ್ನ ಆರೋಗ್ಯವನ್ನು ನೋಡಿಕೋ. ನನ್ನನ್ನು ಇನ್ನು ಕೆಣಕದಿರು.

ಬ್ರೂಟಸ್— ಎಲಾ ಅಯೋಗ್ಯನೆ, ಅತ್ತ ಹೋಗು.

ಕ್ಯಾಸ್ಯಸ್— ಇದು ಸಾಧ್ಯವೆ?

ಬ್ರೂಟಸ್— ನಾನು ಮಾತಾಡುವೆನು, ಕೇಳು! ನಿನ್ನ ಸಿಡುಕಾದ ಸಿಟ್ಟಿಗೆ ನಾನು ಅವಕಾಶ ಕೊಡಬೇಕೇ? ಒಬ್ಬ ಹುಚ್ಚ ಪಿಚ್ಚನು ನೋಡಿದಾಗ ನಾನು ಹೆದರಬೇಕೆ?

ಕ್ಯಾಸ್ಯಸ್— ದೇವರೇ, ದೇವತೆಗಳಿರಾ, ನಾನು ಇದನೆಲ್ಲ ಸಹಿಸಲೇ ಬೇಕೆ?

ಬ್ರೂಟಸ್— ಇದೆಲ್ಲ ಹೌದು. ಹೆಚ್ಚೇ ಇದೆ. ಇದೀಗ ನಿನ್ನ ಹೆಮ್ಮೆಯ ಎದೆ ಬಿರಿಯುವವರೆಗೆ ಹಲುಬಿಕೋ, ಹೋಗು; ನೀನೆಂಥ ಕೋಪಿಷ್ಠನೆಂಬುದು ನಿನ್ನ ಸೇವಕರಿಗೆ ತೋರಿಸಿ ಆ ನಿನ್ನ ಗುಲಾಮರನ್ನು ಹೆದರಿಸು. ನಾನು ಕದಲಬೇಕೆ? ನಿನ್ನನ್ನು ನಾನು ಅನುಸರಿಸುವುದೇ? ನಿನ್ನ ಸಿಡುಕಿನ ಗುಣಕ್ಕೆ ನಾನು ಮಣಿಯಬೇಕೆ? ನಿನ್ನನ್ನು ಇರಿಯುವ ನಿನ್ನ ಮತ್ಸರದ ವಿಷವನ್ನು ದೇವರಾಣೆಗೂ ನೀನೇ ಕುಡಿದು ಅರಗಿಸಿಕೋ. ಕಣಜದ ಹುಳುವಿನಂತೆ ನೀನು ತೋರಿದರೆ ಈಗ ವಿನೋದಕ್ಕೆ, ನನ್ನ ನಗುವಿಗೆ, ನಾನು ನಿನ್ನನ್ನು, ಹೌದು, ಈಗಿಂದೀಗಲೇ ಉಪಯೋಗಿಸುವೆನು.

ಕ್ಯಾಸ್ಯಸ್— ಇದು ಇಷ್ಟರಮಟ್ಟಿಗೆ ಬಂತೇ?

848

ಬ್ರೂಟಸ್ — ನೀನು ಉತ್ತಮ ಯೋಧನೆಂದು ಹೇಳುತ್ತೀ. ಅದು ನಿಜವೆನಿಸಲಿ; ನಿನ್ನ ದರ್ಪವು ನಿಜವೆಂಬಂತೆ ತೋರಿಸು; ಅದೊಂದು ನನಗೆ ಸಂತೋಷ; ನನ್ನಷ್ಟಕ್ಕೇ ಓರ್ವ ಮಾನ್ಯನೆಂದರೆ ಎಂಥವನು ಎಂದು ತಿಳಿಯಲು ನಾನು ಇಚ್ಛಿಸುತ್ತೇನೆ.

ಕ್ಯಾಸ್ಸಿಯಸ್ — ಬ್ರೂಟಸನೆ, ನೀನು ತಪ್ಪಾಗಿಸುತ್ತಿರುವೆ! ಅಪಮಾನಿಸುತ್ತಿರುವೆ; ನಾನು ಹೇಳಿದ್ದು ಹಿರಿಯ ಯೋಧನು ಎಂಬುದಾಗಿ! ಉತ್ತಮನು ಎಂದು ನಾನಂದೆನೇ?

ಬ್ರೂಟಸ್ — ನೀನು ಹೇಳಿದ್ದರೆ ನಾನೇನೂ ಲಕ್ಷಿಸೆನು.

ಕ್ಯಾಸ್ಸಿಯಸ್ — ಸೀಸರನು ಜೀವಿಸಿದ್ದಾಗ ಅವನು ನನ್ನನ್ನು ರೇಗಿಸಲಿಲ್ಲ.

ಬ್ರೂಟಸ್ — ಹಾ, ಮೌನವಾಗು. ನೀನು ಈ ರೀತಿ ಅವನನ್ನು ಉದ್ರೇಕಿಸುತ್ತಿರಲಿಲ್ಲ.

ಕ್ಯಾಸ್ಸಿಯಸ್ — ನಾನು ಉದ್ರೇಕಿಸುತ್ತಿರಲಿಲ್ಲ!

ಬ್ರೂಟಸ್ — ಇಲ್ಲ.

ಕ್ಯಾಸ್ಸಿಯಸ್ — ಏನು? ಅವನನ್ನು ರೇಗಿಸುತ್ತಿರಲಿಲ್ಲ!

ಬ್ರೂಟಸ್ — ನಿನ್ನ ಜೀವರಕ್ಷಣೆಗಾಗಿ ನೀನು ಹಾಗೇನೂ ಮಾಡಲಾರೆ.

ಕ್ಯಾಸ್ಸಿಯಸ್ — ನನ್ನ ಪ್ರೀತಿಯಲ್ಲಿ ಹೆಚ್ಚು ವಿಶ್ವಾಸವಿಡಬೇಡ. ನಾನದನ್ನು ತೋರಿಸಿ ಅನಂತರ ನಾನೇ ಬೇಸರಪಡುವಂತಾಗಬಹುದು.

ಬ್ರೂಟಸ್ — ನೀನು ಬೇಸರಪಡಲು ಎಂದೋ ಹಾಗೆ ಮಾಡಿದೆ. ಕ್ಯಾಸ್ಸಿಯಸನೆ, ನಿನ್ನ ಬೆದರಿಕೆಯು ಭಯವನ್ನು ಹುಟ್ಟಿಸದು. ಸತ್ಯವೇ ನನಗೆ ಬಲವಾದ ಶಸ್ತ್ರ. ಅಂತಿರಲು ನಿನ್ನ ಮಾತು ಬರೇ ಹಾರಿಸುವ ಗಾಳಿಯಂತೆ. ಅದನ್ನು ಗಣಿಸಲಾರೆ; ನನಗೊಂದಷ್ಟು ಬೇಡಿಯ ಚಿನ್ನ ಕಳುಹಿಸೆಂದು ಹೇಳಿ ಕಳುಹಿಸಿದಾಗ ನೀನು ಇಲ್ಲವೆಂದೆ; ನನಗೆ ಅಕ್ರಮವಾಗಿ ಹಣವನ್ನು ಪಡೆಯಲು ಸಾಧ್ಯವಿಲ್ಲ; ಅದರ ಬದಲು ನನ್ನ ಹೃದಯವನ್ನು ಹಿಂಡಿ ನೆತ್ತರನ್ನೇ ಹಣವಾಗಿಸುವೆ. ಶ್ರಮಪಟ್ಟು ಗಳಿಸುವ ರೈತರಿಂದ ಅಲ್ಪ ಗಳಿಕೆಯನ್ನು ಪರೋಕ್ಷದಲಿ ಪಡೆಯೆನು. ನನ್ನ ಸೇನಾಜನರಿಗೆ ಸಲ್ಲಿಸಲು ಹಣಕ್ಕೆ ಹೇಳಿ ಕಳುಹಿಸಿದೆನು; ನೀನು ಕೊಡಲಿಲ್ಲ. [illegible]

ಸನ ರೀತಿಯಲ್ಲಿ ಮಾಡಿದಂತಾಯಿತೇ? ಅಂತೆಯೇ ಕೇಯಸ್ ಕ್ಯಾಸಿಯಸ್‌ಗೆ ನಾನು ಉತ್ತರಿಸಬೇಕಾಯಿತೇ? ತನ್ನ ಮಿತ್ರನನ್ನು ಕೊಲ್ಲುವವನೆಂದು ಈ ಮಾರ್ಕಸ್ ಬ್ರೂಟಸನು ಅಷ್ಟೇ ಲೋಭಿಯಾದನೆ ನಿ ನಿರರ್ಥಕವಾದ ತನ್ನ ಬೊಕ್ಕಸಕ್ಕೆ ಬೀಗವನ್ನು ಹಾಕಿದರೆ, ದೇವತೆಗಳೇ, ನಿಮ್ಮ ಸಿಡಿಲ್ಬಾಣಗಳಿಂದ ಅವನನ್ನು ಪುಡಿಹಾರಿಸಿ ಕೊಲ್ಲಲು ಸಿದ್ಧರಾಗಿರಿ!

ಕ್ಯಾಸ್ಸಿಯಸ್– ನಾನು ನಿನಗೆ ಕೊಡಲಾರೆಯೆಂದೆನ್ನಲಿಲ್ಲ.

ಬ್ರೂಟಸ್– ನೀನು ಹೇಳಿರುವೆ.

ಕ್ಯಾಸ್ಸಿಯಸ್– ಇಲ್ಲ, ಹೇಳಲಿಲ್ಲ; ನಿನಗೆ ನಾನು ಅಂದುದನ್ನು ಹೊತ್ತು ತಂದವನು ಹೆಡ್ಡನು. ಬ್ರೂಟಸನು ನನ್ನ ಹೃದಯವನ್ನು ಸೀಳಿರುವನು; ಮಿತ್ರನ ದೌರ್ಬಲ್ಯವನ್ನು ಅವನ ಮಿತ್ರನು ಸಹನೆಯಿಂದ ನೋಡಬೇಕು; ಆದರೆ ಬ್ರೂಟಸನು ನನ್ನದನ್ನು ಬಹುದೊಡ್ಡದಾಗಿ ಭಾವಿಸಿದ್ದಾನೆ.

ಬ್ರೂಟಸ್– ನೀನು ನನಗೆ ಅಂತೆಸಗುವವರೆಗೆ ನಾನು ಹಾಗೇನೂ ಮಾಡಿಲ್ಲ.

ಕ್ಯಾಸ್ಸಿಯಸ್– ನೀನು ನನ್ನನ್ನು ಅಭಿಮಾನದಿಂದ ಕಾಣುತ್ತಿಲ್ಲ.

ಬ್ರೂಟಸ್– ನಾನು ನಿನ್ನ ತಪ್ಪುಗಳನ್ನು ಮೆಚ್ಚುವುದಿಲ್ಲ.

ಕ್ಯಾಸ್ಸಿಯಸ್– ಮಿತ್ರತ್ವದ ಕಣ್ಣುಗಳು ಅಂತಹ ಕೊರತೆಗಳನ್ನು ಎಂದೂ ಕಾಣಲಾರವು.

ಬ್ರೂಟಸ್– ಒಬ್ಬ ಹೊಗಳುಭಟ್ಟನದು ಒಲಿಂಪಸ ಬೆಟ್ಟದ ಎತ್ತರವಿದ್ದರೂ ಕಾಣಲಾರದು.

ಕ್ಯಾಸ್ಸಿಯಸ್– ಆಂಟೋನಿಯೇ, ಯುವಕ ಒಕ್ಟೇವ್ಯಸನೇ, ಬನ್ನಿರಿ, ಕ್ಯಾಸ್ಸಿಯಸನ ಮೇಲೆ ಸೇಡು ತೀರಿಸಿಕೊಳ್ಳಿರಿ. ಕ್ಯಾಸ್ಸಿಯಸನಿಗೆ ಈ ಲೋಕವೇ ಸಾಕಾಗಿ ಹೋಗಿದೆ, ತಾನು ಪ್ರೀತಿಸಿದ್ದವನಿಗೆ ಅವನು ಬೇಡವಾಗಿದೆ, ಅವನು ತನ್ನ ಸೋದರನ ಅವಹೇಳನಕ್ಕೆ ಪಾತ್ರನಾಗಿರುವನು; ತಾನೊಬ್ಬ ಗುಲಾಮನಂತೆ ಎದುರಿಸಲ್ಪಟ್ಟಿರುವನು; ಅವನ ಕೊರತೆಗಳೆಲ್ಲವನ್ನೂ ಅವನ ಹಲ್ಲುಗಳಿಗೆ ಇಡಲೆಂಬಂತೆ ಬರೆದು ಅದನ್ನು ಕಂಠಪಾಠ ಮಾಡಿಹರು; ಓಹೋ, ಅಳುತ್ತಲೇ ನನ್ನ [illegible] → ಪುಸ್ತಕವನ್ನು [illegible]

ಗಳ ಮೂಲಕ ಸುರಿಯುವೆನು. ಇಲ್ಲಿದೆ ನನ್ನ ಖ
ಡ್ಗವಿದೆ; ಇಲ್ಲಿ ನನ್ನ ಹೃದಯವಿದೆ. ಅದರೊಳಗಿನ
ಪ್ಲುಟೋನ ಖಜಾನೆಯನ್ನು ಮೀರಿದ, ಚಿನ್ನಕಿಂ
ತಲೂ ಬೆಲೆಯುಳ್ಳ ಈ ನನ್ನ ಹೃದಯವಿದೆ. ಅದ
ರಲ್ಲಿ ನೀನು ರೋಮನ್ ವೀರನನ್ನು ಕಾಣುತ್ತಿರು
ವೆಯೆಂದಾದರೆ ಕಿತ್ತಲಿ ಅದನ್ನು ತೆಗೆ. ನಿನಗೆ
ಚಿನ್ನವನ್ನು ಕೊಡದಿದ್ದ ನಾನು ನನ್ನ ಹೃದಯ
ವನ್ನೇ ಕೊಡುವೆನು. ಸೀಸರನನ್ನು ಹೇಗೆ ನೀನು ತಿವಿ
ದೆಯೋ ಅದೇ ರೀತಿ ನನ್ನ ಎದೆಯನ್ನು ತಿವಿ! ನೀ
ನು ಅವನಲ್ಲಿ ಅತಿ ದ್ವೇಷವಿಟ್ಟಿದ್ದರೂ ನೀ
ನು ಕ್ಯಾಸ್ಯಸನನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ
ಅವನನ್ನು ಪ್ರೀತಿಸಿದ್ದೆಯೆಂದು ನನಗೆ ಗೊತ್ತು!

ಬ್ರೂಟಸ್ — ನಿನ್ನ ಖಡ್ಗವನ್ನು ಒರೆಯಲ್ಲಿ ಇಡು! ನಿನಗೆ ಬೇ
ಕಾದಾಗ ಕೋಪಿಷ್ಠನಾಗು. ಅದನ್ನು ತೋರಿಸ
ಲು ಅವಕಾಶ ಬರುವುದು. ನಿನಗೆ ತೋರಿದಂತೆಯೆ
ಮಾಡು; ಅವಮಾನವು ಪರಿಹಾಸ್ಯವೆನಿಸುವುದು.
ಕ್ಯಾಸ್ಯಸನೆ, ಒಂದು ಕುರಿಮರಿಯ ಜೊತೆಯಲ್ಲಿ ನಿನ
ಗೊಂದು ನೊಗ ಹೇರಲಾಗಿದೆ; ಅದರಿಂದ ಚ
ಕಮಕಿ ಕಲ್ಲಿನಲ್ಲಿ ಬೆಂಕಿಯಿರುವಂತೆ ನಿನ್ನ
ಲ್ಲಿ ಕೋಪ ಅಡಗಿದೆ. ಅದನ್ನು ಬಲಾತ್ಕಾರವಾ
ಗಿ ತೋರಿಸಿದಾಗ ಕಿಡಿಯು ಥಕ್ಕನೆ ಹಾರುವುದು,
ಮತ್ತೆ ಒಮ್ಮೆಲೆ ತಣ್ಣಗಾಗುವುದು.

ಕ್ಯಾಸ್ಯಸ್ — ದುಃಖ ಮತ್ತು ಮುಂಗೋಪಗಳು ಬ್ರೂಟಸನನ್ನು
ಬಾಧಿಸಲು ಅವುಗಳನ್ನು ತಣಿಸಲೆಂದಲ್ಲವೆ ಅ
ವನಿಗೆ ಹಾಸ್ಯವು ಮತ್ತು ನಗುವಿನಂತೆ ಆವನ
ಕ್ಯಾಸ್ಯಸನು ಇದ್ದನು?

ಬ್ರೂಟಸ್ — ಅದನ್ನೇ ನಾನು ಹೇಳುತ್ತಿದ್ದಾಗ ನಾನೂ
ಕೋಪದಿಂದ ಕೂಡಿದ್ದೆನು.

ಕ್ಯಾಸ್ಯಸ್ — ನೀನು ಅಷ್ಟನ್ನು ಒಪ್ಪುತ್ತೀಯಾ?
ನಿನ್ನ ಕೈ ಕೊಡು!

ಬ್ರೂಟಸ್ — ನನ್ನ ಹೃದಯವನ್ನೂ ಸಹ.

ಕ್ಯಾಸ್ಯಸ್ — ಓ ಬ್ರೂಟಸ್ —

ಬ್ರೂಟಸ್ — ಏನು? ಏನಾಯಿತು?

ಕ್ಯಾಸ್ಯಸ್ — ನನ್ನ ತಾಯಿ ನನಗಿತ್ತ ಈ ದುಡುಕಿನ ಮನೋ

ಗುಣವು ನನ್ನನ್ನು ಮರೆಗುಳಿಯನ್ನಾಗಿಸಿದಾಗ
ಅದನ್ನು ಸಹಿಸುವಷ್ಟು ಪ್ರೀತಿ ನಿನ್ನಲ್ಲಿಲ್ಲವೇ?

ಬ್ರೂಟಸ್ — ಹೌದು ಕ್ಯಾಸ್ಯಸ್, ಇನ್ನು ಮುಂದೆ ನೀನು ನಿನ್ನ
ಬ್ರೂಟಸನೊಡನೆ ನಿಷ್ಠೆಯಿಂದ ವರ್ತಿಸಿದಾಗ
ನಿನ್ನ ತಾಯಿಯೇ ನಿನ್ನನ್ನು ಗದರಿಸಿ ಒಂಟಿಯಾಗಿ
ಬಿಟ್ಟಳೆಂದು ಅವನು ತಿಳಿದುಕೊಳ್ಳುವನು.

(ಒಳಗೆ ಗದ್ದಲ)

ಕವಿ — (ಸ್ವಗತ) ಸೇನಾಧಿಕಾರಿಗಳನ್ನು ನಾನು ಒಳಗೆ ಹೋಗಿ
ಕಾಣುವೆನು; ಅದೇನೋ ಅವರಿಬ್ಬರಿಗೆ ಸ್ವಲ್ಪ ವೈ
ಮನಸ್ಯವಿದೆ. ಅವರನ್ನು ಒಂಟಿಯಾಗಿ ಬಿಡುವುದು ಯು
ಕ್ತವಲ್ಲ.

ಲೂಸಿಲ್ಯಸ್ — (ಒಳಗೆ) ನೀನು ಅವರತ್ತ ಬರಬಾರದು.

ಕವಿ — (ಒಳಗೆ) ಸಾವು ಅಲ್ಲದೆ ನನ್ನನ್ನು ಬೇರೇನೂ ತಡೆಯು
ವಂತಿಲ್ಲ!

(ಕವಿ ಮತ್ತು ಅವನ ಹಿಂದೆ ಲೂಸಿಲ್ಯಸ್
ಮತ್ತು ಟಿಟಿನ್ಯಸ್ ಪ್ರವೇಶ.)

ಕ್ಯಾಸ್ಯಸ್ — ಏನದು ಈಗ? ಏನು ಸಮಾಚಾರ?

ಕವಿ —
ಏನದು ಸೇನಾಧಿಕಾರಿಗಳೇ ಏನು?
ನಾಚಿಕೆಯಾಗದೇನು?
ಸ್ನೇಹದ ಮಾನವ ಗಣಿಸುತ್ತಲಿ,
ಮಿತ್ರರಾಗಿ ಬಾಳಿರಿ ಪ್ರೀತಿಯಲಿ;
ಕಂಡಿಹೆನು ಕೇಳು ನಿಶ್ಚಯದಿ
ವರ್ಷವ ನಿಮಗಿಂತಾನ್ ಇಹದಿ!

ಕ್ಯಾಸ್ಯಸ್ — ಅಹಾ, ಎಷ್ಟು ಕುಚೋದ್ಯತೆಯಿಂದಲಿ ಈ ಕಪಟ
ಯತಿ ಪ್ರಾಸಬದ್ಧವಾಗಿ ಮಾತಾಡುತ್ತಿರುವನು?

ಬ್ರೂಟಸ್ — ಎಲಾ, ಇಲ್ಲಿಂದ ಹೋಗು; ಹೋ ಉದ್ಧಟತನದ
ಮನುಷ್ಯ, ತೊಲಗು.

ಕ್ಯಾಸ್ಯಸ್ — ಬ್ರೂಟಸ್ ಅವನನ್ನು ಒಂಟಿಯಾಗಿ ಬಿಡು; ಅವನ ವರ್ತ
ನೆಯೇ ಆ ರೀತಿ!

ಬ್ರೂಟಸ್ — ಅವನು ಕಾಲಗಳಿಗೆಯನ್ನು ತಿಳಿದಾಗ ನನಗೆ ಅ
ವನ ಹಾಸ್ಯವೂ ತಿಳಿಯುವುದು. ಯುದ್ಧಗಳು ಹೀಗೆ
ನಾಟ್ಯವಾಡುವ ತುಂಟರೊಡನೇನು ಮಾಡಲಿಕೆ
ಇವೆ? ಎಲಾ, ಸಖನೆ, ಹೊರಟು ಹೋಗು!

ಕ್ಯಾಸ್ಯಸ್— ಹೋಗು, ಬೇಗನೆ ಹೋಗು; (ಕವಿ ಹೋಗುವನು.)

ಬ್ರೂಟಸ್— ಲೂಸಿಲ್ಯಸ್ ಮತ್ತು ಟಿಟಿನ್ಯಸ್—
ತಮ್ಮ ಸೇನಾದಳಗಳನ್ನು ಈ ದಿನದ ರಾತ್ರಿಯ
ತಂಗಲಿಕೆ ವ್ಯವಸ್ಥೆಗೊಳಿಸಲೆಂದು ಸೇನಾಪತಿಗ
ಳಿಗೆ ತಿಳಿಸಿ!

ಕ್ಯಾಸ್ಯಸ್— ಅನಂತರ ನೀವು ಬನ್ನಿರಿ; ಮೆಸ್ಸಾಲನ್ನೂ
ನಿಮ್ಮೊಡನೆ ಕರೆದುಕೊಂಡು ಕೂಡಲೆ ನಾವು ಇರು
ವಲ್ಲಿಗೆ ಬನ್ನಿ!

(ಲೂಸಿಲ್ಯಸ್ ಟಿಟಿನ್ಯಸ್ ಹೋಗುವರು)

ಬ್ರೂಟಸ್— ಲೂಸ್ಯಸ್, ಒಂದು ಹಿತ್ತಾಳಿ ಬಟ್ಟಲಲ್ಲಿ ದ್ರಾಕ್ಷಾರಸ ತಾ!

ಕ್ಯಾಸ್ಯಸ್— ನೀನು ಇಷ್ಟು ಕೋಪವನ್ನು ತಾಳುವೆಯೆಂದು ನಾ
ನು ಎಣಿಸಿರಲಿಲ್ಲ.

ಬ್ರೂಟಸ್— ನಾನು ಹಲವು ಚಿಂತೆಗೆ ಒಳಗಾಗಿ ಅಸ್ವಸ್ಥ
ನಾಗಿರುವೆನು, ಕ್ಯಾಸ್ಯಸ್!

ಕ್ಯಾಸ್ಯಸ್— ಆಕಸ್ಮಾತ್ತಾಗಿ ಶನಿಬಾಧೆಗೆ ಒಳಗಾದಾ
ಗಲೂ ಸಹ ನೀನು ನಿನ್ನ ವೇದಾಂತವನ್ನು ಉಪ
ಯೋಗಿಸುವುದಿಲ್ಲ.

ಬ್ರೂಟಸ್— ಯಾರೊಬ್ಬನೂ ತನ್ನ ದುಃಖವನ್ನು ಇಷ್ಟು ಮಾ
ನದಿಂದ ಸಹಿಸಲಾರ; ಪೋರ್ಷ್ಯ ಮೃತಳಾದಳು.

ಕ್ಯಾಸ್ಯಸ್— ಆಹಾ, ಪೋರ್ಷ್ಯ!

ಬ್ರೂಟಸ್— ಅವಳು ಮೃತಳಾಗಿ ಹೋದಳು.

ಕ್ಯಾಸ್ಯಸ್— ನಾನು ನಿನ್ನೊಡನೆ ಕೋಪದಿಂದ ಮಾತಾಡಿದೆನು;
ಆಗ ನಾನು ಕೊಲ್ಲಲ್ಪಡದೆ ಹೇಗೆ ಪಾರಾ
ದೆನೋ! ಆಹಾ, ನಿಸ್ಸಹಾಯಕ ಮತ್ತು ಮನಸ್ಸನ್ನು
ಕರಗಿಸುವ ನಷ್ಟವಾಯಿತು! ಅನಾರೋಗ್ಯವೇ
ನಾಗಿತ್ತು?

ಬ್ರೂಟಸ್— ನಾನು ಮನೆಯಲ್ಲಿಲ್ಲದುದು: ಬದಲು ಮತ್ತಿಗೆ
ಬಿಟ್ಟು ಕೊರಗಿದಳು. ಆ ಯುವಕ ಆಕ್ಟೇವ್ಯಸ್ ಮತ್ತು
ಮಾರ್ಕ್ ಆಂಟೊನಿ ಸೇನಾ ಪ್ರಬಲರಾದುದರ ಬಗ್ಗೆ
ದುಃಖ ಬೇರೆ! ಸೇವಕರು ಯಾರೂ ಇಲ್ಲದಿ
ದ್ದಾಗ ಅವಳು ಕೆಂಗೆಟ್ಟು ಬೆಂಕಿಯನ್ನು ನುಂಗಿದ
ಳೆಂದು ವಾರ್ತೆಯು ಬಂತು.

ಕ್ಯಾಸ್ಯಸ್— ಹಾಗೆ ಮರಣ ಹೊಂದಿದಳೆ?

ಬ್ರೂಟಸ್— ಅಂತೆಯೇ ಆಯಿತು.

853

ಕ್ಯಾಸ್ಸಿಯಸ್ — ಓ! ಅಮರರಾದ ದೇವತೆಗಳಿರಾ!

(ಲೂಸಿಯಸ್ ದ್ರಾಕ್ಷಾರಸ ಮತ್ತು ಮೇಣದ ಬತ್ತಿಯೊಂದಿಗೆ ಪ್ರವೇಶ.)

ಬ್ರೂಟಸ್ — ಅವಳನ್ನು ಕುರಿತಾಗಿ ಇನ್ನು ಮಾತಾಡುವುದು ಬೇಡ. ನನಗೊಂದು ಬಟ್ಟಲು ದ್ರಾಕ್ಷಾರಸವನ್ನು ಕೊಡು. ಇದರೊಳಗೆ ಎಲ್ಲ ನಿರ್ದಯ ಘಟನೆಗಳನ್ನು ಮುಳುಗಿಸುವೆ, ಕ್ಯಾಸ್ಸಿಯಸ್!

(ಕುಡಿಯುವನು.)

ಕ್ಯಾಸ್ಸಿಯಸ್ — ಘನವಾದ ಆ ಪ್ರತಿಜ್ಞೆಯನ್ನು ಕೇಳಲಿಕ್ಕೆ ನನ್ನ ಹೃದಯವು ಕಾತರಿಸುವುದು; ಇದೀಗ ಬಟ್ಟಲು ತುಂಬಿ ಹೊರಹರಿಯುವವರೆಗೂ ಸುರಿ ದ್ರಾಕ್ಷಾರಸವನ್ನು, ಲೂಸಿಯಸ್. ನನಗೆ ಬ್ರೂಟಸನ ಪ್ರೀತಿರಸವನ್ನು ಹೆಚ್ಚು ಕುಡಿಯಲಿಕ್ಕೆ ಆಗುವುದಿಲ್ಲ!

(ಕುಡಿಯುವನು.)

ಬ್ರೂಟಸ್ — ಒಳಗೆ ಬಾ, ಟಿಟಿನಿಯಸ್,

(ಟಿಟಿನಿಯಸನು ಮೆಸ್ಸಲಾನೊಡನೆ ಪುನಃ ಪ್ರವೇಶ.)

ಸುಸ್ವಾಗತ, ಪ್ರಿಯ ಮೆಸ್ಸಲಾ! ನಾವು ಈ ಮೇಣದ ಬತ್ತಿಯ ಈ ಬೆಳಕಿನ ಸುತ್ತಲು ಕುಳಿತು ನಮ್ಮ ಅವಶ್ಯವಾಗಿ ಬೇಕಾದ ಕೆಲಸಗಳನ್ನು ಕುರಿತಾಗಿ ಚರ್ಚಿಸುವ.

ಕ್ಯಾಸ್ಸಿಯಸ್ — ಪೋರ್ಷ್ಯಾ, ನೀನು ಹೋದೆಯಾ?

ಬ್ರೂಟಸ್ — ಸಾಕು ಬಿಡು, ಇನ್ನು ಸಾಕೆಯೆಂದೀಗ ಬೇಡುವೆ! ಮೆಸ್ಸಲಾ, ನನಗೆ ಬಂದ ಪತ್ರಗಳ ಪ್ರಕಾರ ಆ ಯುವಕ ಓಕ್ಟೇವಿಯಸನು ಮತ್ತು ಮಾರ್ಕ್ ಆಂಟೊನಿ ಇವರ ಬಹು ಪ್ರಬಲ ಸೈನ್ಯವು ನಮಗೆದುರಾಗಿ ಬರುತ್ತಿದ್ದು ಈಗ ಅವರ ದಂಡಯಾತ್ರೆಯು ಫಿಲಿಪ್ಪಿಯತ್ತ ತಿರುಗಿಸಲಾಗಿದೆ!

ಮೆಸ್ಸಲಾ — ನನ್ನಲ್ಲಿಯೂ ಅದನ್ನು ಕುರಿತಾಗಿ ಹಾಗೆಯೇ ಬರೆದ ಪತ್ರಗಳೂ ಇವೆ!

ಬ್ರೂಟಸ್ — ಹೆಚ್ಚಿನದೇನು ಹೇಳಲಾಗಿದೆ?

ಮೆಸ್ಸಲಾ — ಬಹಿಷ್ಕಾರ, ಗಡಿಪಾರು ಇತ್ಯಾದಿ ಪತ್ರಗಳ ಮೂಲಕ ಓಕ್ಟೇವಿಯಸ್ ಆಂಟೊನಿ ಮತ್ತು ಲೆಪಿಡಸ್ ಇವರು ಒಂದುನೂರು ಶಾಸನ ಸಭಾಸದಸ್ಯರನ್ನು ಕೊಂದಿರುವರು.

ಬ್ರೂಟಸ್ — ಅಲ್ಲಿ ನಮ್ಮ ಪತ್ರಗಳು ಒಂದೇ ವಿಷಯವನ್ನು
ಪ್ರತಿಪಾದಿಸುವಂತಿಲ್ಲ; ನನಗೆ ಬರೆದ ಪತ್ರ
ದಲ್ಲಿ ಎಪ್ಪತ್ತು ಜನ ಸದಸ್ಯರನ್ನು ಕೊಂದರು
ಎಂದು ಹೇಳಿದೆ. ಅವರ ನಿಷೇಧಾಜ್ಞೆಗಳಿಗಾ
ದವರಲ್ಲಿ ಸಿಸ್ಸೆರೋ ಒಬ್ಬನು.

ಕ್ಯಾಸ್ಯಸ್ — ಸಿಸ್ಸೆರೋನು ಒಬ್ಬನು!

ಮೆಸ್ಸಲಾ — ಆ ನಿಷೇಧಾಜ್ಞೆಗನುಗುಣವಾಗಿ ಸಿಸ್ಸೆರೋನೂ
ಮೃತನಾದನು; ಪ್ರಭುವೆ, ನಿಮಗೆ ನಿಮ್ಮ ಪತ್ನಿಯ
ಪತ್ರಗಳು ಬಂದುವೆ?

ಬ್ರೂಟಸ್ — ಇಲ್ಲ, ಮೆಸ್ಸಲಾ.

ಮೆಸ್ಸಲಾ — ನಿಮಗೆ ಬಂದ ಪತ್ರದಲ್ಲಿ ಅವರ ವಿಷಯವಾಗಿ
ಏನೂ ಇಲ್ಲವೆ?

ಬ್ರೂಟಸ್ — ಏನೂ ಇಲ್ಲ, ಮೆಸ್ಸಲಾ.

ಮೆಸ್ಸಲಾ — ಅದು ನನಗೆ ಆಶ್ಚರ್ಯಕರವಾಗಿ ತೋರುವುದು.

ಬ್ರೂಟಸ್ — ನೀನೇಕೆ ಕೇಳುವೆ? ನಿನಗೆ ಬಂದ ವಾರ್ತೆಯಲ್ಲಿ
ಅವಳ ವಿಷಯ ಇದ್ದೇ ಇರಬೇಕು.

ಮೆಸ್ಸಲಾ — ಏನೂ ಇಲ್ಲ, ನನ್ನ ಪ್ರಭೂ!

ಬ್ರೂಟಸ್ — ಈಗ, ನೀನೊಬ್ಬ ರೋಮನ್ ನಾಗರಿಕನು. ಆ
ದುದರಿಂದ ನಿಜ ಹೇಳು.

ಮೆಸ್ಸಲಾ — ಹಾಗಾದರೆ ಒಬ್ಬ ರೋಮನ್ನನಂತೆ ನಾನು
ನುಡಿವುದನ್ನು ಕೇಳಿರಿ. ನಿಜವಾಗಿ ಅವರು ಬಹು ವಿ
ಚಿತ್ರ ರೀತಿಯಲ್ಲಿ ಮೃತರಾದರು.

ಬ್ರೂಟಸ್ — ಏಕೆ! ನಿನಗೆ ಪೋರ್ಶ್ಯ ಶುಭಮಸ್ತು! ಮೆಸ್ಸಲಾ,
ನಾವೂ ಮರಣ ಹೊಂದಬೇಕು; ಅವಳೂ ಒಮ್ಮೆ
ಸಾಯಬೇಕೆಂಬ ಧ್ಯಾನದೊಡನೆಯೆ ಆ ಅಗಲು
ವಿಕೆಯನ್ನು ನಾನು ತಾಳ್ಮೆಯಲ್ಲಿ ಸಹಿಸಬಲ್ಲೆನು.

ಮೆಸ್ಸಲಾ — ಅಷ್ಟು ದೊಡ್ಡ ಜನವೂ ಸಹ ಅಪಾರ ಕಷ್ಟನ
ಷ್ಟಗಳನ್ನು ಅನುಭವಿಸಬೇಕು.

ಕ್ಯಾಸ್ಯಸ್ — ನಾನು ನಿನ್ನಷ್ಟೆ ಇಂಥ ವಿಚಾರಗಳನ್ನು ಗ
ಣಿಸಬಲ್ಲೆ, ಹಾಗಿದ್ದರೂ ನನ್ನ ಸ್ವಭಾವಕ್ಕೆ
ಇದನ್ನು ಸಹಿಸಲಸದಳವಾಗಿದೆ!

ಬ್ರೂಟಸ್ — ಸರಿ, ನಾವು ಕಾರ್ಯೋನ್ಮುಖರಾಗುವ! ಈಗ ನಾ
ವು ಫಿಲಿಪ್ಪಿಗೆ ಹೋಗುವುದನ್ನು ಕುರಿತು ನೀನೇನು
ಹೇಳುವೆ?

ಕ್ಯಾಸ್ಯಸ್ — ಅದು ಸರಿಯೆಂದು ನಾನು ಭಾವಿಸಲಾರೆ.

ಬ್ರೂಟಸ್ — ನಿನ್ನ ಕಾರಣಗಳು ?

ಕ್ಯಾಸ್ಯಸ್ — ಇದು; ಶತ್ರುಗಳೇ ನಮ್ಮ ಬೆಂಬತ್ತುವುದು ಒಳ್ಳೆಯದು; ಹಾಗೆ ಅವನು ತನ್ನಲ್ಲಿರುವ ಸಾಮಾಗ್ರಿಗಳನ್ನೆಲ್ಲ ವ್ಯರ್ಥಗೊಳಿಸುವನು; ಅವನ ಮುಂದೊತ್ತಿ ಬರಲು ಅವನ ಸೈನಿಕರಿಗೆ ಸಾಕಾಗಿ ಹೋಗುವುದು; ನಾವು ವಿಶ್ರಮಿಸುವ; ನಮ್ಮ ರಕ್ಷಣೆಗೆ ಸಕ್ರಿಯ ಸಾಹಸವಿಲ್ಲ, ಹಾಯಾಗಿ ವಿಶ್ರಮಿಸಲಿ!

ಬ್ರೂಟಸ್ — ಹಿತಕಾರಕ ಸಲಹೆಗಳು ಉತ್ತಮವಾದವಕ್ಕೆ ಅವಶ್ಯಕವಾಗಿ ಎಡೆಗೊಡಬೇಕು. ಫಿಲಿಪ್ಪಿಯ ಮತ್ತು ಇಲ್ಲಿವರೆಗಿರುವ ಜನರು ಬಲಾತ್ಕಾರಕವೆಂಬಂತೆ ನಮ್ಮೊಡನಿರುವರು; ನಮಗೆ ಆರ್ಥಿಕ ಸಹಕರಿಸಲು ಅಂಜುವರು; ಅದೇ ದಾರಿಗಾಗಿ ಬರುವ ವೈರಿಗಳು ತಮ್ಮ ಸಂಖ್ಯೆಯನ್ನು ಹೆಚ್ಚಿಸುವರು; ಬನ್ನಿರಿ, ಜನರ ಸಹಕಾರ, ಪ್ರೋತ್ಸಾಹವನ್ನು ಪಡೆದು ಆ ಶಕ್ತಿಯಿಂದ ಹೊಸ ಹುರುಪಿನಿಂದ ಅವರನ್ನು ಹತ್ತಿಕ್ಕುವ; ಫಿಲಿಪ್ಪಿಯಲ್ಲಿ ನಾವು ಅವರನ್ನು ಎದುರಾದರೆ ಇಲ್ಲಿರುವ ಜನವು ನಮ್ಮನ್ನು ಬೆಂಬಲಿಸುವರು!

ಕ್ಯಾಸ್ಯಸ್ — ಪ್ರಿಯ ಸೋದರನೆ, ನಾನನ್ನುವೆನು ಕೇಳು;

ಬ್ರೂಟಸ್ — ನಿನ್ನ ಕ್ಷಮೆ ಬೇಡುವೆನು; ಅದಲ್ಲದೆ ಒಂದು ತಿಳಿ. ನಾವು ನಮ್ಮ ಮಿತ್ರರ ಸಹಾಯವನ್ನು ಪರಿಪೂರ್ಣವಾಗಿ ಪಡೆಯುತ್ತಿದ್ದೇವೆ. ಇದೀಗ ನಮ್ಮ ಸೈನ್ಯವು ಪ್ರಬಲವಾಗಿದೆ. ನಮ್ಮ ಧ್ಯೇಯವು ಯೋಗ್ಯವಿದೆ. ಶತ್ರು ಸೈನ್ಯವು ದಿನದಿನವೂ ಹೆಚ್ಚುತಿದೆ. ನಮ್ಮ ಶಕ್ತಿಯು ಉತ್ಕೃಷ್ಟವಾಗಿದೆಯಾದರೂ ಈಗ ಅದನ್ನು ಕಳೆದುಕೊಳ್ಳುವಂತಿರುವೆವು; ಮಾನವನ ವ್ಯವಹಾರದಲ್ಲಿ ತೆರೆಗಳಿವೆ; ಅವು ಪ್ರವಾಹದೊಡಗೂಡಿ ಅವರನ್ನು ಸೌಭಾಗ್ಯದತ್ತ ಕೊಂಡೊಯ್ಯುವುದು; ಅಂತಿಲ್ಲದಿರಲು ಜೀವನ ಸಾಗರ ಪಯಣಗಳೆಲ್ಲ ಹಳ್ಳದಲ್ಲಿ ಬಿದ್ದು ವಿಪತ್ತುಗಳಲ್ಲಿ ಸಿಲುಕುವುವು; ಅಂತಿರುವ ತುಂಬು ಸಮುದ್ರದಲ್ಲಿ ನಾವು ತೇಲುತ್ತಿರುವೆವು; ಹಾಗಿರಲು ನಾವು ಪ್ರವಾಹವನ್ನು ಎದುರಿಸುತ್ತಲಿ ಮುಂದಕ್ಕೆ ಹೋಗಬೇ

ಹೌದು, ಅದೀಗ ನಮ್ಮ ಪ್ರಯತ್ನದಂತೆ ಸಾಗಲಿಬೇಕು.

ಕ್ಯಾಸ್ಯಸ್— ಹಾಗಾದರದೂ ನಿನ್ನ ಸಂಕಲ್ಪ ಬಲದಿಂದ ಮುಂದುವರಿಯುವ; ನಾವು ನಮ್ಮೊಳಗೆ ಒಂದಾಗಿ ಅವರನ್ನು ಫಿಲಿಪ್ಪಿಯಂತೆ ಎದುರುಗೊಳ್ಳುವ!

ಬ್ರೂಟಸ್— ನಮ್ಮ ಮಾತಿನೊಳಗೆಯೇ, ಕತ್ತಲು ಹರಿದಿದೆ. ಪ್ರಕೃತಿಯು ಅದರ ನಿಯಮವನ್ನು ಅವಶ್ಯವಾಗಿ ಪಾಲಿಸಬೇಕು; ಈ ರಾತ್ರಿಯನು ಸ್ವಲ್ಪ ವಿಶ್ರಾಂತಿಗೆಂದುಪಯೋಗಿಸುವ; ಹೆಚ್ಚೇನೂ ಹೇಳಲಿಕ್ಕೆ ಇಲ್ಲ.

ಕ್ಯಾಸ್ಯಸ್— ನಾವು, ಮಲಗುವ, ರಾತ್ರಿ ಶುಭವಾಗಲಿ; ನಾಳೆ ಬೆಳಿಗ್ಗನೇ ಎದ್ದು ಹೋಗುವ!

ಬ್ರೂಟಸ್— ಲೂಸ್ಯಸ್, ನನ್ನ ಅಂಗಿ! (ಲೂಸ್ಯಸ್ ಹೋಗುವನು.) ಪ್ರಿಯ ಮೆಸ್ಸಲಾ, ನಿನಗೆ ಶುಭವಾಗಲಿ; ಟಿಟಿನ್ಯಸನೇ, ರಾತ್ರಿ ಶುಭವಾಗಲಿ; ಮತ್ತು ಚೆನ್ನಾಗಿ ವಿಶ್ರಾಂತಿ ಪಡೆಯಿರಿ.

ಕ್ಯಾಸ್ಯಸ್— ಹಾ ನನ್ನ ಪ್ರಿಯ ಸೋದರನೇ, ರಾತ್ರಿಯ ಪ್ರಾರಂಭವು ಶುಭವೆನಿಸಲಿಲ್ಲ. ಆ ವಿಷಮತೆಯು ನಮ್ಮ ಆತ್ಮಗಳಲ್ಲಿ ಆಗದಿರಲಿ; ಬ್ರೂಟಸನೇ, ಹಾಗ ನಡೆ ಇರಲಿ!

ಬ್ರೂಟಸ್— ಎಲ್ಲವೂ ಸುಗಮವಾಗಿದೆ.

ಕ್ಯಾಸ್ಯಸ್— ರಾತ್ರಿ ಸುಖವಾಗಲಿ, ನನ್ನ ಪ್ರಭುವೇ,

ಬ್ರೂಟಸ್— ರಾತ್ರಿ ಸುಗಮವಾಗಲಿ, ನನ್ನ ಸೋದರನೇ,

ಟಿಟಿನ್ಯಸ್— ಮೆಸ್ಸಲಾ— ರಾತ್ರಿ ಸುಖಕರವಾಗಲಿ, ಸ್ವಾಮಿ ಬ್ರೂಟಸನೇ.

ಬ್ರೂಟಸ್— ಎಲ್ಲರಿಗೂ ನಮಸ್ಕಾರ.

(ಕ್ಯಾಸ್ಯಸ್, ಟಿಟಿನ್ಯಸ್, ಮೆಸ್ಸಲಾ – ಹೋಗುವರು.)

(ಲೂಸ್ಯಸನು ನಿಲುವಂಗಿ ಸಹಿತ ಬರುವನು.)

ನನ್ನ ನಿಲುವಂಗಿಯನ್ನು ಕೊಡು; ನನ್ನ ಲುಟ್ ವಾದ್ಯವೆಲ್ಲ ಎಲ್ಲಿವೆ?

ಲೂಸ್ಯಸ್— ಇಲ್ಲಿ, ಶಿಬಿರದಲ್ಲಿದೆ.

ಬ್ರೂಟಸ್— ಏಕೆ ಆಲಸ್ಯದಿಂದ ಮಾತಾಡುತ್ತಿರುವೆ? ಬಡ ತುಂಟ, ನಿನ್ನಲ್ಲಿ ತಪ್ಪಿಲ್ಲ ನೀನು. ನಿನ್ನಲ್ಲಿ ಎಲ್ಲರು ದೃಷ್ಟಿ ಹರಿಸಿದರು; ಕ್ಲಾಡಿಯಸನ್ನು ಮತ್ತ ನನ್ನ ಕೆಲವು ಜನವನು ಕರೆ; ಅವರು ನನ್ನ ಶಿ

ಬಿಡದಲ್ಲಿರುವ ಹಾಸುದಿಂಬಿನಲ್ಲಿ ಮಲಗುವಂ
ತಾಗಿರುವೆನು.

ಲೂಸ್ಯಸ್ — ವಾರೋ ಮತ್ತು ಕ್ಲಾಡಿಯಸ್—

(ವಾರೋ ಮತ್ತು ಕ್ಲಾಡಿಯಸ್ ಪ್ರವೇಶ.)

ವಾರೋ — ಪ್ರಭುವೇ, ಕರೆದಿರಾ?

ಬ್ರೂಟಸ್ — ನೋಡಿರಯ್ಯ, ನನ್ನ ಶಿಬಿರದೊಳಗೆಯೇ ಮಲಗಿ ನಿ
ದ್ರಿಸುವಿರೆಂದು ಕೇಳಿಕೊಳ್ಳುವೆನು. ನನ್ನ ಕಾರ್ಯಕ
ಲಾಪಗಳ ಬಗೆ ನೋಡಲು ಕ್ಯಾಸ್ಯಸನಿಗೆ ತಿಳಿ
ಸಲು ನಿಮ್ಮನು ಆಗಿಂದಾಗ್ಯೆ ನಾನು ಕರೆದೆ
ಬ್ಬಿಸಬಹುದು!

ವಾರೋ — ನಿಮ್ಮ ಇಷ್ಟದಂತಾಗಲಿ; ನಾವು ಇಲ್ಲಿ ನಿಂ
ತು ನಿಮ್ಮ ಅನುಕೂಲತೆಯನು ನೋಡಿಕೊಳ್ಳುವೆವು.

ಬ್ರೂಟಸ್ — ನಾನು ಹಾಗೆನ್ನುತ್ತಿಲ್ಲ, ಮಾನ್ಯರೇ, ಮಲಗಿಕೊ
ಳ್ಳಿ; ಬಹುಶಃ ನಾನು ನನ್ನಲ್ಲೇ ಆಲೋಚಿಸು
ತಿರಬಹುದು. ಲೂಸ್ಯಸನೆ, ಇಲ್ಲಿ ನೋಡು, ನಾನು ಹು
ಡುಕುತಿದ್ದ ಪುಸ್ತಕವು ನನ್ನ ಅಂಗಿಯ ಜೇಬಿ
ನೊಳಗೆಯೇ ಹಾಕಿದ್ದೆನು.

ಲೂಸ್ಯಸ್ — ಪ್ರಭುಗಳು ನನಗದನ್ನು ಕೊಟ್ಟಿರಲಿಲ್ಲವೆಂ
ಬುದಾಗಿ ನನಗೆ ನಿಶ್ಚಯವಾಗಿತ್ತು.

ಬ್ರೂಟಸ್ — ಎಲಾ ಹುಡುಗ, ನನಗೆ ಮರೆವು ಹೆಚ್ಚು; ನನ್ನನ್ನು
ನೀನು ಸಹಿಸಿಕೋ; ನಿನ್ನ ದು:ಖಪೂರ್ಣ ಕಣ್ಣುಗ
ಳನ್ನು ಕ್ಷಣ ಕಾಲ ತೆರೆದಿಟ್ಟು, ನಿನ್ನ ಒಂದೆರ
ಡು ಹಾಡುಗಳನ್ನು ತಂಬೂರಿ ಬಾರಿಸಿ
ಹೇಳು.

ಲೂಸ್ಯಸ್ — ಆಗಲಿ, ಪ್ರಭುವೇ; ನಿಮಗೆ ಸಂತೋಷವಾದರೆ—

ಬ್ರೂಟಸ್ — ಅದು ನನಗೆ ಸಂತೋಷ, ಹುಡುಗಾ! ಇದೀಗ ನಿ
ನ್ನನ್ನು ತುಂಬಾ ತೊಂದರೆಗೊಳಿಸುತ್ತಿರುವೆನು; ನಿನ
ಗೆ ಸಾಧ್ಯವಾದರೆ ಮಾತ್ರ—

ಲೂಸ್ಯಸ್ — ಅದು ನನ್ನ ಕರ್ತವ್ಯ, ಸ್ವಾಮಿ.

ಬ್ರೂಟಸ್ — ನಿನ್ನ ಶಕ್ತಿಗೂ ಮೀರಿ ನಿನ್ನನ್ನು ನಾನು ದು
ಡಿಸಬಾರದು. ಯುವಕರು ವಿಶ್ರಾಂತಿ ಸಮಯಕ್ಕಾ
ಗಿ ಹಾತೊರೆವರೆಂದು ನನಗೆ ಗೊತ್ತು!

ಲೂಸ್ಯಸ್ — ನಾನು ಆಗಲೇ ನಿದ್ರಿಸಿರುವೆನು, ಪ್ರಭುವೇ.

ಬ್ರೂಟಸ್ — ಅದು ತುಂಬ ಒಳ್ಳೆಯದು! ಇನ್ನೀಗ ಪುನಃ ನಿ

ದ್ರುಸು. ನಾನು ನಿನ್ನನ್ನು ಬಹಳ ಸಮಯ ಇಲ್ಲಿ ಇರಿ
ಸಲಾರೆನು; ನಾನು ಬದುಕಿದರೆ ನಿನಗೆ ಒಳ್ಳೆಯವನಾಗಿ
ರುವೆನು;
(ಸಂಗೀತ ಹಾಡುಸ್ವರ)
ಇದು ನಿದ್ದೆ ಬೀಳಿಸುತ್ತಿರುವ ರಾಗವಾಗಿದೆ.
ಎಲೈ ಕೊಲೆಗಾರ ಅರೆನಿದ್ದೆಯೇ, ನೀನು ಹೇಳುವ
ಈ ನನ್ನ ಹುಡುಗ, ಆವನ ಮೇಲೆ ನಿದ್ರಾದೇವ
ತೆಯ ಮುದ್ರೆ ಕೋಲನ್ನು ಇಡುವಿ. ಸೌಮ್ಯನೆನಿಸಿದ
ತುಂಟನೇ, ರಾತ್ರಿ ನಿನಗೆ ಹಿತವೆನಿಸಲಿ; ನಾನು
ನಿನ್ನನ್ನು ಎಬ್ಬಿಸುವ ತಪ್ಪನ್ನು ಮಾಡಲಾ
ರೆನು; ನೀನು ತೂಕಡಿಸಿದರೂ ನಿನ್ನ ತಂಬೂ
ರಿಯನ್ನೆ ಒಡೆದರೂ ನಾನು ವಿಶಾಲವಿರುವೆನು. ಓ
ಳ್ಳೆಯ ಹುಡುಗ, ರಾತ್ರಿ ಸುಗಮವೆನಿಸಲಿ; ಈಗ ಇದ
ನ್ನು ನೋಡೋಣ; ನಾನು ಓದಿ ನಿಲ್ಲಿಸಿದ ಈ
ಪುಸ್ತಕದ ಹಾಳೆ ಮಗುಚಿಕೊಂಡಿರುತ್ತೆ; ಹಾ, ಇದೇ
ದು ಭಾವಿಸುತ್ತೇನೆ; ಇದು, ಇದು!
(ದೀಪ ಕಿರಿದಾಗುವುದು)
(ಸೀಸರನ ಪ್ರೇತದ ಪ್ರವೇಶ)
ಈ ಮೇಣದ ಬತ್ತಿಯು ಎಷ್ಟು ಮಂದವಾಗಿ ಉರಿ
ಯುವುದು! ಹಾ, ಇದಾರು ಬರುವನು? ನನ್ನ ದು
ರ್ಬಲ ಕಣ್ಣಿಗೆ ಈ ಭೂತದ ಬೃಹದಾಕಾರ ಮಾ
ಯೆಯನ್ನು ತೋರಿಸುತ್ತಿದೆಯೆಂದು ಭಾವಿಸುವೆ; ಇದು
ನನ್ನೆಡೆಗೆ ಬರುತ್ತಿದೆ. ನೀನೇನೋ ಒಂದು ರೂ
ಪವೋ? ಒಂದು ದೈವವೋ? ಅದಲ್ಲ ದೇವದೂತನೋ?
ಅಥವಾ ಪಿಶಾಚಿಯೋ? ಆಕೆ ನನ್ನ ರಕ್ತವನ್ನು
ತಣ್ಣಗಾಗಿಸುವ ಮತ್ತು ಕೂದಲನ್ನು ನೆಟ್ಟನೆ
ನಿಲಿಸಿ ನೋಡಿಸುವ ನೀನಾರು? ನನ್ನೊಡನೆ ಹೇಳು!

ಪ್ರೇತ — ನಿನ್ನ ಪೈಶಾಚಿಕ ರೂಪ, ಬ್ರೂಟಸ್!

ಬ್ರೂಟಸ್ — ನೀನೇತಕ್ಕೆ ಬಂದೆ?

ಪ್ರೇತ — ನೀನು ನನ್ನನ್ನು ಫಿಲಿಪ್ಪಿಯಲ್ಲಿ ಕಾಣುವೆಯೆಂದು ನಿನಗೆ ಹೇಳಲಿಕ್ಕೆ!

ಬ್ರೂಟಸ್ — ಸರಿ, ನಿನ್ನನ್ನು ಹಾಗಾದರೆ ನಾನು ಪುನಃ ಕಾಣುವೆ!

ಪ್ರೇತ — ಆಹಾ, ಫಿಲಿಪ್ಪಿಯಲ್ಲಿ;

ಬ್ರೂಟಸ್ — ಏಕೆ? ನಾನು ಫಿಲಿಪ್ಪಿಯಲ್ಲಿ ನಿನ್ನನ್ನು ಆಗ ಕಾಣುವೆನು!

(ಪ್ರೇತ ಹೋಗುವುದು)

859

ಆಹಾ, ಅದೃಶ್ಯವಾದ ಪ್ರೇತವೇ, ನಾನೀಗ
ಧೈರ್ಯ ತಂದುಕೊಂಡಿರುವೆ; ನಿನ್ನೊಡನೆ ಹೆ-
ಚ್ಚು ಮಾತಾಡಬಯಸುವೆನು; ಲೂಸ್ಯಸ್, ಹುಡುಗನೇ,
ವಾರೋ, ಕ್ಲಾಡಿಯಸ್, ಅಯ್ಯಾ ಏಳಿರಿ, ಕ್ಲಾಡಿಯಸ್!

ಲೂಸ್ಯಸ್ — ಆ ತಂಬೂರಿ ತಂತಿಗಳು ಸ್ವಾಮೀ, ಅವು ಸರಿಯಿಲ್ಲ.

ಬ್ರೂಟಸ್ — ಅವನು ಇನ್ನೂ ತನ್ನ ತಂಬೂರಿಯ ತನ್ನ ಮಿಡಿ-
ಯುತ್ತಿರುವೆನೆಂದೇ ಭಾವಿಸಿರುವನು; ಲೂಸ್ಯಸನೇ,
ಎಚ್ಚರವಾಗು!

ಲೂಸ್ಯಸ್ — ನನ್ನ ಪ್ರಭುವೇ,

ಬ್ರೂಟಸ್ — ನೀನೇನು ಕನಸನ್ನು ಕಂಡೆಯೋ, ಲೂಸ್ಯಸ್?
ನೀನು ಅಷ್ಟೊಂದು ಅಬ್ಬರಿಸಿದೆಯಲ್ಲಾ?

ಲೂಸ್ಯಸ್ — ಸ್ವಾಮೀ, ನಾನು ಕೂಗಿಕೊಂಡೆನೋ ತಿಳಿಯೆನು

ಬ್ರೂಟಸ್ — ಹೌದು, ನೀನು ಅರಚಿದೆ; ಏನಾದರೂ ಕಂಡೆಯೋ?

ಲೂಸ್ಯಸ್ — ಏನೂ ಇಲ್ಲ, ಪ್ರಭುವೇ!

ಬ್ರೂಟಸ್ — ಲೂಸ್ಯಸ್, ಮಲಗು; ನಿದ್ರಿಸು!
ಎಲಾ ಕ್ಲಾಡಿಯಸ್, ಏಳು, ಎಬ್ಬಿಸು ನೀನು ಏಳು!

ವಾರೋ — ನನ್ನ ಪ್ರಭುವೇ,

ಕ್ಲಾಡಿಯಸ್ — ನನ್ನ ಸ್ವಾಮೀ,

ಬ್ರೂಟಸ್ — ನೀವು ನಿದ್ದೆಯಲ್ಲಿ ಏಕೆ ಅಷ್ಟು ಕೂಗುತ್ತಿದ್ದಿರಿ?

ವಾರೋ ಕ್ಲಾಡಿಯಸ್ — ನಾವು ಅಂತೆ ಕೂಗಿದೆವೋ, ಪ್ರಭುವೇ?

ಬ್ರೂಟಸ್ — ನೀವು ಏನಾದರೂ ಕಂಡಿರಾ?

ವಾರೋ — ಇಲ್ಲ, ನನ್ನ ಸ್ವಾಮೀ, ಏನನ್ನೂ ಕಾಣಲಿಲ್ಲ.

ಕ್ಲಾಡಿಯಸ್ — ನಾನೂ ಕಾಣಲಿಲ್ಲ, ಪ್ರಭುವೇ!

ಬ್ರೂಟಸ್ — ಹೋಗಿ ಸೋದರ ಕ್ಯಾಸ್ಯಸನಿಗೆ ನಾನು ಹೇಳಿದೆ-
ನೆಂದು ತಿಳಿಸಿರಿ; ಅವನ ಸೈನ್ಯವನ್ನು ಮುಂಚಿತವಾ-
ಗಿ ತನ್ನ ಸೈನ್ಯದವರನ್ನು ಮುಂಚೆಯೇ ಸನ್ನದ್ಧನಾಗಿರು-
ವಂತೆ ಹೇಳಿರಿ; ನಾವೂ ಅಂತೆ ಸಾಗುವೆವು.

ವಾರೋ ಕ್ಲಾಡಿಯಸ್ — ಪ್ರಭುವೇ, ಹಾಗೇ ಮಾಡಲಾಗುವುದು.

(ಹೋಗುವರು)

ಅಂಕ ೫.

ದೃಶ್ಯ - ೧ ; ಫಿಲಿಪ್ಪಿ ಮೈದಾನದಲ್ಲಿ.

(ಒಕ್ಟೇವ್ಯಸ್, ಆಂತೋನಿ ಮತ್ತು ಅವರ ಸೈನ್ಯ ಪ್ರವೇಶ.)

ಒಕ್ಟೇವ್ಯಸ್ — ಆಂತೋನಿಯೆ, ನಮ್ಮ ಹಾರೈಕೆ ಈಗ ಈಡೇರಿ ಬಂತಯ್ಯ! ವೈರಿಗಳು ಗುಡ್ಡಪ್ರದೇಶ ಮತ್ತು ಎತ್ತರದ ಸ್ಥಳಗಳಲ್ಲಿರುವರಲ್ಲದೆ ಈ ಮರಳು ತಗ್ಗು ಸ್ಥಳಕ್ಕಾಗಿ ಬರಲಾರರೆಂದು ನೀನು ಹೇಳಿದೆ. ಆದರೆ ಅದು ಅಂತಲ್ಲವೆಂದು ಸ್ಪಷ್ಟವಾಗಿದೆ. ಅವರ ಸೈನ್ಯಗಳು ಹತ್ತಿರವೇ ಇರುವುವು; ಅವರು ನಮ್ಮ ಮಾತು ಕೇಳುವುದಕ್ಕಿಂತ ನಾವು ಹೇಳುವುದಕ್ಕಿಂತ ಬಹು ಮುಂಚೆಯೇ ಅವರಿಲ್ಲಿ, ಫಿಲಿಪ್ಪಿಯಲ್ಲಿ, ನಮ್ಮೊಡನೆ ಹೋರಾಡಲು ಸಿದ್ಧರಾಗಿರುವರು!

ಆಂತೋನಿ — ಹು-ಹೂಂ, ನಾನು ಅವರ ರಹಸ್ಯವನ್ನು ತಿಳಿಯಬಲ್ಲೆನು. ಅವರು ಏಕೆ ಅಂತೆಸಗುವರೆಂದು ನನಗೆ ಗೊತ್ತಿದೆ; ಬೇರೆಡೆ ಇರಲು ಅವರು ಇಚ್ಛಿಸಬಹುದು, ಆದರೆ ಇಲ್ಲಿಗೆ ಅವರೇನೋ ಸ್ಥೈರ್ಯಶಾಲಿಗಳಂತೆ ಭಯದಿಂದಲೇ ಬರುವರು; ತಾವು ಹೆದರುವುದಿಲ್ಲವೆಂದು ನಮಗೆ ತೋರಿಸಲು ಸ್ಥೈರ್ಯವನ್ನು ಪ್ರದರ್ಶಿಸುವರು, ಆದರೆ ಅದು ಅಂತಲ್ಲ!

(ಒಬ್ಬ ದೂತನ ಪ್ರವೇಶ.)

ದೂತ — ಸೇನಾನಿಗಳೇ, ಸಿದ್ಧರಾಗಿ. ವೈರಿಗಳು ಬಹು ಶೌರ್ಯದಿಂದಲೆ ಬರುತ್ತಿರುವರು. ಅವರ ಕೆನ್ನೆತ್ತರ ಬಣ್ಣದ ಪತಾಕೆಗಳು ಹಾರುತಿವೆ; ಕೂಡಲೆ ತಕ್ಕ ಶೀಘ್ರ ಕ್ರಮ ತೆಗೆದುಕೊಳ್ಳುವುದು ಅವಶ್ಯ!

ಆಂತೋನಿ — ಒಕ್ಟೇವಿಯಸ್, ನಿನ್ನ ಸೈನ್ಯವನ್ನು ಸಮತಟ್ಟು ಇರುವ ಆ ಮೈದಾನದ ಎಡಭಾಗಕ್ಕಾಗಿ ನಿಧಾನವಾಗಿ ಮುನ್ನಡೆಸು!

ಒಕ್ಟೇವ್ಯಸ್ — ನಾನು ಬಲಭಾಗದಲ್ಲಿ; ನೀನು ಎಡದಲ್ಲಿರು.

ಆಂತೋನಿ — ಬಿಕ್ಕಟ್ಟಿನ ಈ ವೇಳೆಯಲ್ಲಿ ನೀನೇಕೆ ನನ್ನನ್ನು ವಿರೋಧಿಸುವೆ?

ಒಕ್ಟೇವ್ಯಸ್ — ನಾನು ನಿನ್ನನ್ನು ವಿರೋಧಿಸೆನು; ಆದರೆ ನಾನು ಹೇಳಿದಂತೆಯೇ ನಾನು ಮಾಡುವೆನು.

(ಫಿಲಿಪ್ಪಿ ಬಯಲು ಪ್ರದೇಶ.)

(ಸೇನಾವಾದ್ಯ; ಬ್ರೂಟಸ್, ಕ್ಯಾಸ್ಯಸ್ ಮತ್ತು ಅವರ ಸೈನ್ಯ; ಲೂಸಿಲ್ಯಸ್, ಟಿಟಿನ್ಯಸ್, ಮೆಸ್ಸಾಲ ಮತ್ತಿತರರು.)

ಬ್ರೂಟಸ್— ಹಾ, ಅವರು ನಿಂತಿರುವರು; ಬಹುಶಃ ಸಂಧಾನವನ್ನು ಬಯಸಬಹುದು.

ಕ್ಯಾಸ್ಯಸ್— ನಿಂತಲ್ಲಿಯೇ ನಿಲ್ಲು, ಟಿಟಿನ್ಯಸನೆ; ನಾವು ಹೋಗಿ ಮಾತಾಡಬೇಕು.

ಒಕ್ಟೇವ್ಯಸ್— ಮಾರ್ಕ್ ಆಂತೋನಿ, ನಾವು ಸಮರಕ್ಕೆ ಸಿದ್ಧರಾಗಿರುವೆವು ಎಂದು ತಿಳಿಸೋಣವೇ?

ಆಂತೋನಿ — ಇಲ್ಲ ಸೀಸರ್, ಅವರು ತಾಗಿದಾಗ ನಾವು ಪ್ರತಿಭಟಿಸುವ; ಮುಂದಕ್ಕೆ ಹೋಗು. ಸೇನಾನಿಗಳು ಮಾತಾಡಲಿಕ್ಕೆ ಇರಬಹುದು.

ಒಕ್ಟೇವ್ಯಸ್— ಧ್ವಜವನ್ನು ತೋರಿಸುವವರೆಗೆ ಕದಲಬೇಡಿ.

ಬ್ರೂಟಸ್— ದೇಶೀಯರೇ, ಹೊಡೆತಕ್ಕಿಂತ ಮೊದಲು ಮಾತುಗಳು, ಅಲ್ಲವೇ?

ಒಕ್ಟೇವ್ಯಸ್— ನಿನ್ನಂತೆ ನಾವು ಮಾತಾಡಲಿಚ್ಛಿಸುತ್ತೇವೆಂದಲ್ಲ.

ಬ್ರೂಟಸ್— ಕೆಟ್ಟ ಹೊಡೆತಗಳಿಗಿಂತ ಒಳ್ಳೆಯ ಮಾತುಗಳು ಉತ್ತಮ, ಒಕ್ಟೇವ್ಯಸ್.

ಆಂತೋನಿ— ನಿನ್ನ ಕೆಟ್ಟ ಹೊಡೆತಗಳೊಡನೆ, ಬ್ರೂಟಸ್, ನೀನು ಒಳ್ಳೆ ಮಾತುಗಳನ್ನಾಡುವೆ. "ಅಮರನಾಗು ಶ್ರೀ ಸೀಸರ್" ಎನ್ನುತ್ತ ನೀನು ಸೀಸರನ ಹೃದಯದಲ್ಲಿ ಕೊರೆದ ಗಾಯವನ್ನು ನೋಡು.

ಕ್ಯಾಸ್ಯಸ್— ಆಂತೋನಿಯೇ, ನಿನ್ನ ಹೊಡೆತಗಳು ರೀತಿಯೆಂತಹುದು ಎಂಬುದು ಇನ್ನೂ ತಿಳಿಯದು; ಆದರೆ ನಿನ್ನ ರಸವತ್ತಾದ ನುಡಿಗಳಿಗೆ ಅವರು ಹೈಬ್ಲಾದ ಜೇನ್ನೊಣಗಳನ್ನು ಕದ್ದು ಅಲ್ಲಿ ಅವುಗಳಿಗೆ ಜೇನು ಇಲ್ಲದಂತಾಗಿಸುವರು.

ಆಂತೋನಿ— ಕೊಂಡಿಗಳೂ ಇಲ್ಲದಂತೆ ಅಲ್ಲ.

ಬ್ರೂಟಸ್— ಹಾ ಹೌದು; ಸದ್ದು ಸಹ ಇಲ್ಲದಂತೆ! ನೀನು ಅವುಗಳ ಝೇಂಕಾರವನ್ನು ಕದ್ದಿರುವೆ, ಆಂತೋನಿ! ಇದೀಗ ಕೊಂಡಿಯಿಂದ ಚುಚ್ಚುವ ಮೊದಲು ನೀನು ಜಾಣತನದಿಂದ ಗದರಿಸುವೆ!

ಅಂತೋನಿ— ಮೋಸಗಾರರೆ, ನಿಮ್ಮ ಅತಿ ಕ್ರೂರವಾದ ಚೂರಿ
ಗಳಿಂದಲೇ ಸೀಸರನ ಇಬ್ಬದಿಯನ್ನೂ ಇರಿಯು
ವಾಗ ನೀವು ಅಂತೆನಿಸಗಲಿಲ್ಲ; ಕಪಿಗಳಂತೆ
ಆಗ ಹಲ್ಲು ಕಿರಿಯುತಿದ್ದಿರಿ; ನಾಯಿಗಳಂತೆ ಮ
ತೆಕ್ಕಿದಿರಿ; ಗುಲಾಮರಂತೆ ಸೀಸರನ ಪಾದಕ್ಕೆ
ಬಗ್ಗಿ ಮುತ್ತಿಟ್ಟಿರಿ; ಆದಾಗಲೇ ಆ ಪಾಪಿ
ಕ್ಯಾಸ್ಕನು ಒಂದು ಕೊಳಕು ನಾಯಿಯಂತೆ ಹಿಂ
ದಿನಿಂದ ಸೀಸರನ ಕುತ್ತಿಗೆಯನ್ನು ಇರಿದನು.
ಎಂತ್ಹ ಹೊಗಳುಭಟ್ಟರಿರಾ!

ಕ್ಯಾಸಿಯಸ್— ಹೊಗಳುಭಟ್ಟರು! ಬ್ರೂಟಸನೆ, ಈಗ ನೀನು ನಿ
ನ್ನನ್ನೆ ಹೊಗಳಿಕೊ. ಕ್ಯಾಸಿಯಸನು ಆಲೋಚಿಸಿದಂತೆ
ಅವನ ಆ ನಾಲಗೆಯು ಇಂದೀಗ ನಮ್ಮನ್ನು
ಈ ರೀತಿ ರೇಗಿಸುತ್ತಿರುತ್ತಿಲ್ಲ!

ಒಕ್ಟೇವಿಯಸ್— ಬನ್ನಿ, ಬನ್ನಿ. ಇದೀಗ ನಮ್ಮ ಮುಂದಿರುವ
ಸಮಸ್ಯೆಗೆ ಕಾರಣಗಳು ವಾದ ಪ್ರತಿವಾದಗ
ಳು ನಮ್ಮನ್ನು ಬೆವರು ಹನಿಸುವಂತಾದರೆ ಅದ
ನ್ನೆ ಕಾದಾಟಕ್ಕಿಳಿಸಿದರೆ ಅದು ಕೆನ್ನೆತ್ತರದ ಹ
ನಿಯಾಗುವುದು. ನೋಡಿರಿ, ಈಗ ನಾನು ಪಿತೂರಿ
ಗಾರರಿಗೆ ಎದುರಾಗಿ ನನ್ನ ಖಡ್ಗವನ್ನು ಎ
ತ್ತುತ್ತಿರುವೆನು; ನಿಮ್ಮ ಖಡ್ಗವು ಪುನ: ಯಾವಾಗ
ಎತ್ತಿ ಹಿಡಿಯುವಿರೆಂದು ಆಲೋಚಿಸುವಿರಿ? ಇ
ರಲಿ, ಸೀಸರನ ಮೂವತ್ತಮೂರು ಗಾಯಗಳಿಗೆ
ತಮ್ಮ ಸೇಡನ್ನು ತೀರಿಸಿಕೊಳ್ಳುವ ಮತ್ತು ಅ
ಥವಾ ಇನ್ನೊಬ್ಬ ಸೀಸರನನ್ನು ದ್ರೋಹಿಗಳು
ಕೊಲ್ಲುವ ವರೆಗೆ ಅಂತ್ಯ ಆಗುವುದಿಲ್ಲ!

ಬ್ರೂಟಸ್— ಒಕ್ಟೇವಿಯಸ್ ಸೀಸರನೆ,
ನೀನು ದ್ರೋಹಿಗಳನ್ನು ನಿನ್ನೊಡನೆ ಕರೆದುಕೊಂ
ಡು ಬಾರದೆಯೆ ಇದ್ದರೆ ನೀನು ಅವರಿಂದ ವಧಿ
ಸಲ್ಪಡಲಾರೆ!

ಒಕ್ಟೇವಿಯಸ್— ನಾನೂ ಅದೇ ರೀತಿ ಭಾವಿಸುವೆ! ಬ್ರೂಟಸನ
ಕತ್ತಿಯಿಂದ ಸಾಯಲು ನಾನು ಹುಟ್ಟಿಲ್ಲ.

ಬ್ರೂಟಸ್— ಹೋ, ನಿನ್ನ ಪರಿಸ್ಥಿತಿಗನುವಾಗಿ ನೀನು ಶ್ರೇ
ಷ್ಠನೆಂದೆನಿಸಿದ್ದರೆ, ಯುವಕನೆ, ನೀನು ಅತಿ
ಶ್ರೇಯಸ್ಕರ ಮರಣವನ್ನು ಪಡೆಯುವುದು ದುರ್ಲಭ!

ಕ್ಯಾಸ್ಯಸ್ — ಅಷ್ಟು ದೊಡ್ಡ ಮಾನ್ಯತೆಗರ್ಹನಲ್ಲದ ಶಿಷ್ಯ
ಸಿಡುಕುತನದ ಶಾಲೆಯ ಹುಡುಗ ಬರೆ ವೇಷಧಾ
ರಿ ಹಾಗೂ ಮೋಜುಗಾರಿಕೆಯ ವ್ಯಕ್ತಿಯ ಜತೆಗೆ
ಸೇರಿಕೊಂಡಿರುವನು!

ಅಂತೋನಿ — ಈಗಲೂ ಆ ಹಿಂದಿನ ಕ್ಯಾಸ್ಯಸನೆ!

ಒಕ್ಟೇವ್ಯಸ್ — ಬಾ, ಅಂತೋನಿ, ಇತ್ತ ಬಂದು ಬಿಡು.
ಎತ್ತಿ ದ್ರೋಹಿಗಳೇ, ಎದುರಿಗೆ ನಿಲ್ಲಿ. ನಿಮ್ಮತ್ತ ಸ
ಲ್ಲಿಗಳನ್ನೆ ತೂರಿಸುವೆವು; ಈ ದಿನವೇ ನೀವು
ಹೋರಾಡುವಿರಾದರೆ ಬನ್ನಿ ರಣಾಂಗಣಕ್ಕೆ!
ಅಂತಲ್ಲವಿದ್ದರೆ ಆದಾಗ ಸಿದ್ಧರಿರು
ವಿರೋ ಆಗ ಬನ್ನಿ!

(ಒಕ್ಟೇವ್ಯಸ್, ಅಂತೋನಿ ಮತ್ತು ಅವರ ಸೈನ್ಯ ಹೋಗುವುವು.)

ಕ್ಯಾಸ್ಯಸ್ — ವಾಹ್! ಈಗ ಗಾಳಿ ಬಿರುಸಾಗಿದೆ! ತೆರೆಗಳೂ
ಉಬ್ಬಿ ಭೋರ್ಗರೆಯುತ್ತಿವೆ; ನಾವೆಗಳು ಮೇಲುಕೆಳ
ಗಾಗಿ ತೇಲುತವೆ; ಬಿರುಗಾಳಿ ಬಲವಾಗಿದೆ; ಜ
ಯವೋ ಸೋಲೋ! ಈಗ ನಮ್ಮೆದುರು ಎಲ್ಲಾ ಇದೆ!

ಬ್ರೂಟಸ್ — ಎಲಾ ಲುಸಿಲ್ಯಸ್, ಕೇಳು.
ನಿನ್ನೊಡನೆ ಒಂದು ಮಾತಿದೆ.

ಲುಸಿಲ್ಯಸ್ — ನನ್ನ ಪ್ರಭು. —

(ಬ್ರೂಟಸ್ ಮತ್ತು ಲುಸಿಲ್ಯಸ್ ಒಂದೆಡೆ ಮಾತಾಡುವರು.)

ಕ್ಯಾಸ್ಯಸ್ — ಮೆಸ್ಸಲಾ —

ಮೆಸ್ಸಲಾ — ನನ್ನ ಸೇನಾಪತಿಯ ಆಜ್ಞೆಯೇನು?

ಕ್ಯಾಸ್ಯಸ್ — ಮೆಸ್ಸಲಾ, ಇಂದು ನನ್ನ ಹುಟ್ಟುದಿನ. ಕ್ಯಾಸ್ಯಸ
ನು ಈ ದಿನವೇ ಅಂದು ಹುಟ್ಟಿದವ. ಮೆಸ್ಸಲಾ,
ನಿನ್ನ ಕೈ ಕೊಡು. ಈ ನನ್ನ ಮರ್ಜಿ ವಿರುದ್ಧ
ಸಾಕ್ಷಿಯಾಗಿ ನೀನು ಇರು; ಪಾಂಪೆಯು ಅಂದಿನಂ
ದಂತೆ ನಾನು ಪ್ರತಿಯೊಬ್ಬನ ಹಕ್ಕಿನ ಸ್ವಾತಂತ್ರ್ಯಕ್ಕೆ
ಬಲಾತ್ಕಾರಕವಾಗಿಯೇ ಹೋರಾಡಲಿಕ್ಕಿರುವೆ
ನು. ನಾನು ಎಪಿಕ್ಯೂರಸನನ್ನು ಮತ್ತು ಅವನ ಅ
ಭಿಪ್ರಾಯವನ್ನು ತುಂಬಾ ಒಪ್ಪುತ್ತಿರುವೆನೆಂದು ನಿ
ನಗೆ ಗೊತ್ತಿದೆ. ಅದೇನೋ ಒಂದು ಬಗೆಯ ಅಪಶಕು
ನದಂತೆ! ಎರಡು ದೊಡ್ಡ ಹದ್ದುಗಳು ಸಾರ್ಡಿಸ

ಕಡೆಯಿಂದ ಹಾರಿ ಬಂದು ನಮ್ಮ ಧ್ವಜಸ್ತಂ
ಭದ ಮೇಲೆ ಕುಳಿತುವು. ಅವಕ್ಕೆ ನಮ್ಮ ಸೈನಿಕ
ರು ಮಾಂಸಾಹಾರವನು ಇತ್ತು ಸಾಕಿದರು. ಹಾ
ಗೆ ಅವುಗಳು ಫಿಲಿಪ್ಪಸ್‌ವರೆಗೆ ಬಂದುವು; ಆದ
ರೆ ಮರುದಿನ ಬೆಳಿಗ್ಗೆ ಯುದ್ಧ ಪ್ರಾರಂಭವಾಗುವ
ಮುನ್ನವೇ ಅವು ಹಾರಿ ಹೋದುವು; ಅವುಗಳ ಬದ
ಲಾಗಿ ಈಗ ಕಾಗೆ ಕರಿಕಾಗೆ ಗಿಡಗಗಳು ತು
ಮುಲು ನಮ್ಮ ತಲೆ ಮೇಲೆ ಹಾರಾಡುವುವು. ಕೆಳಗೆ
ನಾವೇ ಅವಕ್ಕೆ ತಿನ್ನಲು ಆಹಾರವೋ ಎಂಬಂತೆ
ಅವು ನಮ್ಮ ಕಡೆ ನೋಡುತ್ತವೆ; ಅವುಗಳ ನೆರಳು ನ
ಮಗೆ ಶನಿಪ್ರಾಯವಾದ ದೊಡ್ಡ ಕೊಡೆಯಂತೆಯೂ
ರಲು ನಮ್ಮ ಸೈನಿಕರು ಅದರ ಕೆಳಗೆ ಭೂತ ಪಿ
ಶಾಚಿಗಳನು ಬಿಡಿಸಲು ಸಿದ್ಧರಿರುವಂತೆ ಮಲ
ಗಿರುತ್ತಾರೆ!

ಮೆಸ್ಸಲ್ಲಾ — ಅಂತಿಲ್ಲವೆಂದು ಭಾವಿಸುವೆನು,

ಕ್ಯಾಸ್ಸಿಯಸ್ — ನಾನು ಪೂರ್ತಿಯಾಗಿ ಅದನು ನಂಬಲಾರೆನು. ಅ
ದೇಕೆಂದರೆ ನಾನೀಗ ಸಚೇತನಗೊಂಡಿರು
ವೆನು, ಯಾವ ಆಪತ್ತುಗಳನೂ ಸ್ಥಿರಮನಸ್ಸಿ
ನಿಂದ ಬಗೆಹರಿಸಲು ನಿರ್ಧರಿಸಿರುವೆನು.

ಬ್ರೂಟಸ್ — ಹಾಗಿದ್ದರೂ ಲೂಸಿಲ್ಯಸ್ —

ಕ್ಯಾಸ್ಸಿಯಸ್ — ಈಗ, ಮಾನ್ಯ ಬ್ರೂಟಸನೆ,
ದೇವತೆಗಳು ಇಂದು ಸ್ನೇಹಪರರಾಗಿರುವ
ರು. ಶಾಂತಿಯನು ಬಯಸುವ ನಮ್ಮನ್ನು ಪ್ರಾಯವೇ
ರುವವರೆಗೆ ಅವರು ಅಂತೆಯೇ ಮುನ್ನಡೆಸಬಹುದು.
ಆದರೂ ಜನರ ವ್ಯವಹಾರವು ಅನಿಶ್ಚಿತ.
ಬಹುಶ: ಅದೇನಾದರೂ ಅನಿಷ್ಟ ಸಂಭವಿ
ಸಿದರೆ, ನಾವು ಯುದ್ಧದಲಿ ಸೋತರೆ ಹೀಗೆ ನಾ
ವು ಒಟ್ಟಿಗೂಡಿ ಮಾತಾಡುವುದು ಇದೇ ಕಡೆ
ಯಾರಿಗೆ! ಅದು ಅಂತಾದರೆ ನೀನು ಏನೆಸಗ
ಲು ನಿರ್ಧರಿಸಿರುವೆ?

ಬ್ರೂಟಸ್ — ವೇದಾಂತ ಶಾಸ್ತ್ರವನು ಅನುಸರಿಸಿಯೇ ನಾನು
ಅಂದು ಕ್ಯಾಟೋನನು ಆತ್ಮಹತ್ಯೆಯನೆಸಗಿದಾ
ಗ ಅವನನ್ನು ಜರೆದೆನು; ಏಕೋ ಹೇಗೆಯೋ ಎಂದು ಅ
ರಿಯೆ; ಮುಂದಾಗಲಿ ಏನು ಆಗುವುದೋ ಎಂದು ಹೆದ

865

ರಿ ಸಾಯುವುದು ಬರಿ ಹೇಡಿತನ ಹಾಗೂ ದುಷ್ಪ್ರವೃತ್ತಿಯಿಂದು ಭಾವಿಸುವೆನು; ಮೇಲಿರುವ ಶಕ್ತಿ ದೈವವು ಕೆಳಗೆ ಇರುವ ನಮ್ಮನ್ನು ನಡೆಸುತ್ತಿರುವಾಗ ಆ ನನ್ನ ತಾಳ್ಮೆಯಿಂದ ನನ್ನನ್ನು ರಕ್ಷಿಸುವ ಅಸ್ತ್ರವು ಎಂದು ನಾನು ನಂಬುವೆನು.

ಕ್ಯಾಸಿಯಸ್ — ಹಾಗಾದರೆ ಈ ಯುದ್ಧದಲ್ಲಿ ನಾವು ಸೋತರೆ ನೀನು ರೋಮನ ಬೀದಿಗಳಲ್ಲಿ ಸ್ವರ್ಗದ ಜನರ ಜಯ ಘೋಷದೊಡನೆ ಕರೆದೊಯ್ಯಲ್ಪಡಲು ಇಚ್ಛಿಸುವೆಯಾ?

ಬ್ರೂಟಸ್ — ಇಲ್ಲ, ಕ್ಯಾಸಿಯಸ್, ಇಲ್ಲ. ಹಾಗೆ ಯೋಚಿಸಬೇಡ. ಮಾನ್ಯ ರೋಮನ್ ವೀರನೆ, ಬ್ರೂಟಸನು ರೋಮಿಗೆ ಹಾಗೆ ಹೋಗಬೇಕಾದರೆ ಅವನ ಮನಸ್ಸು ಬಹು ಮಹತ್ವವಿದೆಯೆಂದು ತಿಳಿ. ಆದರೆ ಇಂದೇ ನಾವು ಮಾರ್ಚ್ ಹದಿನೈದರಂದು ಪ್ರಾರಂಭಿಸಿದುದನ್ನು ಮುಗಿಸಬೇಕು, ಪುನಃ ನಾವು ಭೇಟಿಯಾಗುವೆವೋ ತಿಳಿಯದು; ಆದುದರಿಂದ, ಕ್ಯಾಸಿಯಸನೆ, ನನ್ನ ಅತಿ ಅನಂತ ನಮಸ್ಕಾರಗಳನ್ನು ಸ್ವೀಕರಿಸು; ಬಹುಶಃ ನಾವು ಪುನಃ ಎದುರುಗೊಂಡರೆ ಮುಗುಳ್ನಗುವ; ಅಂತಾಗದೆ ಇದ್ದರೆ, ಸರಿ, ನಮ್ಮ ಈ ಬೀಳ್ಕೊಡುವಿಕೆಯು ಸಾರ್ಥಕವಾಗಿದೆ!

ಕ್ಯಾಸಿಯಸ್ — ಹಾ ಬ್ರೂಟಸನೆ, ನಿರಂತರ ನನ್ನ ನಮಸ್ಕಾರಗಳಿರಲಿ. ಹೌದು, ನಾವು ಪುನಃ ಎದುರುಗೊಂಡರೆ ನಿಜವಾಗಿ ನಗುವ. ಅಂತಲ್ಲದಿದ್ದರೆ ನಮ್ಮ ಈ ಬೀಳ್ಕೊಡುವಿಕೆಯು ಯೋಗ್ಯವಾಗಿ ನಡೆದಿದೆ!

ಬ್ರೂಟಸ್ — ಸರಿ? ಇನ್ನೇನು? ಮುಂದೆ ಹೋಗು; ಈ ದಿನದ ಕಾರ್ಯ ಅದು ಪ್ರಾರಂಭವಾಗುವ ಮೊದಲೇ ಅದೇನೆಂದು ಓ ಮನುಷ್ಯನು ತಿಳಿದಿರಬೇಕಿತ್ತು. ಹೇಗೂ ದಿನವು ಕೊನೆಗೊಳ್ಳುತ್ತದೆಯೆಂದರೆ ಅದೇ ಸಾಕು; ಅನಂತರ ಆ ಕೊನೆಯ ಉದ್ದೇಶವೂ ತಿಳಿಯುವುದು. ಓಹೋ, ಬಾ ಹೋಗುವ; ಅಹಾ, ದೂರಕ್ಕೆ; ಹೋ!

(ಹೋಗುವರು)

866

ದೃಶ್ಯ — ೨ — ಫಿಲಿಪ್ಪೈ ಮೈದಾನದಲ್ಲಿ.
ಯುದ್ಧರಂಗ
ಭಯಸೂಚಕ ಧ್ವನಿ; ಬ್ರೂಟಸ್ ಮತ್ತು ಮೆಸ್ಸಾಲಾ
ಪ್ರವೇಶಿಸುವರು.

ಬ್ರೂಟಸ್ — ಮೆಸ್ಸಾಲಾ, ಸವಾರಿ ಹೋಗು; ಬಿಡು ನಿನ್ನ ಸವಾರಿ! ಈ ಬರೆದ ಚೀಟಿಗಳನ್ನು ಆ ಕಡೆಯ ಸೇನಾ ದಳಕ್ಕೆ ಕೊಡು. (ಭಯಸೂಚಕ ಧ್ವನಿ.) ಅವರು ತಕ್ಷಣ ಮುಂದಕ್ಕೆ ಹಾಯಲಿ; ಓಕ್ಟೇವ್ಯಸನ ದಳವು ನಿರುತ್ಸಾಹದಿಂದ ಇರುವಂತೆ ನನಗೆ ಕಾಣುತ್ತಿರುವುದು; ಒಂದೇ ಬಾರಿಗೆ ಅವರ ಮೇಲೆ ಹಾದು ಬಿದ್ದರೆ ಅದು ಅವರ ಪರಾಜಯಕ್ಕೆಡೆಗೊಡುವುದು. ಹೋಗು, ಸವಾರಿ ಹೋಗು, ಮೆಸ್ಸಾಲಾ, ಅವರು ಎಲ್ಲರೂ ಮುಂದಕ್ಕಿಳಿಯಲಿ!

(ಹೋಗುವರು.)

ದೃಶ್ಯ ೩ — (ಫಿಲಿಪ್ಪೈ ಮೈದಾನದ
ಇನ್ನೊಂದು ಕಡೆ; ಭಯಸೂಚಕ ಧ್ವನಿ.)
ಕ್ಯಾಸ್ಯಸ್ ಮತ್ತು ಟಿಟಿನ್ಯಸ್ ಪ್ರವೇಶ.

ಕ್ಯಾಸ್ಯಸ್ — ಹೋ! ಟಿಟಿನ್ಯಸ್, ನೋಡು. ಆ ನಮ್ಮ ಮೋಸಗಾರರು ಓಡಿಹೋಗುತ್ತಿರುವರು; ನನಗೆ ಈಗ ನನ್ನ ಜನವೇ ವೈರಿಗಳು ಎಂಬಂತಿರುವರು; ಈ ನನ್ನ ಬಾವುಟವನ್ನು ಅವನು ಹಿಂದಿರುಗಿಸಿದನು; ನಾನು ಆ ಹೇಡಿಯನ್ನು ಕೊಂದು ಅದನ್ನು ಅವನಿಂದ ಕಸಿದೆನು!

ಟಿಟಿನ್ಯಸ್ — ಹೋ! ಕ್ಯಾಸಿಯಸನೆ,
ಓಕ್ಟೇವ್ಯಸನ ದಳವು ನಿರುತ್ಸಾಹದಲ್ಲಿದ್ದುದನ್ನು ಕಂಡು ಅದು ನಮಗೆ ಸದವಕಾಶವೆಂದು ಬಗೆದು ಬ್ರೂಟಸನು ತನ್ನ ಜನಕ್ಕೆ ಬಹು ಬೇಗ ಆಜ್ಞಾಪನೆಯನ್ನೀಯಲು ಸೈನಿಕರು ಲೂಟಿಗೆ ತೊಡಗಲು ಅವರು ಶತ್ರುಗಳ ಎದೆಗೇರಲು ನಮ್ಮ ಸೈನಿಕರು ಆಂತೋನಿಯ ಜನರಿಂದ ಸುತ್ತುವರಿಯಲ್ಪಟ್ಟರು.

(ಪಿಂಡಾರಸನ ಪ್ರವೇಶ.)

ಪಿಂಡಾರಸ್ — ಇಲ್ಲಿಂದ ತೊಲಗಿರಿ, ಸ್ವಾಮಿ!
ಇಲ್ಲಿಂದ ದೂರ ಹೋಗಿರಿ. ನನ್ನ ಪ್ರಭುವೆ, ಮಾರ್ಕ್

ಆಂತೋನಿಯು ನಿಮ್ಮ ಶಿಬಿರದ ಒಳಗೆ ಇರುವನು
ಸಾಧ್ಯರಿಂದ ದೂರ ಹೋಗಿ, ಸ್ವಾಮಿ, ಪಲಾಯನ
ಕೈಕೊಳ್ಳಿ! ಮಾನ್ಯ ಕ್ಯಾಸ್ಯಸ್, ಬೇಗನೆ ಪರಾರಿ ಹೊಂದಿ
ಯಿರಿ; ದೂರ ಹೋಗಿರಿ!

ಕ್ಯಾಸ್ಯಸ್— ಈ ಗುಡ್ಡವು ಸಾಕಷ್ಟು ದೂರವಿದೆ; ನೋಡು, ಟಿಟಿನ್ಯಸ್, ನೋಡು. ಅಕೋ ಅಲ್ಲಿ ಬೆಂಕಿಯು ಹೊತ್ತುತ್ತಿರುವಾ ಶಿಬಿರಗಳು ನನ್ನವೇ; ನೋಡು.

ಟಿಟಿನ್ಯಸ್— ಅವು ಹೌದು, ಪ್ರಭು!

ಕ್ಯಾಸ್ಯಸ್— ಟಿಟಿನ್ಯಸ್, ನಿನಗೆ ನನ್ನಲ್ಲಿ ಅಭಿಮಾನವಿದ್ದರೆ ನೀನು ನನ್ನ ಕುದುರೆಯನ್ನೇರಿ ನಿನ್ನ ಹಿಮ್ಮಡಿ ಮುಳ್ಳಿನಿಂದ ಆ ಕುದುರೆಯನು ಅಲ್ಲಿ ಕಾಣುವ ಸೈನ್ಯವಿರುವಲ್ಲಿವರೆಗೆ ವೇಗದಿಂದ ಓಡಿಸು; ಆದರೆ ಅಲ್ಲಿರುವ ಸೈನ್ಯವು ನಮ್ಮ ಮಿತ್ರರೋ ವೈರಿಗಳೋ ಎಂದು ನನಗೆ ಖಂಡಿತವಾಗಿ ಮತ್ತು ಜಾಗ್ರತೆಯಿಂದ ತಿಳಿಸು.

ಟಿಟಿನ್ಯಸ್— ನಾನು ಮಿಂಚಿನ ವೇಗದಲ್ಲಿ ಹೋಗಿ ಕ್ಷಣಮಾತ್ರದಲ್ಲಿ ಪುನಃ ಇಲ್ಲಿರುವೆನು.

(ಹೋಗುವನು)

ಕ್ಯಾಸ್ಯಸ್— ಹೋಗು, ಪಿಂಡಾರಸನೆ, ಆ ಗುಡ್ಡದ ಮೇಲೇರು; ನನ್ನ ದೃಷ್ಟಿ ಚೆನ್ನಾಗಿಲ್ಲ; ಟಿಟಿನ್ಯಸನನ್ನು ನೋಡಿಕೊ. ಆ ಮೈದಾನದಲ್ಲಿ ಏನು ಕಾಣುತ್ತದೆಂಬುದನ್ನು ನನಗೆ ತಿಳಿಸು.

(ಪಿಂಡಾರಸನು ಹೋಗುವನು)

ನಾನು ಈ ದಿನ ಮೊದಲು ಉಸಿರೆಳೆದೆನು; ಕಾಲವು ಉರುಳಿರುವುದು; ಎಲ್ಲಿಂದ ನಾನು ಪ್ರಾರಂಭಿಸಿದೆನೊ ಅಲ್ಲಿಯೆ ಕೊನೆಗೊಳಿಸುವೆನು; ಇದೀಗ ನನ್ನ ಜೀವನ ಚಕ್ರ ಒಂದು ಸುತ್ತು ತಿರುಗಿದೆ. ಬಲ್ಲಿ, ಏನು ಸಮಾಚಾರ?

ಪಿಂಡಾರಸ್— (ಗುಡ್ಡದ ಮೇಲಿಂದ) ಓ ನನ್ನ ಪ್ರಭುವೇ!

ಕ್ಯಾಸ್ಯಸ್— ಏನು ವಿಶೇಷ?

ಪಿಂಡಾರಸ್— ಟಿಟಿನ್ಯಸನನ್ನು ಸುತ್ತುಗಟ್ಟಿರುವರು --- ಕುದುರೆ ಸವಾರರು ಅವನ ಹಿಂದೆಯೆ ಇರುವರು --- ಆದರೂ ಅವನು ಮುಂದೆ ಹೋಗುತ್ತಿರುವನು --- ಈಗ ಅವರು ಅವನನ್ನು ಸಮೀಪಿಸುತ್ತಿರುವರು --- ಈಗ ಟಿ

868

ಟಿನ್ಯಸನು---ಈಗ ಕೆಲವು ಸವಾರರು ಅವನಿಗೆ ಹಿಂಬಾಲಿಸುವವರು---ಹೋ! ಅವನು ಇಳಿಯುತ್ತಿರುವನು. ---ಅವನನ್ನು ಹಿಡಿದರು---ಆಹಾ---ಅವರು ಸಂತೋಷದಿಂದ ಬೊಬ್ಬೆ ಹೊಡೆಯುತ್ತಿರುವರು---.

(ಗುಲ್ಲು ಕೇಳಿಸುವುದು.)

ಕ್ಯಾಸ್ಯಸ್— ಕೆಳಗೆ ಬಾ, ಇನ್ನು ನೋಡುವುದು ಬೇಡ. ಹೇಡಿಯು ನಾನು! ನನ್ನ ಎದುರಿಗೆ ನನ್ನ ಆಪ್ತ ಮಿತ್ರನನ್ನು ಸೆರೆ ಹಿಡಿಯುವುದನ್ನು ನೋಡುತ್ತ ಈವರೆಗೆ ಜೀವಿಸಿದೆನು!

(ಪಿಂಡಾರಸನು ಬರುವನು.)

ಇತ್ತ ಬಾ, ಹುಡುಗ,
ಪಾರ್ಥಿಯಾದಲ್ಲಿ ನಾನು ನಿನ್ನನ್ನು ಸೆರೆಹಿಡಿದೆ. ನಿನ್ನ ಪ್ರಾಣವನ್ನು ನಾನು ರಕ್ಷಿಸಿದಾಗ ನಿನ್ನನ್ನು ಪ್ರಮಾಣ ಮಾಡುವಂತೆಯೆ ಒಪ್ಪಿಸಿದೆ. ಅದರಂತೆ ನಾನು ನಿನಗೆ ಏನೇನು ಮಾಡಲು ಹೇಳುವೆನೊ ಅದನ್ನೆಲ್ಲ ನೀನು ನಡೆಸಲು ಯತ್ನಿಸಬೇಕು; ಈಗ ಬಾ, ನಿನ್ನ ಮಾತಿನಂತೆ ನಡೆಸು; ಅಂಜದಿರು; ಇದೀಗ ಸ್ವತಂತ್ರನಾಗಿ ವರ್ತಿಸು; ಸೀಸರನ ಹೊಟ್ಟೆಯನ್ನು ಹೊಕ್ಕ ಈ ನನ್ನ ಸಾಚ್ಚ ಖಡ್ಗವನು ಹಿಡಿದು ನನ್ನ ಎದೆ ಎತ್ತಿದೆ ಯತಿಂದು ನೋಡು; ಹಿಂದಕ್ಕೆ ಮಾತಾಡಲು ನಿಲ್ಲುವುದು ಬೇಡ; ಅದೊ ಗುತ್ತಿಗೆಳಸೀರು; ಇದೀಗ ನಾನು ನನ್ನ ಮುಖವನ್ನು ಮುಚ್ಚಿದ ರೀತಿಯಲ್ಲಿ ನಾನು ಮುಚ್ಚಿದ ಕ್ಷಣವೆ ಆ ಖಡ್ಗವನ್ನು ಇತ್ತ ಹಾಯಿಸು; ಆಹಾ ಸೀಸರನೆ, ನೀನು ನಿನ್ನ ಸೇಡನ್ನು ನಿನ್ನನ್ನು ಕೊಂದಿಹಯಾ ಖಡ್ಗದಿಂದಲೇ ತೀರಿಸಿಕೊಂಡೆ!

(ಸಾಯುವನು.)

ಪಿಂಡಾರಸ್— ಇದರಿಂದ ಈಗ ನಾನು ಸ್ವತಂತ್ರನು; ಸೀಸರನೆ, ನನ್ನ ಸಂಕಲ್ಪದಂತೆ ನಾನು ನಡೆಸಿದೆ ಇದ್ದಿದ್ದರೆ ನೀನಿಂತಿರುತ್ತಿರಲಿ ಇಲ್ಲ; ಇನ್ನೀಗ ಯಾವ ರೋಮನನ್ನೂ ತನ್ನನ್ನು ಗುರುತಿಸದಂತೆ ಪಿಂಡಾರಸನೀ ದೇಶದಿಂದ ಬಹು ದೂರಕ್ಕೆ ಪಲಾಯನಗೈಯ್ಯುವನು.

(ಹೋಗುವರು.)

(ಟಿಟಿನ್ಯಸನು ಮೆಸ್ಸಲಾನೊಡನೆ
ಪುನಃ ಪ್ರವೇಶಿಸುತ್ತಾನೆ.)

ಮೆಸ್ಸಲಾ — ಟಿಟಿನ್ಯಸ್, ಇದು ಮುಯ್ಯಿಗೆ ಮುಯ್ಯಾಯಿತು! ಕ್ಯಾಸ್ಯಸನ ಸೈನ್ಯವನ್ನು ಆಂಟೊನಿಯು ಸೋಲಿಸಿದ ರೀತಿಯಲ್ಲಿ ಮಾನ್ಯ ಬ್ರೂಟಸನ ಸೈನ್ಯವು ಒಕ್ಟೇವ್ಯಸನನ್ನು ಸೋಲಿಸಿತು!

ಟಿಟಿನ್ಯಸ್ — ಈ ಸಮಾಚಾರಗಳು ಕ್ಯಾಸ್ಯಸನಿಗೆ ತೃಪ್ತಿಯನ್ನುಂಟುಮಾಡುವುವು,

ಮೆಸ್ಸಲಾ — ನೀನು ಅವನನ್ನು ಎಲ್ಲಿ ಬಿಟ್ಟೆ?

ಟಿಟಿನ್ಯಸ್ — ಎಲ್ಲ ದುಃಖಿತರಾಗಿರುವರು! ಈ ಗುಡ್ಡದಲ್ಲಿ! ಅವನ ಸೇವಕ ಪಿಂಡಾರಸನೊಡನೆ!

ಮೆಸ್ಸಲಾ — ಅದು ಅವನೆ ಅಲ್ಲವೆ? ಅದೊ ಅಲ್ಲಿ ನೆಲದಲ್ಲಿ ಬಿದ್ದಿರುವುದು!

ಟಿಟಿನ್ಯಸ್ — ಅವನು ಜೀವಿಸುವವನು ಬಿದ್ದಿರುವಂತೆ ಕಾಣುವುದಿಲ್ಲ; ಅಯ್ಯೋ ನನ್ನ ಹೃದಯವೇ!

ಮೆಸ್ಸಲಾ — ಅದು ಅವನೇ ಅಲ್ಲವೆ?

ಟಿಟಿನ್ಯಸ್ — ಅಲ್ಲ, ಇದು ಅವನೆ ಆಗಿದ್ದ, ಮೆಸ್ಸಲಾ. ಆದರೆ ಕ್ಯಾಸ್ಯಸ್ ಇನ್ನಿಲ್ಲ! ಓ ಅಸ್ತಮಾನವಾದ ಸೂರ್ಯನೆ, ನಿನ್ನ ಕೆಂಗಿರಣಗಳೊಡಗೂಡುತ್ತ ಈ ರಾತ್ರಿ ನೀನು ಮುಳುಗುವಂತೆಯೆ ಕ್ಯಾಸ್ಯಸನು ತನ್ನ ಕೆನ್ನೆತ್ತರೊಡನೆಯೆ ತನ್ನ ದಿನವನ್ನು ಕೊನೆಗೊಳಿಸಿದನು, ರೋಮಿನ ಸೂರ್ಯನು ಮುಳುಗಿತು. ನಮ್ಮದಿನವು ಅಳಿಯಿತು; ಮೋಡ, ಮಂಜು ಮತ್ತು ಅಪಾಯಗಳು ಬರುತಿವೆ; ನಮ್ಮ ಕೆಲಸವೆಲ್ಲ ಮಾಡಿದೆವು; ನಾನು ಜಯವನ್ನು ಪಡೆಯುವೆನೊ ಎಂಬ ಸಂಶಯವೇ ಈ ಕಾರ್ಯವನು ಕೈಗೊಂಡಿತು!

ಮೆಸ್ಸಲಾ — ಒಳ್ಳೆಯ ಗೆಲುವನ್ನು ಪಡೆಯುವೆವೊ ಎಂಬ ಸಂದೇಹವಿಂತಾಗಿಸಿತು! ಓಹೊ, ಚಿಂತೆಯಿಂದ ಹುಟ್ಟುವ ಸಂಶಯದ ಅಸಹ್ಯ ಪ್ರಮಾದವೆ, ಅದೇಕೆ ಜನರ ಸದ್ಭಾವನೆಗಳಿಗೆ ಇಲ್ಲದುದನ್ನು ಕಲ್ಪಿಸುವೆ? ಎಲೈ ಅತಿಕ್ರಮವೆ, ಬೇಗನೆ ಮನಸಿನಲ್ಲಿ ಅಂಕುರಿಸುತ್ತಿಹ ನೀನು ಸಂತೋಷದಿಂದೇನೂ ಜನಿಸಲಾರೆ; ಆದರೆ ನಿನಗೆ ಆಶ್ರಯವಿದೆಯೆಂದಾಗ ನೀನು ದುಃಖಕೊಳಗಾದಾ

ಪ್ರಕೃತಿಯನೆ ಕೊಲ್ಲುವೆ!

ಟಿಟಿನ್ಯಸ್ — ಏನು! ಪಿಂಡಾರಸ್! ಎಲ್ಲಿ ಪಿಂಡಾರಸನೆ,
ನೀನೆಲ್ಲಿರುವೆ?

ಮೆಸ್ಸಾಲಾ — ಅವನನ್ನು ನೋಡು; ಟಿಟಿನ್ಯಸ್, ನಾನು ಮಾನ್ಯ ಬ್ರೂ
ಟಸನ ಬಳಿಗೆ ಹೋಗಿ ಅವನಿಗೆ ಈ ರಾತ್ರಿ ನಡೆ
ದುದೆಲ್ಲವನು ಅವನ ಕಿವಿಗಳಿಗೆ ಸೂಜಿಯಂತೆ
ಚುಚ್ಚುವ ತೆರನೆ ಬ್ರೂಟಸನ ಕಿವಿಗಳಿಗೆ ಊದ
ಲಾ ವಾರ್ತೆಯು ಅವನಿಗೆ ಇಂಪಾಗಿ ಧ್ವನಿಸಬ
ಹುದು!

ಟಿಟಿನ್ಯಸ್ — ಮೆಸ್ಸಾಲಾ, ಈಗ ನೀನು ಹೋಗು.

(ಮೆಸ್ಸಾಲಾನು ಹೋಗುವನು.)

ಇನ್ನೀಗ ನಾನು ಪಿಂಡಾರಸನನು ಕೆಲ ಸಮ
ಯ ನೋಡುವೆನು. ವೀರ ಕ್ಯಾಸ್ಯಸನೆ, ನನ್ನನ್ನು
ಏಕೆ ನೀನು ಹೊರಗೆ ಕಳುಹಿಸಿದೆ? ನಾನು ನಿ
ನ್ನ ಮಿತ್ರರನು ಅಲ್ಲಿಯೆ ಕಾಣಲಿಲ್ಲವೆ? ಅವರು
ನನಗೆ ಈ ವಿಜಯಮಾಲೆಯನು ಮುಡಿಸಿ ಇದನ್ನು
ನಿನಗೆ ಅರ್ಪಿಸಲು ಹೇಳಲಿಲ್ಲವೆ? ನೀನು ಅವ
ರ ಜಯಘೋಷವನು ಆಲಿಸಲಿಲ್ಲವೆ? ಹಾ, ನೀ
ನು ಎಲ್ಲಾ ತಪ್ಪಾಗಿ ತಿಳಿದುಕೊಂಡೆ; ಆದರೆ
ತಾಳು, ಈ ಹೂಮಾಲೆಯನು ನೀನು ಸ್ವೀಕರಿಸು!
ನಿನ್ನ ಮಿತ್ರ ಬ್ರೂಟಸ್ ಇದನ್ನು ನಿನಗೆ ಕೊಡಲು
ಹೇಳಿದನು; ಅಂತೆಯೇ ಮಾಡುವೆನು; ಬ್ರೂಟಸನೆ,
ಬಾ, ನಾನು ಕೈಯಸ್ ಕ್ಯಾಸ್ಯಸನನು ಹೇಗೆ ಸ
ನ್ಮಾನಿಸಿದೆನೆಂದು ನೋಡು! ದೇವತೆಗಳೆ, ಹೇಳಿ.
ರೋಮನನೊಬ್ಬನು ಮಾಡಬೇಕಾದ ಕರ್ತವ್ಯ
ವಿದು! ಅಹಾ ಕ್ಯಾಸ್ಯಸನ ಖಡ್ಗವೆ, ಟಿಟಿನ್ಯಸನ
ಎದೆಯನ್ನು ನೀನು ತಿವಿದಂತೆ ತಿವಿ!

(ಸಾಯುವನು.)

(ಜಯಸೂಚಕ ಧ್ವನಿ — ಮೆಸ್ಸಾಲಾನು ಬ್ರೂಟಸ್
ಯುವಕ ಕ್ಯಾಟೊ, ಸ್ಟ್ರಾಟೊ, ವೊಲಮ್ನಿಯಸ್
ಮತ್ತು ಲ್ಯುಸಿಲ್ಯಸ್ ಇವರೊಡನೆ ಪ್ರವೇಶ.)

ಬ್ರೂಟಸ್ — ಎಲ್ಲಿ? ಮೆಸ್ಸಾಲಾ, ಎಲ್ಲಿ? ಅವನ ಶವ ಎಲ್ಲಿ ಇದೆ?

ಮೆಸ್ಸಾಲಾ — ಅಗೋ ಅಲ್ಲಿ! ಟಿಟಿನ್ಯಸನು ಸಂತಾಪಿಸುತಿರುವನು!

ಬ್ರೂಟಸ್ — ಟಿಟಿನ್ಯಸನ ಮುಖವು ಮೇಲಕ್ಕಿದೆಯಲ್ಲ!

ಕ್ಯಾಟೊ — ಅವನು ಕೊಲ್ಲಲ್ಪಟ್ಟಿರುವನು.

ಬ್ರೂಟಸ್ — ಓ ಜೂಲ್ಯಸ್ ಸೀಸರನೆ, ನೀನು ಇನ್ನೂ ವೀರನೆ ಸರಿ; ನಿನ್ನ ಆತ್ಮವು ಎಲ್ಲೆಲ್ಲೂ ತಿರುಗುತ್ತಿದೆ! ನಮ್ಮ ಕತ್ತಿಗಳು ನಮ್ಮದೇ ಕರುಳುಗಳನ್ನು ತಿವಿಯುತ್ತಿವೆ!

(ಇಳಿದನಿಯಲ್ಲಿ ಯುದ್ಧಸೂಚಕ ಧ್ವನಿ.)

ಕ್ಯಾಟೊ — ನೋಡು, ಧೀರ ಟಿಟಿನ್ಯಸ್!
ಕ್ಯಾಸ್ಯಸನಿಗೆ ಸತ್ತಲ್ಲಿಯೂ ಕಿರೀಟವನು ಮುಡಿಸಿರುವನು!

ಬ್ರೂಟಸ್ — ಇನ್ನೂ ಇವರಂಥ ರೋಮನರು ಉಳಿದಿರುವರೆ? ಹಾ, ರೋಮನ್ ವೀರರಲ್ಲಿ ಕೊನೆಯವನೆ, ನಿನಗೆ ನನ್ನ ನಮಸ್ಕಾರಗಳು! ನಿನ್ನ ಹಾಗೆ ಇನ್ನೊಬ್ಬನನ್ನು ರೋಮ್ ಪಡೆಯುವುದೇ ಅಸಾಧ್ಯ! ಮಿತ್ರರೆ, ನೀವು ಸುರಿಸಿದಕ್ಕಿಂತ ಹೆಚ್ಚು ಕಂಬನಿಯನ್ನು ಈ ಮೃತನಿಗೆ ಸಲ್ಲಿಸಬೇಕಿದೆ. ಕ್ಯಾಸ್ಯಸನೆ, ನಿನಗಾಗಿ ನನಗೆ ಸಮಯವಿದೆ. ಆದ್ದರಿಂದ ಬನ್ನಿ. ಈ ದೇಹವನ್ನು ಥಾಸಸ್‌ಗೆ ಕಳುಹಿಸಿರಿ. ಅವನ ಶವಸಂಸ್ಕಾರವು ಅನಾನುಕೂಲತೆಯ ದೆಸೆಯಿಂದ ನಮ್ಮ ಶಿಬಿರದಲ್ಲಿ ಆಗುವುದು ಬೇಡ. ಲೂಸಿಲ್ಯಸನೆ ಬಾ, ತರುಣ ಕ್ಯಾಟೊ, ನೀನೂ ಬಾ! ನಾವು ಮತ್ತೆ ರಣದತ್ತ ಹೋಗುವ! ಲ್ಯಾಬ್ಯೊ, ಫ್ಲೇವ್ಯಸ್, ನಮ್ಮ ಕಾದಾಟ ಮುಂದುವರಿಯಲಿ; ಈಗ ಮೂರು ಗಂಟೆ. ಈ ರಾತ್ರಿಯ ಒಳಗೆ, ರೋಮನ್ನರೆ, ನಮ್ಮ ಎರಡನೆ ಹೋರಾಟದಲ್ಲಿ ನಮ್ಮ ನಸೀಬವನ್ನು ಪ್ರಯತ್ನಿಸೋಣ!

(ಹೋಗುವರು.)

೪ನೇ ದೃಶ್ಯ. (ಎಚ್ಚರಿಕೆಯ ಧ್ವನಿ)

ಇಕ್ಕಡೆಯ ಸೇನಾನಿಗಳು ಪ್ರವೇಶಿಸುವರು.

(ಅನಂತರ ಬ್ರೂಟಸ್, ಯುವಕ ಕ್ಯಾಟೊ, ಲೂಸಿಲ್ಯಸ್ ಮತ್ತಿತರರು ಪ್ರವೇಶಿಸುವರು.)

ಬ್ರೂಟಸ್ — ಹಾ, ದೇಶೀಯರೆ, ಆದರೂ ಕೆಚ್ಚೆದೆಯಿಂದ ನಿಲ್ಲಿರಿ,

ಕ್ಯಾಟೊ — ಯಾವ ವೇಶ್ಯಾಮಗನು ಅಂತಿಲ್ಲ? ನನ್ನೊಡನೆ

ಯಾರು ಬರುವಿರಿ? ಆಹಾ ನಾನು ಮಾರ್ಕಸ್ ಕ್ಯಾಟೋನ ಮಗ; ನಾನಾರೆನುತ ಯುದ್ಧರಂಗದಲಿ ಸಾರುವೆನು, ಘಾತುಕರಿಗೆ ಸರ್ವ ವೈರಿ; ನನ್ನ ದೇಶದ ಮಿತ್ರ! ಹೋ ನಾನೆ ಮಾರ್ಕಸ್ ಕ್ಯಾಟೋನ ಮಗ; ಓಹೋ!

(ವೈರಿಗಳ ಮೇಲೆ ಬೀಳುವನು.)

ಬ್ರೂಟಸ್— ಮತ್ತು ನಾನು ಬ್ರೂಟಸನು, ಮಾರ್ಕಸ್ ಬ್ರೂಟಸನು. ನನ್ನ ದೇಶದ ಮಿತ್ರನು. ನಾನೆ ಬ್ರೂಟಸನು ಎಂಬುದಾಗಿ ತಿಳಿಯಿರಿ.

(ವೈರಿಗಳತ್ತ ಹಾರುವನು. ಯುವಕ ಕ್ಯಾಟೋನು ವೈರಿಗಳಿಂದ ಸೆರೆಹಿಡಿಯಲ್ಪಟ್ಟನು.)

ಲೂಸಿಲ್ಯಸ್— ಹೋ ಯುವಕನೆ, ವೀರ ಕ್ಯಾಟೋ, ನೀನೂ ಬಿದ್ದೆಯಾ? ನೀನೀಗ ಆ ಟಿಟಿನ್ಯಸನಷ್ಟೆ ಧೀರತನದಿಂದ ಸಾಯುವೆ; ಮಾರ್ಕಸ್ ಕ್ಯಾಟೋನ ಪುತ್ರನೆಂದು ಗೌರವಕ್ಕೊಳಗಾಗು, ಕ್ಯಾಟೋ!

೧ನೇ ಸೈನಿಕ— ಶರಣಾಗು; ಇಲ್ಲದಿದ್ದರೆ ಸಾಯುವೆ!

ಲೂಸಿಲ್ಯಸ್— ಸಾಯಲಿಕ್ಕೆ ಮಾತ್ರ ಈಗ ನಾನು ಶರಣಾಗುವೆನು; ನನ್ನನ್ನು ನೀನು ನಿರಾಯಾಸದಿಂದ ಕೊಲ್ಲಲಿಕ್ಕೆ, ಇಕೋ, (ಹಣವನ್ನು ಕೊಡುವನು.) ಬ್ರೂಟಸನನ್ನು ಕೊಂದು ಅವನ ಮರಣದಿಂದ ನೀನು ವೀರನೆಂದೆನಿಸು, ಕೊಲ್ಲು!

೧ನೇ ಸೈನಿಕ— ಅವನು ಮಹನೀಯ ಸೆರೆಯಾಳು; ನಾವು ಅಂತೆನಗಲಾರೆವು!

೨ನೇ ಸೈನಿಕ— ಎಲ್ಲಿ ಜಾಗ ಬಿಡಿ; ಬ್ರೂಟಸನನ್ನು ಹಿಡಿದಿರುವೆವು, ಎಂದು ಆಂತೋನಿಗೆ ತಿಳಿಸು.

೧ನೇ ಸೈನಿಕ— ನಾನು ಈ ವಾರ್ತೆಯನ್ನು ಒಯ್ಯುವೆನು. ಓಹೋ, ಸೇನಾಪತಿಯೆ ಇಲ್ಲಿ ಬರುತ್ತಿರುವನು.

(ಆಂತೋನಿಯ ಪ್ರವೇಶ.)

ಬ್ರೂಟಸನನ್ನು ಸೆರೆಹಿಡಿದಿರುವೆವು, ಸ್ವಾಮಿ. ಇದೋ ಬ್ರೂಟಸನು!

ಆಂತೋನಿ— ಆವನೆಲ್ಲಿರುವನು?

ಲೂಸಿಲ್ಯಸ್— ಆಂತೋನಿ, ಆವನು ಸುರಕ್ಷಿತವಿರುವನು; ಮಾನ್ಯನಾದ ಬ್ರೂಟಸನನ್ನು ಜೀವಂತವಾಗಿ ಯಾವ ಶತ್ರುವಿಗೂ ಹಿಡಿಯಲು ಆಗುವುದಿಲ್ಲ

873

ವೆಂದು ಖಂಡಿತವಾಗಿ ಹೇಳಬಲ್ಲೆನು. ಅಂಥ
ಲಜ್ಜಾಸ್ಪದ ಪರಿಸ್ಥಿತಿಯಿಂದ ಅವನನ್ನು ದೇ
ವತೆಗಳೇ ಕಾಪಾಡುವರು; ನೀನು ಅವನನ್ನು ಜೀ
ವಂತನಾಗಿ ಅಥವಾ ಜೀವಹೀನನಾಗಿಯೇ
ಕಂಡರೂ ಅವನು ಬ್ರೂಟಸನಂತೆಯೇ ಯೋಗ್ಯ
ನಾಗಿ ಇರುವುದನ್ನು ನೋಡುವೆ.

ಅಂತೋನಿ – ಮಿತ್ರನೆ, ಇವನು ಬ್ರೂಟಸನು ಅಲ್ಲ; ಆದರೂ
ಬಂಧನಕ್ಕೆ ಒಳಗಾದ ಅವನು ನಮ್ಮ ಆದರಕ್ಕೆ
ತಕ್ಕವನೇ! ಇವನನ್ನು ಸುರಕ್ಷಿತವಾಗಿಯೇ
ಇಡಿ. ದಯಾಭಿಮಾನದಿಂದ ನೋಡಿರಿ; ಅಂಥವನು
ಶತ್ರುವೆಂದು ಗಣಿಸುವುದಕ್ಕಿಂತ ನನ್ನ ಗೆಳೆ
ಯನನ್ನು ಎಂದು ಎಣಿಸುವೆನು; ಈಗ ಬ್ರೂಟಸನು ಎ
ಲ್ಲಿರುವನು, ಬದುಕಿರುವನೋ ಸತ್ತಿರುವನೋ ಎಂದು
ನೋಡಿ; ಏನೇನು ನಡೆಯುತ್ತಿದೆಯೆಂದು ಯಾವೊಂ
ದು ವಿಷಯವನ್ನೂ ಬಿಡದೆ ಒಕ್ಟೇವ್ಯಸನ ಶಿಬಿರ
ಕ್ಕೆ ಬಂದು ತಿಳಿಸಿರಿ!

(ಹೋಗುವರು)

೫ನೇ ದೃಶ್ಯ – ರಣಾಂಗಣದ ಇನ್ನೊಂದೆಡೆ.
(ಬ್ರೂಟಸ್, ಡಾರ್ಡನ್ಯಸ್, ಕ್ಲೀಟಸ್, ಸ್ಟ್ರಾಟೋ ಮತ್ತು ವೋಲುಮಿನ್ಯಸ್ – ಇವರ ಪ್ರವೇಶ.)

ಬ್ರೂಟಸ್ – ಬನ್ನಿರಿ, ಉಳಿದ ನನ್ನ ಬಡ ಮಿತ್ರರೇ, ಬಂಡೆ
ಯಿದರಲ್ಲಿ ಕುಳಿತು ವಿಶ್ರಮಿಸಿರಿ.

ಕ್ಲೀಟಸ್ – ಸ್ಟ್ಯಾಟಿಲಿಯಸನು ನಮಗೆ ಪಂಜುಬೆಳಕನ್ನು ತೋ
ರಿಸಿದನಾದರೂ, ನನ್ನ ಪ್ರಭುವೆ, ಅವನು ಹಿಂ
ದಕ್ಕೆ ಬರಲಿಲ್ಲ. ಅವನನ್ನು ಸೆರೆಹಿಡಿದರು, ಅ
ಥವಾ ಕೊಂದರು.

ಬ್ರೂಟಸ್ – ಕ್ಲೀಟಸನೇ, ಇಲ್ಲಿ ಕುಳಿತುಕೋ. ಕೊಂದರೆಂಬ
ಪದವೇ ಸರಿ; ಅಂತಾಗುವುದು ಇಂದಿನ ಹವ್ಯಾ
ಸವಾಗಿದೆ; ಎಲಾ ಕ್ಲೀಟಸನೆ, ಕೇಳು!
(ಪಿಸುಮಾತಾಡುವನು.)

ಕ್ಲೀಟಸ್ – ಏನು? ನಾನೇ? ನನ್ನ ಪ್ರಭು! ಇಲ್ಲ, ಆಗದು;
ಇಡೀ ಜಗತ್ತನ್ನೇ ಇತ್ತರೂ ನನ್ನಿಂದಾಗದು!

ಬ್ರೂಟಸ್ – ಹಾಗಾದರೆ ಮೌನವಿರಿ; ಮಾತು ಬೇಡ.
ಕ್ಲೀಟಸ್ – ಅಂತಹದಾಗುವುದಕ್ಕಿಂತ ನಾನು ಆತ್ಮಹತ್ಯೆಯನ್ನು ಮಾಡಿಕೊಳ್ಳುವೆನು.
ಬ್ರೂಟಸ್ – ಡಾರ್ಡನ್ಯಸನೆ, ಎತ್ತಿ, ಕೇಳು.
(ಪಿಸುಮಾತಾಡುವನು.)
ಡಾರ್ಡನ್ಯಸ್ – ನಾನು ಅಂಥ ಕೆಲಸವನ್ನು ಮಾಡಲೇ?
ಕ್ಲೀಟಸ್ — ಓ ಡಾರ್ಡನಿಯಸ್,
ಡಾರ್ಡನ್ಯಸ್ – ಓ ಕ್ಲೀಟಸ್,
ಕ್ಲೀಟಸ್ – ಅದೇನದು ಹೇಳಬಾರದಂಥಾ ಕೋರಿಕೆಯನ್ನು ನಿನಗೆ ಬ್ರೂಟಸನು ಹೇಳಿದನು?
ಡಾರ್ಡನ್ಯಸ್ – ಅವನನ್ನು ಕೊಲ್ಲಲೆಂದು, ಕ್ಲೀಟಸ್! ನೋಡಲ್ಲಿ; ಅವನು ಧ್ಯಾನಾಸಕ್ತನಾಗಿರುವನು.
ಕ್ಲೀಟಸ್ – ಶ್ರೇಷ್ಠವಾದ ಘಟಕವು ದುಃಖಪ್ರವಿನಿಂದ ತುಂಬಿದ್ದು ಅದೀಗ ಅವನ ಕಣ್ಣುಗಳ ಮೂಲಕ ಹೊರಕ್ಕೆ ಹರಿಯುತ್ತಿರುವುದು.
ಬ್ರೂಟಸ್ — ಹತ್ತಿರ ಬಾ, ಮಾನ್ಯ ವೊಲುಮ್ನಿಯಸನೆ ಒಂದು ಮಾತನ್ನು ಕೇಳು.
ವೊಲುಮ್ನಿಯಸ್ – ಏನದು? ನನ್ನ ಪ್ರಭುವೆ!
ಬ್ರೂಟಸ್ — ಏಕೆ? ಅದಕ್ಕೆ ವೊಲುಮ್ನಿಯಸ್, ನಾನು ಸಾರ್ಡಿಸ್‌ನಲ್ಲಿ ಇದ್ದಾಗ ಒಮ್ಮೆ, ಕಳೆದ ರಾತ್ರಿಯಲಿ ಇಲ್ಲೇ ಫಿಲಿಪ್ಪಿ ಮೈದಾನದಲಿ ಎಂದು ಕೆಲವು ಸಲ ಸೀಸರನ ಪ್ರೇತವು ನನ್ನ ಮುಂದೆ ಕಾಣಿಸಿಕೊಂಡಿತು; ನನ್ನ ಅಗಲುವಿಕೆಯ ಕಾಲ ಸನ್ನಿಹಿತವಾಗಿದೆಯೆಂದು ನನಗೆ ಗೊತ್ತು!
ವೊಲುಮ್ನಿಯಸ್ – ಹಾಗಲ್ಲ, ನನ್ನ ಪ್ರಭುವೆ!
ಬ್ರೂಟಸ್ — ಅದು ನಿಶ್ಚಯವಾಗಿ ಸರಿ, ವೊಲುಮ್ನಿಯಸ್. ಲೋಕ ಹೇಗಿದೆಯೆಂದು ನೋಡು, ವೊಲುಮ್ನಿಯಸ್, ಅದೆಂತು ಸಾಗುತ್ತಿದೆ! ನಮ್ಮ ವಿರೋಧಿಗಳು ನಮ್ಮನ್ನು ಗುಂಡಿಯೊಳಗೆ ದಬ್ಬುವವರೆಗೂ ಹಿಂಬಾಲಿಸಿರುವರು.
(ಭಯಸೂಚಕ ಧ್ವನಿ ; ಮೆತ್ತಗೆ)
ಆ ಕಾರಣದಿಂದ ಅವರು ನಮ್ಮನ್ನು ಅದರೊಳಗೆ ದೂಡುವುದಕ್ಕೆ ಮುಂಚೆ ನಾವಾಗಿಯೇ ಅದರೊಳಗೆ ಹಾರುವುದೇ ಉತ್ತಮವು; ನಾವು ಹಿಂದೆ ಒಟ್ಟಿಗೆ ಶಾಲೆಗೆ ಹೋದವರೆಂದು ನಿನಗೆ ಗೊತ್ತಿದೆ;

ನಮ್ಮ ಆ ಹಳೆ ಪ್ರೀತಿ ಮತ್ತು ಗೆಳೆತನವನ್ನು
ಗಮನಿಸಿ ಇದೀಗ ಈ ಖಡ್ಗವನು ನೀನು ಹಿ
ಡಿದಿರುವುದೆಂದು ಕೇಳುವೆನು; ನಾನು ಅದರಮೇಲೆರ
ಗಿ ಹಾರಿ ಅದನ್ನು ನನ್ನೊಳಗೆ ಅದ್ದುವೆನು.

ವಲುಮಿನ್ಯಸ್ — ಅದು ಓರ್ವ ಮಿತ್ರನಿಗೆ ತಗಬೇಕಾದಂಥ ಕೆಲ
ಸವಲ್ಲ, ನನ್ನ ಪ್ರಭುವೆ!

(ಭಯಸೂಚಕ ಧ್ವನಿ ಮುಂದುವರಿಯುವುದು.)

ಕ್ಲಿಟಸ್ — ನನ್ನ ಪ್ರಭುವೆ, ಓಡಿ! ಇದೋ ಓಡು; ಇಲ್ಲಿ ನಾ
ವು ನಿಲ್ಲುವಂತಿಲ್ಲ.

ಬ್ರೂಟಸ್ — ನಿಮಗೆಲ್ಲರಿಗು ಶುಭವಿನಿಸಲಿ! ನಿನಗೆ ಮತ್ತು ವ
ಲುಮಿನ್ಯಸ್ ನಿನಗೂ ನಮಸ್ಕಾರಗಳು. ಸ್ಟ್ರೇ
ಟೋ, ನೀನು ಬಹು ಹೊತ್ತು ನಿದ್ರಿಸಿದೆ. ನಮಸ್ಕಾ
ರ; ದೇಶೀಯರೇ, ನನ್ನ ಹೃದಯವು ಸಂತೋಷ
ದಿಂದ ತುಂಬಿದೆ. ನನ್ನ ಇಡೀ ಜೀವನದಲ್ಲಿ
ಬಹು ನಿಷ್ಠೆಯುಳ್ಳ ಮಿತ್ರನು ಅವನೊಬ್ಬನಿದ್ದನ
ಲ್ಲದೆ ಇತರರು ಯಾರೂ ಇಲ್ಲ; ಒಕ್ಟೇವಿಯಸನು
ಮತ್ತು ಮಾರ್ಕ್ ಆಂಟೋನಿಯು ಈ ಅನಿಷ್ಟಕರ ಜಯ
ದಿಂದ ಪಡೆಯುವ ತೃಪ್ತಿಗಿಂತ ಹೆಚ್ಚಿನ ಕೀರ್ತಿ
ಯನು ನಾನು ನನ್ನ ಅಪಜಯದಿಂದ ಪಡೆಯುವೆನು;
ಆದ್ದರಿಂದ ನಿಮಗೆಲ್ಲ ಮಂಗಳವಾಗಲಿ; ಇ
ದೀಗ ಬ್ರೂಟಸನ ನಾಲಗೆಯು ಅವನ ಜೀವನ
ಚರಿತ್ರೆಯನು ಕೊನೆಗೊಳಿಸಿದಂತಾಗಿದೆ; ನನ್ನ
ಕಣ್ಣುಗಳಲ್ಲಿ ಕತ್ತಲೆ ಆವರಿಸಿದೆ; ನನ್ನ
ಮೂಳೆಗಳು ವಿಶ್ರಮಿಸಲು ಬಯಸುವುವಾದರೆ ಇದೀ
ತಾಸನಲಿ ಕಾರ್ಯಕ್ಕೆಗೂಡ ಬೇಕಾಗಿದೆ!

(ಒಳಗೆ ಭಯಸೂಚಕ ಧ್ವನಿ. ಓಡಿರಿ,
ತೊಲಗಿರಿ ಎಂಬ ಕೂಗು.)

ಕ್ಲಿಟಸ್ — ನನ್ನ ಪ್ರಭುವೆ, ತೊಲಗಿರಿ, ಹಾಯಿರಿ.

ಬ್ರೂಟಸ್ — ಇನ್ನು ಮುಂದೆ ನಾನು ಹಿಂಬಾಲಿಸುವೆನು.

(ಕ್ಲಿಟಸ್, ಡಾರ್ಡನ್ಯಸ್ ಮತ್ತು ವಲುಮಿ
ನ್ಯಸ್ ಇವರು ಹೋಗುವರು.)

ಎಲಾ ಸ್ಟ್ರೇಟೋ, ನೀನು ನಿನ್ನ ಪ್ರಭುವಿನ ಬಳಿಯೆ
ಇರುವೆಯೆಂದು ಕೇಳಿಕೊಳ್ಳುವೆನು. ನೀನು ಸದಭಿ
ಮಾನಿ ವ್ಯಕ್ತಿ; ಸನ್ಮಾನ್ಯತೆಯ ಕಣವೂ ನಿನ್ನ

ಜೀವನದಂತೆ ಇದೆ; ಹಾಗಿರಲು ನನ್ನ ಕೈ ಕ
ತ್ತಿಯನು ಬಲವಾಗಿ ಹಿಡಿ; ನಾನು ಅದಕ್ಕೆದುರಾಗಿ
ವೇಗವಾಗಿ ಹಾಯುತ್ತೇನೆ ತಕ್ಷಣ ತಿವಿಯುವೆ
ಆಗ ನೀನು ಮುಖವನ್ನು ಆ ಕಡೆ ತಿರುಗಿಸಿಕೋ!
ನೀನು ಅಂತೆಯೇ ಮಾಡುವೆಯಾ, ಸ್ಟ್ರಾಟೋ?

ಸ್ಟ್ರಾಟೋ — ನಿನ್ನ ಕೈಯನ್ನು ಮೊದಲು
ನೀಡು! ನನ್ನ ಪ್ರಭು ... ನಿನಗೆ ಒಳ್ಳೆಯದಾಗಲಿ!

ಬ್ರೂಟಸ್ — ಶುಭವಾಗಲಿ ನಿನಗೆ, ಪ್ರಿಯ ಸ್ಟ್ರಾಟೋ!
ಸೀಸರನೆ, ಈಗ ಮೌನವಿರು. ನಾನು ನಿನ್ನನು ಕೊಲ್ಲುವಾ
ಗ ನನ್ನೀ ಸದುದ್ದೇಶದ ಅರ್ಧದಷ್ಟು ಸಹ
ನನ್ನಲ್ಲಿ ಆಗ ಇರಲಿಲ್ಲ!

(ಖಡ್ಗದ ತಿವಿತಕ್ಕೆ ಒಳಗಾಗಿ ಸಾಯುವನು.)

(ಜಯಸೂಚಕ ಧ್ವನಿ — ಒಕ್ಟೇವ್ಯಸ್, ಆಂತೊನಿ
ಮತ್ತು ಸೈನ್ಯ; ಮೆಸ್ಸಲಾ ಮತ್ತು ಲುಸಿಲ್ಯಸ್ ಹಾಗು
ಸೆರೆಯಾಳುಗಳ ಪ್ರವೇಶ!)

ಒಕ್ಟೇವ್ಯಸ್ — ಅದಾವನು ಅಲ್ಲಿ?

ಮೆಸ್ಸಲಾ — ನನ್ನ ಪ್ರಭುವಿನ ಸೇವಕ, ಸ್ಟ್ರಾಟೋ, ನಿನ್ನ ಪ್ರ
ಭುವು ಎಲ್ಲಿ?

ಸ್ಟ್ರಾಟೋ — ನೀನಿರುವ ದಾಸ್ಯದಿಂದ ಮುಕ್ತನು ಅವನು, ಮೆ
ಸ್ಸಲಾ! ಜಯಶೀಲಿಗಳು ಅವನನ್ನು ಅಗ್ನಿಯಲ್ಲಿ
ಉರಿಸಲಿ; ಬ್ರೂಟಸನು ತನ್ನನ್ನು ತಾನೇ ಬಿ
ಡಿಸಿಕೊಂಡನು. ಅವನ ಮರಣದಿಂದ ಯಾರೊಬ್ಬ
ನೂ ಗೌರವಕ್ಕೆ ಒಳಗಾಗಲಿಲ್ಲ;

ಲುಸಿಲ್ಯಸ್ — ಸರಿ, ಬ್ರೂಟಸನು ಎಲ್ಲಿರುವನೆಂದು ನೋಡಬೇಕಿ
ತ್ತು; ಲುಸಿಲ್ಯಸನ ಹೇಳಿಕೆ ಸತ್ಯವೆಂಬುದನು
ಮಾಡಿ ತೋರಿಸಿದೆ; ನಿನಗೆ ವಂದನೆಗಳು, ಬ್ರೂಟಸ್!

ಒಕ್ಟೇವ್ಯಸ್ — ಬ್ರೂಟಸನ ಸೇವೆಯನು ಮಾಡಿದವರನ್ನೆಲ್ಲ
ನಾನು ಸತ್ಕರಿಸುವೆನು; ಸಖನೆ, ನನ್ನೊಡನೆ ನೀ
ನು ಸ್ವಲ್ಪ ಸಮಯವನು ಕಳೆಯಲೊಪ್ಪುವೆಯಾ?

ಸ್ಟ್ರಾಟೋ — ಹಾ, ಮೆಸ್ಸಲಾನು ಅದಕ್ಕೆ ಒಪ್ಪುವುದಾದರೆ.

ಒಕ್ಟೇವ್ಯಸ್ — ಪ್ರಿಯ ಮೆಸ್ಸಲಾ, ಹಾಗೇ ಮಾಡು.

ಮೆಸ್ಸಲಾ — ನನ್ನ ಪ್ರಭು ಹೇಗೆ ಮೃತನಾದ, ಸ್ಟ್ರಾಟೋ?

ಸ್ಟ್ರಾಟೋ — ನಾನು ಖಡ್ಗವನು ಗಟ್ಟಿಯಾಗಿ ಹಿಡಿದುಕೊಂಡೆ
ನು; ಅವನು ಅದಕ್ಕೆದುರಾಗಿ ತಕ್ಷಣ ಧಾವಿ

- ನಿ ಬಿದ್ದನು!

ಮೆಸ್ಸಾಲ — ಹಾಗಾದರೆ, ಒಕ್ಟೇವ್ಯಸ್, ಇವನನು ನಿನ್ನೊಡನೆ ಕರೆದುಕೋ. ಅವನು ನನ್ನ ಪ್ರಭುವಿಗೆ ಕೊನೆಯ ದಿನದ ಸೇವೆ ಆದಂತಾಯಿತು!

ಆಂತೋನಿ — ಅವರೆಲ್ಲರಿಗಿಂತಲು ಇವನೇ ಬಹು ಶ್ರೇಷ್ಠನೆಂದೆನಿಸಿದ ರೋಮಿನ ವೀರನು. ಇವನೊಬ್ಬನು ಅಲ್ಲದೆ ಉಳಿದ ಒಳಸಂಚುಗಾರರು ಪ್ರಖ್ಯಾತ ಸೀಸ್ಸರನನು ಕೇವಲ ಮತ್ಸರದಿಂದಲೆ ಕೊಂದರು; ಇವನೊಬ್ಬನೆ ಇಡೀ ದೇಶದ ಹಿತವನು ಸಮಷ್ಟಿದೃಷ್ಟಿಯಿಂದ ಪರಿಗಣಿಸಿದ್ದವನು; ಅವನ ಜೀವನವೂ ಸೌಮ್ಯವೂ ಮಾನ್ಯವೂ ಆಗಿತ್ತು! ಪಾಂಚಭೌತಿಕ ಸಮ ಸಾತ್ವಿಕ ವಿಷಯಗಳವನಲ್ಲಿ ಬೆರೆತಿರಲು ಪ್ರಕೃತಿಯೇ ಎದ್ದು ನಿಂತು "ಇವನೊಬ್ಬ ಮಾನವ" ಎಂದು ಇಡೀ ಜಗತ್ತಿಗೆ ಸಾರುತ್ತಿರಬಹುದು!

ಒಕ್ಟೇವ್ಯಸ್ — ಈಗ ನಾವು ಅವನ ಸ್ಥಾನಮಾನಕ್ಕೆ ತಕ್ಕಯಾಗಿ ಅವನ ಶವ ಸಂಸ್ಕಾರಗಳನು ಗೌರವದಿಂದ ನೆರವೇರಿಸುವ! ಅವನ ಶವವು ಈ ರಾತ್ರಿ ನನ್ನ ಶಿಬಿರದೊಳಗಿರಲಿ. ಧೀರ ಸೇನಾನಿಗೆ ಸಲ್ಲುವ ಸನ್ಮಾನವನು ಅವನಿಗೂ ಸಲ್ಲಿಸುವ; ಈಗ ನಮ್ಮ ಸೈನಿಕರನ್ನೆಲ್ಲ ವಿಶ್ರಮಿಸುವಂತೆ ಹೇಳಿರಿ. ಇನ್ನೀಗ ನಾವು ಈ ಸಂತೋಷದ ದಿನದಲ್ಲಿ ಪಡೆದ ಗೆಲುವನು ಹಂಚಿಕೊಳ್ಳಲೆಂದು ಹೋಗುವ!

(ಹೋಗುವರು)

878

ಜೂಲಿಯಸ್ ಸೀಸರ್.

(ವಿಲ್ಲಿಯಮ್ ಷೇಕ್ಸ್‌ಪಿಯರ್ ಮಹಾಕವಿಯ
“ಜೂಲಿಯಸ್ ಸೀಸರ್” ನಾಟಕದ ಭಾಷಾಂತರ.)

[ಲಘು ಟಿಪ್ಪಣಿ ಸಮೇತವಾಗಿ]

ಡಿ. ಎಸ್. ಎಚ್ಚತ್ತೇಗ್ಗಾ.

(ಎಲ್ಲಾ ಹಕ್ಕುಗಳೂ ಕಾದಿರಿಸಲ್ಪಟ್ಟಿವೆ)

1987.

888

"Whether in the individual or the nation, all vital progress must spring from within and, it is you, her most cultured and enlightened minds, her most favoured sons, that your country must look for the initiative. In vain many aliens, like myself, love India and her children--------but the real work must ever be done by the people of the country themselves. As I said before, you are the salt of the land. And if amongst even you, the elite, fifty men cannot be found with sufficient love for and pride in their country, sufficient power of self-sacrifice, sufficient genuine and unselfish heartfelt patriotism to take the initiative, and if need be, devote the rest of their lives to the Cause, then there is no hope for India. Her sons must and will remain more humble and helpless instruments in the hands of foreign rulers, for, if they should be free, themselves must strike the blow---------.

"Every nation secures precisely as good a government as it merits. If you, the picked men, the most highly educated of the nation, cannot, scorning personal ease and selfish objects, make a resolute struggle to secure greater freedom for yourselves and your country--------Let there be no complaints of Englishmen being preferred to you in all important offices, for if you lack that public spirit, that highest form of altruistic devotion that leads men to subordinate private ease to the public weal, that true patriotism that has made Englishmen what they are- then rightly and inevitably have they become your rulers. And rulers and taskmasters they must continue--------until you realise and stand prepared to act upon the eternal truth that, and unselfishness, are the only unfailing guides to freedom and happiness." 7.

This was the clarion call of Sir Allan O. Hume, a civil servant, turned Indian nationalist. He had some other European supporters and those 'half-a-dozen leading men infused nationalism to Indians' and those were once called 'misguided' by Valentine Chirol, in his book- INDIAN UNREST. He said that: 8.

"It was in the polemical tracts of European writers that the first protagonists of Hindu reaction against Christian influence found their readiest weapons of attack."

With the support that Allan O.Hume received after his nation-wide appeal to join him in the struggle for freedom of India, the first session of the Indian National Congress was held at Bombay in I885, with W.C.Benerjie presiding over the deliberations. The delegates were 'the leading politicians well-acquainted with the English language', and the objectives of the conference were to enable all those earnest labourers in the cause of national progress to become personally known to each other, and to discuss and decide upon the political operations to be undertaken during the ensuing year. 9.

Hume's original intention had been for the Congress to discuss social rather than political matters, and that was what all the top-ranking European statesmen who had known the Indian conditions had intended it to be. Lord Dufferin, the Viceroy of India, and Aukland Colvin, Governor of the then United Provinces, sent their messages wishing the deliberations a success. The Viceroy's letter said that: I0.

"Great Britain had given India order; she had given railways and above all, she had given them the unestimable blessing of western education. But a great deal still remains to be done."

---

7. Sir Allan Hume's appeal to the Calcutta graduates- I883-84.
8. Francis G.Hutchins- British Imperialism in India, P.I9I.
9. Sir P.Griffiths- The British Impact of India- P. 200.
I0. The Viceroy's message to the first Congress Sessions- in I885.